

ಕೇಶವ್ ಕಾರ್ಟೂನ್ ಜಗತ್ತಿನೊಳಗೊಂದು ಸುತ್ತು





ಮಂಜುಶ್ರೀ ಎಂ. ಕಡಕೋಳ


ಕೇಶವ್ ವೆಂಕಟರಾಘವನ್


ಪತ್ರಿಕಾ ವರದಿಯೊಂದು ನೂರು ಪದಗಳಲ್ಲಿ ಹೇಳುವ ಸಂಗತಿಯನ್ನು ವ್ಯಂಗ್ಯಚಿತ್ರವೊಂದು ಕೆಲವೇ ಗೆರೆಗಳಲ್ಲಿ ಹೇಳಬಲ್ಲದು. ಹಾಗಾಗಿ, ಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಗಳಿಗೆ ಇಂದಿಗೂ ಕಾಯಂ ಸ್ಥಾನ. ಸುತ್ತಮುತ್ತ ನಡೆಯುವ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸುವ ವ್ಯಂಗ್ಯಚಿತ್ರಕಾರ, ಅದನ್ನು ಅಷ್ಟೇ ಸೂಕ್ಷ್ಮವಾಗಿ, ಸೃಜನಶೀಲವಾಗಿ ತನ್ನ ಗೆರೆಗಳಲ್ಲಿ ಚಿತ್ರಿಸಬಲ್ಲ. ಎಷ್ಟೋ ಬಾರಿ ವರದಿಯೊಂದು ಬೀರಬಹುದಾದ ತೀವ್ರ ಪರಿಣಾಮವನ್ನು ವ್ಯಂಗ್ಯಚಿತ್ರದ ಮೊನಚು ಗೆರೆಯೊಂದೇ ಬೀರಬಲ್ಲದು.

ವ್ಯವಸ್ಥೆಗೆ ಚುರುಕು ಮುಟ್ಟಿಸಬಲ್ಲ ಭಾರತೀಯ ವ್ಯಂಗ್ಯಚಿತ್ರಕಾರರಲ್ಲಿ ಕೇಶವ್ ವೆಂಕಟರಾಘವನ್ ಅವರ ಹೆಸರು ಮಹತ್ವದ್ದು. ವ್ಯಂಗ್ಯಚಿತ್ರದ ಮೇಲಿನ ಮೋಹಕ್ಕಾಗಿಯೇ ಕೈತುಂಬಾ ಸಂಬಳ ತರುವ ಬ್ಯಾಂಕಿನ ನೌಕರಿಗೂ ಗುಡ್ ಬೈ ಹೇಳಿದವರು ಅವರು. ತಮಿಳು ವಾರಪತ್ರಿಕೆ 'ಆನಂದ ವಿಕಟನ್' ಮೂಲಕ ವೃತ್ತಿಜೀವನ ಆರಂಭಿಸಿದ ಅವರು, ಮುಂದೆ 'ದ ಹಿಂದೂ' ಪತ್ರಿಕೆಯಲ್ಲಿ ಹಲವು ವರ್ಷಗಳ ಕಾಲ ತಮ್ಮ ವ್ಯಂಗ್ಯಚಿತ್ರಗಳ ಮೂಲಕ ಓದುಗರ ಮನದಲ್ಲಿ ಸ್ಥಾನ ಪಡೆದವರು. ದಶಕಗಳ ಕಾಲ ಗೆರೆಗಳೊಂದಿಗೆ ಕಳೆದ ಒಡನಾಟದಲ್ಲಿ ಅವರು ಕಲಿತದ್ದು ಅಪಾರ. ತಮ್ಮ ವ್ಯಂಗ್ಯಚಿತ್ರಗಳ ಮೂಲಕವೇ ಜನಸಾಮಾನ್ಯರ ನೋವು–ನಲಿವುಗಳಿಗೆ ದನಿಯಾದ ಸಂತೃಪ್ತಿ ಅವರದ್ದು.

ಹರಿಪ್ರಸಾದ್ ಚೌರಾಸಿಯಾ

ವ್ಯಂಗ್ಯಚಿತ್ರಕಾರನೊಬ್ಬ ಗೆರೆಗಳ ಮೂಲಕ ಓದುಗರ ಮನಸನ್ನು ನಾಲ್ಕೈದು ಸೆಕೆಂಡುಗಳಷ್ಟು ಕಾಲ ಹಿಡಿದಿಟ್ಟುಕೊಳ್ಳುವುದು ಸುಲಭವಲ್ಲ. ಕೆಲವೇ ಗೆರೆಗಳ ಮೂಲಕವೇ ಜನಸಾಮಾನ್ಯರ ಒಳತುಡಿತ, ರಾಜಕಾರಣದ ನಾಡಿಮಿಡಿತ ಎರಡನ್ನೂ ಸಮರ್ಥವಾಗಿ ಒಡಮೂಡಿಸುವ ಕಲೆ ಸಿದ್ಧಿಸುವುದು ಸುಲಭವೂ ಅಲ್ಲ. ಅದಕ್ಕಾಗಿ ವ್ಯಂಗ್ಯಚಿತ್ರಕಾರನೊಬ್ಬ ಇಡೀ ದಿನದ ಸುದ್ದಿ, ವಿದ್ಯಮಾನವನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು. ನಿತ್ಯದ ರಾಜಕೀಯ, ಸಾಮಾಜಿಕ, ಆರ್ಥಿಕ ಬೆಳವಣಿಗೆಯ ಮೇಲೆ ನಿಗಾ ವಹಿಸುತ್ತಲೇ ಮನದಲ್ಲಿ ಅದನ್ನು ಚಿತ್ರಿಸುವ ಬಗ್ಗೆಯೂ ಯೋಚಿಸಬೇಕು. ಬರೆವ ಗೆರೆಗಳಲ್ಲಿ ಕೌಶಲವೂ ಇರಬೇಕು. ಗೆರೆಗಳಲ್ಲಿ ಒಂದಿಷ್ಟು ಓರೆ ಕೋರೆಯಾದರೂ ಅದರ ಧ್ವನಿ ಬೇರೆಯೇ ಆಗಿಬಿಡುತ್ತದೆ. ಹಾಗಾಗಿ, ವ್ಯಂಗ್ಯಚಿತ್ರಕಾರನ ಜವಾಬ್ದಾರಿ ದೊಡ್ಡದು ಎನ್ನುವ ಅಭಿಪ್ರಾಯ ಅವರದ್ದು.

ಕೇಶವ್ ವೆಂಕಟರಾಘವನ್ ಅವರ ಕಪ್ಪುಬಿಳುಪಿನ ಸರಳ ಗೆರೆಗಳಲ್ಲಿ ರಾಜಕಾರಣಿಗಳಾದ ಜಯಲಲಿತಾ, ಸೋನಿಯಾ, ಮನಮೋಹನ ಸಿಂಗ್ ಅವರಷ್ಟೇ ಅಲ್ಲ ಸಂಗೀತ ಲೋಕದ ದಿಗ್ಗಜರಾದ ಬಾಲಮುರಳಿ ಕೃಷ್ಣ, ಪಂ. ಹರಿಪ್ರಸಾದ್ ಚೌರಾಸಿಯಾ ಅವರೂ ಇದ್ದಾರೆ. ಷೇರುಪೇಟೆಯ ಗೂಳಿ ಬಂಡವಾಳಗಾರರ ನಿರೀಕ್ಷೆಯನ್ನೂ ಮೀರಿ ಹಾರುವ, ನ್ಯಾಯಾಂಗ ವ್ಯವಸ್ಥೆ ಹಿಡಿದಿರುವ ಹಾದಿ, ದಿನೇದಿನೇ ಕಾವೇರುತ್ತಿರುವ ಭೂಮಿಗೂ ದಾಹ ತಪ್ಪಿದ್ದಲ್ಲ... ಹೀಗೆ ಒಂದೊಂದು ವಿದ್ಯಮಾನಕ್ಕೂ ಅವರ ವ್ಯಂಗ್ಯಚಿತ್ರಗಳು ಕನ್ನಡಿ ಹಿಡಿದಿವೆ.



ಬಾಯಾರಿದ ಭೂಮಿ

2019ರಲ್ಲಿ ನಿವೃತ್ತಿಯಾದ ಬಳಿಕ ಕೇಶವ್ ಅವರು 'ಕೃಷ್ಣ ಫಾರ್ ಟುಡೇ' (krishna for today) ಹೆಸರಿನಲ್ಲಿ ಸ್ವಂತದ್ದೊಂದು ವೆಬ್ ಸೈಟ್ ಮಾಡಿಕೊಂಡು, ಕೃಷ್ಣನ ವಿವಿಧ ಕಲಾಕೃತಿಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಬೆಂಗಳೂರಿನ ಚಿತ್ರಕಲಾ ಪರಿಷತ್ ಸೇರಿದಂತೆ ವಿವಿಧೆಡೆ ವ್ಯಂಗ್ಯಚಿತ್ರಗಳನ್ನು ಪ್ರದರ್ಶಿಸಿರುವ ಕೇಶವ್ ವೆಂಕಟರಾಘವನ್ ಅವರು ಈ ಬಾರಿಯ ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯ 'ಬಾರ್ಟನ್ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ. ಜುಲೈ 6ರಂದು ನಡೆಯುವ ಸಮಾರಂಭದಲ್ಲಿ ಬಾಟರ್ನ್ಸ್ ಎಂ.ಡಿ ಭರತ ಮೆಹ್ತಾ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಅಂದು ನಡೆಯುವ ಅವರ ವ್ಯಂಗ್ಯಚಿತ್ರಗಳ ಪ್ರದರ್ಶನವನ್ನು ಅಮರನಾಥ್ ಕಾಮತ್ ಅವರು ಉದ್ಘಾಟಿಸಲಿದ್ದಾರೆ.
ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ನಂ. 1, ಮಿಡ್‌ಫೋರ್ಡ್ ಗಾರ್ಡನ್, ಟ್ರಿನಿಟಿ ವೃತ್ತ, ಎಂ.ಜಿ. ರಸ್ತೆ. ಜುಲೈ 6ರಿಂದ 20ರವರೆಗೆ ಪ್ರದರ್ಶನ ಇರಲಿದೆ.
ಸಮಯ: ಬೆಳಿಗ್ಗೆ 10ರಿಂದ ಸಂಜೆ 6 (ಭಾನುವಾರ ಮತ್ತು ಸಾರ್ವಜನಿಕ ರಜೆ ಹೊರತುಪಡಿಸಿ)

ಇಂದು ಪೌರಾಣಿಕ ಯಕ್ಷಗಾನ



ಪೆರ್ಡೂರು ಮೇಳ ಮತ್ತು ಅತಿಥಿ ಕಲಾವಿದರಿಂದ ಜುಲೈ 6ರಂದು ಶನಿವಾರ ರಾತ್ರಿ 10ಗಂಟೆಗೆ ಪೌರಾಣಿಕ ಯಕ್ಷಗಾನ ಪ್ರದರ್ಶನ ನಡೆಯಲಿದೆ.

- **ಪ್ರಸಂಗಗಳು ಹೀಗಿವೆ:** ವಿರಾಟ ಪರ್ವ, ಪಾರಿಜಾತ, ಶ್ರೀರಾಮದರ್ಶನಂ. ಭಾಗವಹಿಸುವ ಕಲಾವಿದರು. **ಹಿಮ್ಮೇಳದಲ್ಲಿ:** ಕೊಳಗಿ ಕೇಶವ ಹೆಗಡೆ, ರಾಘವೇಂದ್ರ ಆಚಾರ್ಯ, ರಾಮಕೃಷ್ಣ ಹೆಗಡೆ ಹಿಲ್ಲೂರು, ಪ್ರಸನ್ನಭಟ್
- **ಮುಮ್ಮೇಳದಲ್ಲಿ:** ತೋಟಿಮನೆ ಗಣಪತಿ ಹೆಗಡೆ, ರಾಮಚಂದ್ರ ಹೆಗಡೆ ಕೊಂಡದಕುಳಿ, ಸುಬ್ರಹ್ಮಣ್ಯ ಹೆಗಡೆ ಯಲಗುಪ್ಪ, ಸೀತಾರಾಮಕುಮಾರ್ ಕಟೀಲು, ಸಂತೋಷ್ ಕುಲಾಲ್ ಹೆಂಗವಳ್ಳಿ, ಶ್ರೀಧರ್ ಕುಡ್ಲ, ಉದಯ ಕಡಬಾಳ, ಕಾರ್ತಿಕ್ ಚಿಟ್ಟಾಣಿ, ಪ್ರಕಾಶ್ ಕಿರಾಡಿ, ಸುಧೀರ್ ಉಪ್ಪೂರು, ಜಾಗನಳ್ಳಿ ನಿರಂಜನ, ದರ್ಶನ್ ಭಟ್, ರವೀಂದ್ರ ದೇವಾಡಿಗ, ವಿನಯ್ ಭಟ್ ಬೆರೂಳ್ಳಿ, ಕಾರ್ತಿಕ್ ಕಣ್ಣಿಮನೆ, ಪವನ್ ಹೆಗಡೆ ಸಾಣ್ಮನೆ, ಮಾಗೋಡು ಅಣ್ಣಪ್ಪ, ಶ್ರೀಧರ್ ಕುಡ್ಲ, ಸಂತೋಷ್ ಕುಲಾಲ್, ಪುರಂದರ ಮೂಡ್ಕಣಿ.



ಸ್ಥಳ: ರವೀಂದ್ರ ಕಲಾಕ್ಷೇತ್ರ. **ಸಂಪರ್ಕ:** ನೈಲಾಡಿ ಪ್ರಕಾಶ ಶೆಟ್ಟಿ. 99723 68637


9ರಿಂದ ಮಾರಮ್ಮ ದೇವಿಯ ಜಾತ್ರೆ

ಕೋಟೆ ಶ್ರೀ ಮಾರಮ್ಮ ದೇವಸ್ಥಾನದ ಅನ್ನದಾನ ಸಮಿತಿಯಿಂದ ಜುಲೈ 9ರಿಂದ 13ರವರೆಗೆ 46ನೇ ವರ್ಷದ ಅದ್ದೂರಿ ರಜತ ಮಹೋತ್ಸವ ನಡೆಯಲಿದ್ದು, ಕೋಟೆ 'ಇ' ಬೀದಿಯಲ್ಲಿರುವ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ದೇವಿಗೆ ಮಹಾಭಿಷೇಕ, ರಜತ ಕವಚ ಅಲಂಕಾರ, ಪುಷ್ಪ ಅಲಂಕಾರ ನಡೆಯಲಿದೆ. ಶಿವು ಮೆಲೋಡಿಸ್ ತಂಡದಿಂದ ವಾದ್ಯಗೋಷ್ಠಿ ಏರ್ಪಡಿಸಲಾಗಿದೆ. 13ರಂದು ದೇವಿಗೆ ಅರಿಶಿನ–ಕುಂಕಮ ಅಲಂಕಾರ, ಮಹಾಮಂಗಳಾರತಿ ಹಾಗೂ ಅನ್ನಸಂತರ್ಪಣೆ ನಡೆಯಲಿದೆ. ರಾಜಬೀದಿಗಳಲ್ಲಿ ಪುಷ್ಪಾಲಂಕೃತ ಪಲ್ಲಕ್ಕಿಯಲ್ಲಿ ದೇವಿಯ ಮೆರವಣಿಗೆ ನಡೆಯಲಿದೆ.




ನವ್ರೋಜ್ ಕಂಟ್ರಾಕ್ಟರ್ ಛಾಯಾಚಿತ್ರಗಳ ಪ್ರದರ್ಶನ 7ರವರೆಗೆ



ಪ್ರಸಿದ್ಧ ಹಿಂದಿ ಸಿನಿಮಾಟೋಗ್ರಾಫರ್ ದಿವಂಗತ ನವ್ರೋಜ್ ಕಂಟ್ರ್ಯಾಕ್ಟರ್ ಅವರು ಸೆರೆಹಿಡಿದ ಛಾಯಾಚಿತ್ರಗಳ ಪ್ರದರ್ಶನ ಜುಲೈ 7ರವರೆಗೆ ನಡೆಯಲಿದೆ. ನವ್ರೋಜ್ ಅವರ ಜೀವಿತಾವಧಿಯಲ್ಲಿ ಸೆರೆ ಹಿಡಿದ ಅತ್ಯಪೂರ್ವ ಛಾಯಾಚಿತ್ರಗಳ ಸಂಗ್ರಹ ಇದಾಗಿದ್ದು, ಈ ಛಾಯಾಚಿತ್ರಗಳನ್ನು ಸಂಗ್ರಹಿಸುವಲ್ಲಿ ಸಂಜೀವ್ ಶಾ, ಅನುಷ್ ಅಂಬಲಾಲ್ ಹಾಗೂ ಹಿಮಾಂಶು ಪಾಂಚಲ್ ಅವರ ಶ್ರಮವಿದೆ. 60 ವರ್ಷಗಳ ವೃತ್ತಿಯಲ್ಲಿ ಸುಮಾರು 20 ಸಾವಿರ ಛಾಯಾಚಿತ್ರಗಳಲ್ಲಿ ವಿವಿಧ ಕಥನ ಹೇಳುವ ನವ್ರೋಜ್ ಅವರ ಅತ್ಯಪೂರ್ವ ಛಾಯಾಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿದೆ. ಈವರೆಗೆ ಎಲ್ಲಿಯೂ ಪ್ರದರ್ಶನಗೊಳ್ಳದ ಹಲವು ಛಾಯಾಚಿತ್ರಗಳಿವೆ.
ಕಾರ್ಯಕ್ರಮ ನಡೆಯುವ ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು 2ನೇ ಹಂತ. ಬೆಳಿಗ್ಗೆ 11ರಿಂದ

ನೃತ್ಯ ಕಾರ್ಯಕ್ರಮ ಇಂದು


ಶ್ರೇಯಾ ಭಟ್

ಅಕಾಡೆಮಿ ಆಫ್ ಮ್ಯೂಸಿಕ್ (ರಿ) ಚೌಡಯ್ಯ ಸ್ಮಾರಕ ಭವನ ಅರ್ಪಿಸುವ ಜುಲೈ 6ರಂದು ಶನಿವಾರ ನೃತ್ಯ ಕಾರ್ಯಕ್ರಮ ನಡೆಯಲಿದೆ. ಭರತನಾಟ್ಯ- ಕುಮಾರಿ ಶ್ರೇಯಾ ಭಟ್ಟ, ನಟುವಾಂಗ -ಗುರು ಪುಲಕೇಶಿ ಕಸ್ತೂರಿ, ಗಾಯನ - ಹರಿಣಿ ಶ್ರೀಧರ ಮೃದಂಗ - ಪೃಥ್ವಿ ಕೃಷ್ಣ, ಕೊಳಲು- ಡಾ. ಸ್ಕಂದ ಕುಮಾರ ಮತ್ತು ಕಥಕ್ ನೃತ್ಯ: ಮುಕ್ತಿಶ್ರೀ .ಸಹಕಲಾವಿದರು: ಕಥಕ್ - ಆಯುಷಿ ದೀಕ್ಷಿತ್, ಅನ್ವಿ ಶ್ರೀ ತಬಲಾ- ಆಶಯ ಕುಲಕರ್ಣಿ, ಕೃಷ್ಣ ಸಾಲುಂಕೆ, ಗಾಯನ- ನಾಗೇಶ ಅಡ್ಗಾವಂಕರ್ ಹಾರ್ಮೋನಿಯಂ– ಅಭಿಷೇಕ ಶಿಂಕರ್. ಅತಿಥಿಗಳು: ಡಾ. ಆರ್ ವಿ ರಾಘವೇಂದ್ರ, ಅನನ್ಯ, ಬೆಂಗಳೂರು, ಜಿ ಎಸ್ ಹೆಗಡೆ, ಸಪ್ತಕ. ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್. ಸಂಜೆ 6ಕ್ಕೆ.



ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER

ಕ್ಲಾಸಿಫೈಡ್ಸ್

REAL ESTATE SELLING

Sites

Anjanapura

SALE BDA Anjanapura 5th G Block 30x40 S/F 95 lakh also 40x60 W/F 9th Block and 40x60 commercial site 40x60 E/F 80Ft Road 1st Block 9620041313, 9945373839

Uttarahalli

UTTARAHALLI GATED Layout , A'Khatha Site Sale, 40x61, North Rs.9950/-psft Negotioble : 9740150364, 8884707773

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BDA SITE FOR SALE @. BSK 6TH STAGE 7TH BLOCK 40x60 NORTH. IN GOOD LOCATION. 98455-55666

BSK 6TH Stage, 9th Block, 1600 Sqft S/W Corner 60ft Road and 10th Block 30x50 West Contact: 9945964049, 9663184766

SALE BSK 6th stage 4th B Block 40x60 west Facing 2Cr also 40x60 Facing 6th Block 1.90Cr and 20x30, 11th Block South facing, negotiable all owners site 9945373839, 9620041313

BANASHANKARI 6TH Stage, 4th 'T' Block, 30x40 site for sale. Contact:- 9844006666.

Basaweshwaranagar

SALE BASAVESHWARNAGAR Commercial, 40×60 South Rajajinagar East 50×80 Residential 40×60 West Contact: 9448273220/ 8660075308

Kanakapura Road

KANAKAPURA ROAD 10000 Square feet Conversion 30x40, 40x60, 50x80, BDA, BMRDA Sites For Sale: 9916817739

Kempegowda Layout

BDA KEMPEGOWDA layout. 50×80. 300 Feet Road Commercial Site. Owner. Contact. No. 9663005859/ 7899570235

"30X40 7TH-BLOCK, 30X50 RESIDENTIAL 50X80 COMMERCIAL BDA SITES SALE 6TH BLOCK KEMPEGOWDA LAYOUT"- 9845143579"

Sanjaynagar

RMV BHOOPASANDRA BDA Site 29'x57' East 40' Road, near Central excise, off Chawla Road Rs. 3.15Cr (@19k/Sft) Call: 9980555558

Vishweshwariah Layout

SMV LAYOUT 7th Block, 30x40 Sale, West Face BDA Allottee, Near Muddinapalya Circle. 9164089633, 9663226688.

SMV LAYOUT 6th Block, 20x30 Sale, North, BDA Allottee, Opposite KLE Law College. 9164089633, 9663226688.

DIRECT OWNER 30x40 and 40x60 BDA Sites Sale VISHVESWARAIAH LAYOUT, near 100 feet-road, SREENIDHI:9742681666

Arkavathi Layout

BDA-SITE FOR Sale Arkavathi Layout 15th Block 40x60. Jakkur Srirampura 5500sqft For Sale Call:7676900174 6363496142

BDA ARKAVATHY layout. 40×60. Near Manyatha Tech Park Owner Contact No: 9663005859/ 9731594565

Nagarabhavi

COMMERCIAL PROPERTY FOR SALE
8100 SQFT
LOCATION IN NAGARBHAVI 2ND STAGE, BANGALORE, OUTER RING ROAD
REAL ESTATE AGENTS NOT ALLOWED
Contact: 80500 64066

DC CONVERTED SITE SALE 50X80 EAST FACING BBMP A KATHA NEAR ULLAL RTO: 6366232222/ 6366242222

House

Basavanagudi

SALE 20X40 BDA Site with 3000Sft Building with Carparking. Rental income. Near Gandhi Bazar. 9845743555

Hanumanthnagar

15X45 HOUSE West-Facing at #36/B, 9th Main, Hanumanthanagar, (Behind Brahmins Coffee), Clear titles. Contact Owner- 9886798182

J P Nagar

SALE J.P.NAGAR 5TH PHASE 30x40 RESIDENTIAL PROPERTY NORTH FACING EXCELLENT LOCATION 2.75 CRORE SUNIL: 9845173427 9845232711

Kanakapura Road

SALE INDEPENDENT Duplex 3BHK`Villa Gated`Community @ NANDA PRAKRUTHI off Kanakapura Road 30x50`East Facing With`Wardrobe Kitchentte Fans Geysers-Lights Grill`Work Car-garage 1.35crore Negotiable Roopa: 8546948484.

Magadi Road

KAMAKSHIPALYA 15X50SFT E/F "A" KHATA 5FLOORS BUILDING 1 BHK 8 HOUSES + 1 SHOP GETTING 51,000/- RENT Rs.1Cr 8Lakh NEGOTIABLE: 9845288310

Nagarabhavi

"SALE: 4BHK Duplex House ₹3.25`Crore, Ground floor old-house ₹2.50`Crore and`3BHK ₹1.10`Crore. Nagarabhavi near Papareddypalya, Deepa complex. 9845014134"

5BHK-LUXURIOUS TRIPLEX-HOUSE FOR SALE near Annapurneshwari Nagar, Nagarabhavi ₹2.50 Crore Negotiable. Contact: 9901057383

Flat

Girinagar

BOOK APAPRTMENT Girinagar 1st Phase 40x60, 3 BHK, 2000 sqft Ground Floor Parking, one flat on each floor, 2nd floor available. Vegetarians Only. 9448981741 7337855467

Jakkur

SALE 3BHK EAST 1620 sft. FLAT, All Amenities. Near Highway. 2.5km from Mall of Asia. Owner: 7022334447, 7022334448

R T Nagar

R.T.NAGAR 2-BHK Flat For Sale Built Up Area 1200/-sqft Rs,70 Lakh Prime Location Roysrealty 9980072843

Vijayanagar

3 BHK Brand New Flats BBMP A Katha 1700 Sqft, Carpark, Lift 1.80Cr (Walkable from Vijayanagar Metro Station) 9880443362

Commercial Building

Seshadripuram

FOR SALE COMMERSIAL PROPERTY GROUND FLOUR 1000SQFT IN 1ST MAIN ROAD SHESHADRIPURAM SUITABLE FOR SHOWROOM,SHOP COST:1.5CR CONTACT:B.J Srinivas 9448463652/ 918762687674

Commercial Land

Yelahanka

BUILT TO-SUIT 6300 sft. PRIME COMMERCIAL LAND on AIRPORT Road, Yelahanka. Call: 7022334447, 7022334448

Commerical

Kempegowda Layout

BDA COMMERCIAL Site-for-Sale NadaprabhuKempegowda Layout 9th Block D Sector 80/65 South West Corner Price:6500/- Contact:-9686469799, 9448793428

REAL ESTATE BUYING

Sites

Nagarabhavi

"WANTED NAGARABHAVI, Vishweshwaraiah, RHCS, MPM Layouts`and Sorroundings, Any measurements. Please contact Genuine sellers. 7259675150"

WANTED SITES 30X40 40X60 50X80 NAGARBHAVI RAJAJINAGAR HOUSING Co. OPERATIVE SOCIETY VISHWESHWARAIAH LAYOUT NGEF: 8105688602

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Industrial And Factory

INDUSTRIAL SHED/ Godown for rent in Harohalli Industrial Area 3rd phase, 11,000 Sft, Contact: 9108982314

AVAILABLE OF Industrial Shed of 95000 sqft at Soukya Road, Whitefield. Contact:9341234288/ 9663224353/ 9845417487.

Commercial

COMMERCIAL BUILDING FOR RENT
G FLOOR : 2000 SQFT
1ST FLOOR : 3400 SQFT
2ND FLOOR : 3400 SQFT
24 HRS WATER / 20 KW POWER
LOCATION IN NAGARBHAVI 2ND STAGE, BANGALORE, OUTER RING ROAD
REAL ESTATE AGENTS NOT ALLOWED
Contact: 80500 64066

House

"FOR-RENT RMV-2ND STAGE near RMV`Club Prestigious Location spacious`4BHK North`facing Corner`House with Servant Quarters &`Fabulous Amenities. 9535461993/ WhatsApp: 9945070268"

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PERSONAL

Change of Name

I, TAHASEEN PARVEEN SYED ANWAR W/o Syed Anwar, Residing at 126, 2nd Floor, 8th Cross, Muslim Colony, Byrasandra 1st Block, Jayanagara, Bangalore- 560011 have changed my name to TAHASEEN PARVEEN vide affidavit date 28.06.2024 before Advocate & Notary Aravind Patil G.G. Bengaluru.

CHANGE OF NAME

I, **INDIRA,** Residing at No.2908, Devarachikkanahalli Road, Begur Main Road, Behind Govt High School, Begur, Bangalore-560068, Karnataka, have changed my name to **INDIRA RAJ** vide affidavit # 300/2024 dated 04-07-2024, sworn to before notary N. Narayanaswamy, Bangalore. Henceforth I shall be known as **INDIRA RAJ** only

CHANGE OF NAME

I, **P GIRI REDDY** S/o **P SHARASH CHANDRA REDDY** My date of birth is 31-10-1987, bearing Aadhar No. 423177956061 Residing at No. 6-12, Panatoor, Bomma Samudram,Gudipala Mandalam, Chittor District, Andhra Pradesh-517132 my name in employees Provident Fund records is wrongly recorded as **GIRI** S/o **CHANATH CHANNA REDDY.** It belongs to one and same person only. so I request the EPF Authority to do the necessary correction of may name in EPF records as **P GIRI REDDY** S/o **P SHARASHCHANDRA REDDY.** vide affidavit dated 05.07.2024 before Notary B.M. Chandrashekar, Bangalore.

I, SANNATHI SATISH VADDHANAL Resident at No.318/38, 9th A Main, 5th Block, Jayanagar, Bengaluru-560041 have changed my name to SANNUTHI SATISH VADDHANAL vide affidavit dated 04/07/2024 sworn before notary N.Peruvazhuthi, Bengaluru

I, DEVARAJ R, S/o Rama Reddy, residing No.12, 1st B Cross, 6th Block, Banagirinagar, BSK 3rd Stage, Bangalore-560085, solemnly declare before notary K.P.Sumangala on 05.07.2024 herein forfuture records my name as Devaraj.R

BUSINESS

Business Offers

Finance

NRI'S INVESTMENT
And Finance Available
On Low Interest
Against
Properties,Land
&Building,Sites,Flats,
Converted
&Agriculture Lands
Call:7204995189

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್

ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.

ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.

ಸಂದರ್ಶನದ ಸ್ಥಳ: **ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)**
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ
ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

HEALTH SPECIAL

RAMAIAH Medical College

ರಾಧಕೃಷ್ಣ ಚಾರಿಟೆಬಲ್ ಟ್ರಸ್ಟ್ (ರಿ)
ಗಿರಿನಗರ, ಬೆಂಗಳೂರು
ಸುರಕ್ಷ ಸಮಾಜ ಸೇವಾ ಸಂಸ್ಥೆ (ರಿ)
ಬಸವೇಶ್ವನಗರ, ಬೆಂಗಳೂರು
ಹಾಗೂ
ಎಂ.ಎಸ್.ರಾಮಯ್ಯ ಆಸ್ಪತ್ರೆ, ಬೆಂಗಳೂರು

ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ

- ಸಾಮಾನ್ಯ ರೋಗ ವಿಭಾಗ
- ಮಕ್ಕಳ ವಿಭಾಗ
- ಚರ್ಮರೋಗ ವಿಭಾಗ
- ಕಣ್ಣಿನ ತಪಾಸಣೆ
- ಸಾಮಾನ್ಯ ಶಸ್ತ್ರ ಚಿಕಿತ್ಸಾ ವಿಭಾಗ
- ಇ.ಸಿ.ಜಿ. (E.C.G.)
- ಶ್ವಾಸಕೋಶ ವಿಭಾಗ
- ಕ್ಯಾನ್ಸರ್ ವಿಭಾಗ
- ಕಿವಿ, ಮೂಗು ಮತ್ತು ಗಂಟಲು ವಿಭಾಗ
- ಮೂಳೆ ಮತ್ತು ಕೀಲು ರೋಗ ವಿಭಾಗ
- ಸ್ತ್ರೀ ರೋಗ ವಿಭಾಗ
- ಬಿ.ಪಿ. ಮತ್ತು ಸಕ್ಕರೆ ಖಾಯಿಲೆ ವಿಭಾಗ

ಸ್ಥಳದಲ್ಲೇ ಕ್ಯಾನ್ಸರ್ ಪತ್ತೆ ತಪಾಸಣಾ ಶಿಬಿರ

ದಿನಾಂಕ : 07-07-2024ನೇ ಭಾನುವಾರ
ಬೆಳಗ್ಗೆ 8:00 ರಿಂದ ಸಂಜೆ 4:00 ವರೆಗೆ
ಸ್ಥಳ: ರಾಜೀವ್ ಗಾಂಧಿ ಕ್ರೀಡಾಂಗಣ ಶ್ರೀನಗರ, ಬೆಂಗಳೂರು

ಸೂಚನೆ : ಶಿಬಿರಕ್ಕೆ ಬರುವ ರೋಗಿಗಳು ಕಡ್ಡಾಯವಾಗಿ ಬಿ.ಪಿ.ಎಲ್. ಕಾರ್ಡ್, ಆಯುಷ್ಮಾನ್ ಕಾರ್ಡ್, ಆಧಾರ್ ಕಾರ್ಡ್‌ನ ಪ್ರತಿಗಳನ್ನು ತಂದರೆ ಶಿಬಿರದಲ್ಲಿ ಆಯ್ಕೆಯಾಗಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಅಥವಾ ಶಸ್ತ್ರ ಚಿಕಿತ್ಸೆಗೆ ದಾಖಲಾಗುವಂತಹ ಎಲ್ಲಾ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಲು ಅನುಕೂಲವಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :
+91 9901 376 066
+91 8884 412 753
+91 9353 248 281

ಶ್ರೀ ಗಿರೀಶ್. ಜಿ
ಸಂಸ್ಥಾಪಕರು, ರಾಧಾಕೃಷ್ಣ ಚಾರಿಟೇಬಲ್ ಟ್ರಸ್ಟ್ (ರಿ) ಬೆಂಗಳೂರು.

THE BIGGEST PROPERTY INVESTMENT EXPO 2024
IN NORTH BENGALURU

RIE REALTY INVESTMENT EXPO

JULY 6TH & 7TH
SATURDAY SUNDAY
11 AM TO 7 PM
Hilton hotel & Convention centre, Studio 1, Manyata Tech Park, Nagawara, Hebbal

75+ PROJECTS
25+ REPUTED BUILDERS
FREE ENTRY | FREE PARKING
EXPLORE AND INVEST, IN THE BEST !
Best Deals !
Exclusive Offers !
OPEN TODAY AND TOMORROW

Conceptualized & Organised By
EVENT EXPERTZ2

WHY VISIT RIE ?
Properties in Prime locations with Best R.O.I
Verified and RERA Registered Properties

APARTMENTS FARMLANDS PLOTS VILLAS

+91 99864 42255
www.realtyinvestmentexpo.com

₹5 ಲಕ್ಷಕ್ಕೆ ಹೋರಿ ಮಾರಾಟ

ಕೆಜಿಎಫ್ (ಬೇತಮಂಗಲ): ಕೇವಲ ಒಂದು ವರ್ಷದ ಹೋರಿ ಬರೋಬ್ಬರಿ ₹5.05 ಲಕ್ಷಕ್ಕೆ ಮಾರಾಟವಾಗಿದೆ.

ಕೆಜಿಎಫ್ ತಾಲ್ಲೂಕಿನ ಮೋತಕಪಲ್ಲಿ ಯುವ ರೈತ ಪರಂಧಾಮ ಅವರಿಗೆ ಸೇರಿದ ಹೋರಿ ಇದಾಗಿದೆ. ಅವರು ಸಾಕಿರುವ ಒಂದು ವರ್ಷದ ಹೋರಿಯನ್ನು ₹5.05 ಲಕ್ಷಕ್ಕೆ ತಮಿಳುನಾಡಿನ ರೈತರೊಬ್ಬರಿಗೆ ಮಾರಾಟ ಮಾಡಿದ್ದಾರೆ.

ಒಂದು ವರ್ಷದ ಹೋರಿ ಈಗಾಗಲೇ ಆಂಧ್ರಪ್ರದೇಶದಲ್ಲಿ ಎರಡು ಹೋರಿ ಓಡಿಸುವ ಪಂದ್ಯಗಳಲ್ಲಿ ಪಾಲ್ಗೊಂಡು ಒಂದು ಪಂದ್ಯದಲ್ಲಿ ಪ್ರಥಮ ಬಹುಮಾನವಾಗಿ ₹50 ಸಾವಿರ ನಗದು ಮತ್ತು ಎರಡನೇ ಪಂದ್ಯದಲ್ಲಿ ಎರಡನೇ ಬಹುಮಾನವಾಗಿ 20 ಗ್ರಾಂ ಚಿನ್ನ ಗಳಿಸಿದೆ.

ಡಿಸೈನ್ ಚಾಲೆಂಜ್ ವೈಷ್ಣವಿ ಜಯ

ಕೆ.ಆರ್.ಪುರ: ಐಐಟಿ ಬಾಂಬೆಯ ಐಡಿಸಿ ಸ್ಕೂಲ್ ಆಫ್ ಡಿಸೈನ್ ಆಯೋಜಿಸಿದ್ದ ಡಿ'ಸೋರ್ಸ್-ಡಿಐಸಿ-ಬಿಎಚ್‌ಯೂ ಎಸ್‌ಡಿಜಿ ಡಿಸೈನ್ ಚಾಲೆಂಜ್‌ನಲ್ಲಿ ಹೂಡಿಯ ಗೋಪಾಲನ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಮತ್ತು ಪ್ಲಾನಿಂಗ್ ಕಾಲೇಜಿನ ವಿದ್ಯಾರ್ಥಿನಿ, ಬೆಂಗಳೂರಿನ ವೈಷ್ಣವಿ ಎಂ. ಅವರು ವಿಜೇತರಾಗಿದ್ದಾರೆ.



ವೈಷ್ಣವಿ ಎಂ.

5 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ರಂಗಭೂಮಿ ಚರಿತ್ರೆ ದಾಖಲಿಸುವ ಕಾರ್ಯ

ಡಿಜಿಟಲೀಕರಣಕ್ಕೆ ಮರುಜೀವ

• ವರುಣ ಹೆಗಡೆ

ಬೆಂಗಳೂರು: ಅನುದಾನದ ಕೊರತೆ ಸೇರಿ ವಿವಿಧ ಕಾರಣಗಳಿಂದ ನನೆಗುದಿಗೆ ಬಿದ್ದಿದ್ದ ಕರ್ನಾಟಕ ನಾಟಕ ಅಕಾಡೆಮಿಯ ರಂಗಭೂಮಿ ಚರಿತ್ರೆ ಡಿಜಿಟಲೀಕರಣ ಯೋಜನೆ ಐದು ವರ್ಷಗಳ ನಂತರ ಮರುಜೀವ ಪಡೆದಿದೆ. ಇದರಿಂದಾಗಿ ಡಿಜಿಟಲ್ ವೇದಿಕೆಯಲ್ಲಿ ರಂಗಭೂಮಿ ಚರಿತ್ರೆಯನ್ನು ಕಣ್ತುಂಬಿಕೊಳ್ಳುವ ಕಾಲ ಸನ್ನಿಹಿತವಾಗಿದೆ.


ರಂಗಭೂಮಿ ಬೆಳೆದು ಬಂದ ಬಗೆ, ರಂಗ ತಂಡಗಳು, ರಂಗ ಸಾಹಿತ್ಯ, ಅಪರೂಪದ ಛಾಯಾಚಿತ್ರಗಳು ಸೇರಿದಂತೆ ರಂಗಭೂಮಿಗೆ ಸಂಬಂಧಿಸಿದ ವಿವಿಧ ವಿಷಯ ವಸ್ತುಗಳನ್ನು ಡಿಜಿಟಲೀಕರಣಗೊಳಿಸಲು ಅಕಾಡೆಮಿ 2018ರಲ್ಲಿ ಯೋಜನೆ ರೂಪಿಸಿತ್ತು. ಮೂರು ವರ್ಷಗಳಲ್ಲಿ ಡಿಜಿಟಲೀಕರಣ ಪೂರ್ಣಗೊಳಿಸಲು ಗಡುವು ಹಾಕಿಕೊಳ್ಳಲಾಗಿತ್ತು. ಅಕಾಡೆಮಿಯ ಅಂದಿನ ಅಧ್ಯಕ್ಷ ಜೆ. ಲೋಕೇಶ್ ಅವರು, ರಂಗಭೂಮಿಗೆ ಸಂಬಂಧಿಸಿದ ವಿಷಯ ವಸ್ತುಗಳನ್ನು ಡಿಜಿಟಲೀಕರಣಗೊಳಿಸುವ ಪ್ರಕ್ರಿಯೆ ಪ್ರಾರಂಭಿಸಿದ್ದರು.

ಬಳಿಕ ಬಂದ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು 2019ರಲ್ಲಿ ಅಕಾಡೆಮಿಗಳ ಅಧ್ಯಕ್ಷರ ನೇಮಕಾತಿಯನ್ನು ರದ್ದುಗೊಳಿಸಿ, ಹೊಸದಾಗಿ ನೇಮಕ ಮಾಡಿ ಆದೇಶ ಹೊರಡಿಸಿತ್ತು. ಅನುದಾನದ ಕೊರತೆ ಸೇರಿದಂತೆ ವಿವಿಧ ಕಾರಣಗಳಿಂದಾಗಿ ನಂತರ ಬಂದ ಕಾರ್ಯಕಾರಿ ಸಮಿತಿ ಡಿಜಿಟಲೀಕರಣಕ್ಕೆ ಆಸಕ್ತಿ ತಾಳದಿದ್ದರಿಂದ ಯೋಜನೆ ನನೆಗುದಿಗೆ ಬಿದ್ದಿತ್ತು. ಈಗ ಕೆ.ವಿ. ನಾಗರಾಜಮೂರ್ತಿ ಅವರ ಅಧ್ಯಕ್ಷತೆಯ ಹೊಸ ಕಾರ್ಯಕಾರಿ ಸಮಿತಿ ಈ ಯೋಜನೆಯನ್ನು ಪೂರ್ಣಗೊಳಿಸಲು ಮುಂದಾಗಿದೆ.



ರಂಗಭೂಮಿ ಚರಿತ್ರೆ ಡಿಜಿಟಲೀಕರಣವನ್ನು ಕೈಗೆತ್ತಿಕೊಂಡಿದ್ದೇವೆ. ಅಗತ್ಯ ಅನುದಾನವನ್ನು ಕ್ರಿಯಾ ಯೋಜನೆಯಲ್ಲಿ ಮೀಸಲಿಡಲಾಗಿದೆ

ಕೆ.ವಿ. ನಾಗರಾಜಮೂರ್ತಿ, ನಾಟಕ ಅಕಾಡೆಮಿ ಅಧ್ಯಕ್ಷ



ವೆಬ್‌ಸೈಟ್‌ಗೆ ಅಳವಡಿಕೆ

ಡಿಜಿಟಲೀಕರಣ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಅವನ್ನು ಅಕಾಡೆಮಿಯ ವೆಬ್‌ಸೈಟ್‌ನಲ್ಲಿ ಅಳವಡಿಸುವುದೂ ಯೋಜನೆಯ ಭಾಗವಾಗಿತ್ತು. ರಂಗಭೂಮಿಗೆ ಸಂಬಂಧಿಸಿದ 150 ಸಾಕ್ಷ್ಯಚಿತ್ರಗಳನ್ನು ಸಿದ್ಧಪಡಿಸಲಾಗಿತ್ತು.

2020ರಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಅಕಾಡೆಮಿಗಳಿಗೆ ನೀಡಲಾಗುತ್ತಿದ್ದ ವಾರ್ಷಿಕ ಅನುದಾನವನ್ನು ಕಡಿತ ಮಾಡಲಾಗಿತ್ತು. ಇದರಿಂದಾಗಿ ವಾರ್ಷಿಕ ಅನುದಾನವನ್ನು ಈ ಯೋಜನೆಗೆ ಬಳಸಲು ನಂತರದ ಕಾರ್ಯಕಾರಿ ಸಮಿತಿ ಆಸಕ್ತಿ ತೋರಿಸಿರಲಿಲ್ಲ.

'ಯೋಜನೆ ಪೂರ್ಣಗೊಳಿಸಲು ₹10 ಲಕ್ಷದಿಂದ 15 ಲಕ್ಷ ಬೇಕಾಗುತ್ತದೆ. ಅನುದಾನ ಲಭ್ಯವಿರುವುದರಿಂದ ಆದಷ್ಟು ಬೇಗ ಡಿಜಿಟಲೀಕರಣ ಪೂರ್ಣಗೊಳಿಸಿ, ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗುತ್ತದೆ' ಎಂದು ಕೆ.ವಿ. ನಾಗರಾಜಮೂರ್ತಿ ತಿಳಿಸಿದರು.

₹20 ಲಕ್ಷ ವೆಚ್ಚ: ಈ ಯೋಜನೆಗೆ ಒಟ್ಟು ₹20 ಲಕ್ಷ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿತ್ತು. ₹10 ಲಕ್ಷ ಮೊತ್ತದಲ್ಲಿ ಡಿಜಿಟಲೀಕರಣಗೊಳಿಸಲು ಬೇಕಾದ ಸಲಕರಣೆಗಳನ್ನು ಖರೀದಿಸಲಾಗಿತ್ತು. ಸಮಗ್ರ ನಾಟಕ ಚರಿತ್ರೆ ಸಂಗ್ರಹಿಸಲು ಆಗ ನಿಘಂಟು ತಜ್ಞ ಪ್ರೊ.ಜಿ. ವೆಂಕಟಸುಬ್ಬಯ್ಯ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನೂ ರಚಿಸಲಾಗಿತ್ತು. ವಿವಿಧ ನಾಟಕ ಕಂಪನಿಗಳು, ರಂಗಭೂಮಿ ತಜ್ಞರು ಹಾಗೂ ಪುಸ್ತಕ ಪ್ರಕಾಶನ ಸಂಸ್ಥೆಗಳಿಂದ ರಂಗಭೂಮಿಗೆ ಸಂಬಂಧಿಸಿದ ವಿಷಯ ವಸ್ತುಗಳನ್ನು ಕೇಂದ್ರ ಕಚೇರಿಗೆ ತರಿಸಿಕೊಂಡು, ಡಿಜಿಟಲೀಕರಣ ಪ್ರಕ್ರಿಯೆ ನಡೆಸಲಾಗಿತ್ತು. ಯೋಜನೆ ಪೂರ್ಣಗೊಳ್ಳುವ ಮೊದಲೇ ಕಾರ್ಯಕಾರಿ ಸಮಿತಿ ವಿಸರ್ಜನೆಗೊಂಡಿದ್ದರಿಂದ ಸಂಗ್ರಹಿಸಿದ್ದ ವಿಷಯ ವಸ್ತುಗಳು ಹಾಗೇ ಉಳಿದಿವೆ.

ಡಿಜಿಟಲೀಕರಣಗೊಳಿಸಲಾದ ವಿಷಯ ವಸ್ತುಗಳನ್ನು ಪರಿಷ್ಕರಿಸಿ, ವೆಬ್‌ಸೈಟ್‌ಗೆ ಅಳವಡಿಸುವ ಪ್ರಕ್ರಿಯೆ ಈವರೆಗೂ ನಡೆದಿಲ್ಲ. ವೃತ್ತಿ ಹಾಗೂ ಪೌರಾಣಿಕ ರಂಗಭೂಮಿಗೆ ಸಂಬಂಧಿಸಿದ ಸಾವಿರ ನಾಟಕ ಪುಸ್ತಕಗಳು ಡಿಜಿಟಲೀಕರಣಗೊಂಡಿವೆ. ಹವ್ಯಾಸಿ ರಂಗಭೂಮಿಯ ಕೆಲ ಪುಸ್ತಕಗಳನ್ನು ಡಿಜಿಟಲೀಕರಣಗೊಳಿಸುವ ಕೆಲಸ ಬಾಕಿಯಿದೆ ಎಂದು ಅಕಾಡೆಮಿ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಇಂದು, ನಾಳೆ ಬಿಐಟಿ ಹ್ಯಾಕಥಾನ್

ಬೆಂಗಳೂರು: ಕೆ.ಆರ್.ರಸ್ತೆಯ ವಿ.ವಿ.ಪುರದಲ್ಲಿರುವ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯವು (ಬಿಐಟಿ) ಇದೇ ಶನಿವಾರ ಮತ್ತು ಭಾನುವಾರ ತನ್ನ ಕ್ಯಾಂಪಸ್‌ನಲ್ಲಿ ರಾಷ್ಟ್ರೀಯ ಮಟ್ಟದ 'ಹ್ಯಾಕಥಾನ್ ಆಂಬಿಷನ್-24' ಕಾರ್ಯಕ್ರಮ ಹಮ್ಮಿಕೊಂಡಿದೆ.

ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದ ಹೊಸ ಆವಿಷ್ಕಾರಕ್ಕೆ ಈ ಕಾರ್ಯಕ್ರಮ ವೇದಿಕೆ ಕಲ್ಪಿಸಲಿದೆ. ಪ್ರತಿಭಾನ್ವೇಷಣೆ ಈ ಸ್ಪರ್ಧೆಯ ಮುಖ್ಯ ಉದ್ದೇಶ. ದೇಶದ ವಿವಿಧೆಡೆಯಿಂದ ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸುತ್ತಿವೆ. ಬಹುಮಾನವು ₹8 ಲಕ್ಷ ನಗದು ಒಳಗೊಂಡಿದೆ ಎಂದು ಬಿಐಟಿ ತಿಳಿಸಿದೆ.

ಮಿಸ್ಟ್ರಲ್ ಸೊಲ್ಯೂಷನ್ಸ್‌ನ-ಡಿಜಿಟಲ್ಸಿಗ್ನಲ್ ಪ್ರೊಸೆಸಿಂಗ್ ಎಂಜಿನಿಯರ್ ಜಯಕುಮಾರ್ ಎಸ್. ಕಾರ್ಯಕ್ರಮ ಉದ್ಘಾಟಿಸುತ್ತಾರೆ. ಓಸ್‌ಡೇ ನಿರ್ದೇಶಕ ಶರಣ್ ಕುಮಾರ್, ಇಕೋ ಸಿಸ್ಟಮ್ ಡೆವಲಪ್‌ಮೆಂಟ್‌ನ ವ್ಯವಸ್ಥಾಪಕ ಅನುಹ್ಯ ಚಲ್ಲಾ ಗುಂಡ್ಲಾ, ಸಿಎಕ್ಸ್‌ಒ ಸಂಸ್ಥೆಯ ಸ್ಟೆಲ್ಲರ್ ಮತ್ತು ಸುರೇಶ್ ನರಸಿಂಹ ಪಾಲ್ಗೊಳ್ಳುತ್ತಾರೆ. ಬಿಐಟಿ ಪ್ರಾಂಶುಪಾಲ ಅಶ್ವಥ್ ಎಂ.ಯು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸುತ್ತಾರೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಆಧುನಿಕ ಉಡುಪುಗಳಲ್ಲಿ ಪ್ರಾದೇಶಿಕ ಸೊಗಡಿರಲಿ: ಶಾಲಿನಿ ರಜನೀಶ್



ಬೆಂಗಳೂರು: 'ಫ್ಯಾಶನ್ ಜಗತ್ತಿನಲ್ಲಿದ್ದೇವೆ. ವಿವಿಧ ರೀತಿಯ ಉಡುಪುಗಳ ವಿನ್ಯಾಸಗಳು ಕಾಲಕಾಲಕ್ಕೆ ಬದಲಾಗುತ್ತಿವೆ. ಯಾವುದೇ ಆಧುನಿಕ ಉಡುಪು ವಿನ್ಯಾಸದಲ್ಲಿ ಪ್ರಾದೇಶಿಕ ಸೊಗಡು ಇದ್ದರೆ ಸೊಗಸು' ಎಂದು ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್ ತಿಳಿಸಿದರು.

ಯಲಹಂಕ ಸಿಐಎಸ್ ಫ್ಯಾಶನ್ ತಾಂತ್ರಿಕ ವಿದ್ಯಾಲಯದ ಉಡುಪುಗಳ ವಿನ್ಯಾಸದ ವಾರ್ಷಿಕ ಸ್ಪರ್ಧೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಮ್ಮ ಉಡುಪುಗಳು ನಮ್ಮ ಪರಂಪರೆ, ಸಂಸ್ಕೃತಿಯನ್ನು ಬಿಂಬಿಸಬೇಕು. ಅಂಥ ಉಡುಪುಗಳಿಗೆ ಬೇಡಿಕೆ ಹೆಚ್ಚು' ಎಂದು ಹೇಳಿದರು.

ಪತ್ರಕರ್ತೆ ಶೀಲಾ ಶೆಟ್ಟಿ ಅವರು ಉಡುಪು ವಿನ್ಯಾಸಕಾರರನ್ನು ಅಭಿನಂದಿಸಿದರು. ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ ಎರಡನೇ ರ‍್ಯಾಂಕ್ ಪಡೆದ ಸಿಐಎಸ್ ತಾಂತ್ರಿಕ ಶಾಲೆಯ ವಿದ್ಯಾರ್ಥಿನಿ ಹರ್ಷಿತಾ ಗೌಡ ಅವರನ್ನು ಸನ್ಮಾನಿಸಲಾಯಿತು.

ಆಕರ್ಷಕ ಫ್ಯಾಶನ್ ಶೋ ನಡೆಯಿತು. 14 ಯುವ ವಿನ್ಯಾಸಕಾರರು ನೂರಕ್ಕೂ ಹೆಚ್ಚು ವಿವಿಧ ವಿಷಯಗಳಡಿ ತಯಾರಿಸಿದ ಉಡುಪುಗಳ ವಿನ್ಯಾಸಗಳನ್ನು ಪ್ರದರ್ಶಿಸಿದರು.

ಉತ್ತಮ ವಿನ್ಯಾಸಕ್ಕಾಗಿ ಸುಹಾನ ಅಫ್ರಿನ್ ಅವರಿಗೆ ಪ್ರಥಮ ಪ್ರಶಸ್ತಿ ನೀಡಲಾಯಿತು. ರುಕ್ಸಾನಾ ರೆಹಮಾನ್ ನೇತೃತ್ವದಲ್ಲಿ ವಿವಿಧ ಸಮೂಹ ನೃತ್ಯಗಳ ಪ್ರದರ್ಶನ ನಡೆಯಿತು.

ನಿಧನ ವಾರ್ತೆ

ಕೆ.ವಿ.ಭಟ್ ಮಳಿ




ಬೆಂಗಳೂರು: ಕೇಂದ್ರ ಸರ್ಕಾರದ ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆಯ ನಿವೃತ್ತ ಸಹಾಯಕ ನಿರ್ದೇಶಕ ಕೆ.ವಿ.ಭಟ್ ಮಳಿ (91) ನಿಧನರಾಗಿದ್ದಾರೆ.

ಅವರಿಗೆ ಪುತ್ರರಾದ ಶ್ರೀರಾಮ್, ಅಶೋಕ್ ಹಾಗೂ ಪುತ್ರಿ ಹೇಮಾಂಗಿನಿ ಇದ್ದಾರೆ. 1933ರಲ್ಲಿ ಜನಿಸಿದ ಅವರು, ನಿವೃತ್ತಿ ಜೀವನವನ್ನು ನಗರದಲ್ಲಿಯೆ ಸಾಗಿಸುತ್ತಿದ್ದರು.

ನಗರದಲ್ಲಿ ಇಂದು

ಕಥೆ ಕೇಳೋಣ ಬನ್ನಿ–4: ಕಥೆ ಹೇಳುವವರು: ಕಾವ್ಯಾ, ಅಧ್ಯಕ್ಷತೆ: ವತ್ಸಲಾ ಶಾಸ್ತ್ರಿ, ಉಪಸ್ಥಿತಿ: ನ.ರವಿಕುಮಾರ, ಆಯೋಜನೆ: ಬಿಬಿಎಂಪಿ, ಭಾರತೀಯ ವಿದ್ಯಾಭವನ, ಅಭಿನವ, ಸ್ಥಳ: ಭವನ್–ಬಿಬಿಎಂಪಿ ಶಾಲೆ, ಶ್ರೀರಾಮಪುರ, ಬೆಳಿಗ್ಗೆ 9.30



'ಶಾಂತವೇರಿ ಗೋಪಾಲಗೌಡರ ಜೀವನ ಮತ್ತು ಹೋರಾಟ' ವಿಚಾರಸಂಕಿರಣ: ಉದ್ಘಾಟನೆ: ಅಗ್ರಹಾರ ಕೃಷ್ಣಮೂರ್ತಿ, ಮುಖ್ಯ ಅತಿಥಿ: ಆರಗ ಜ್ಞಾನೇಂದ್ರ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ ಹಾಗೂ ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9.30



ಕಾನೂನು ಸೇವೆಗಳ ಕ್ಲಿನಿಕ್ ಕಾರ್ಯಾಗಾರದ ಸಮಾರೋಪ: ಮುಖ್ಯ ಅತಿಥಿ: ನ್ಯಾ. ಕೃಷ್ಣ ಎಸ್. ದೀಕ್ಷಿತ್, ಅಧ್ಯಕ್ಷತೆ: ಸೌಂದರ್ಯ ಎಂ. ಮಂಜಪ್ಪ, ಅತಿಥಿಗಳು: ಡಿ.ಎಂ. ಹೆಗಡೆ, ಕೀರ್ತನ್ ಕುಮಾರ್, ಉಪಸ್ಥಿತಿ: ಬಿ.ಪಿ. ಮಹೇಶ, ಹನುಮಂತೇಗೌಡ ಎನ್.ಎ., ಆಯೋಜನೆ ಹಾಗೂ ಸ್ಥಳ: ಸೌಂದರ್ಯ ಕಾನೂನು ಕಾಲೇಜು, ಸೌಂದರ್ಯ ನಗರ, ನಾಗಸಂದ್ರ, ಬೆಳಿಗ್ಗೆ 10



ರಾಜೀವ್ ತಾರಾನಾಥ್ ಅವರಿಗೆ ನುಡಿ ನಮನ: ಚಿರಂಜೀವಿ ಸಿಂಘ್, ಎಚ್. ಎನ್. ಸುರೇಶ್, ಡಿ. ಬಾಲಕೃಷ್ಣ, ರವೀಂದ್ರ ಯಾವಗಲ್, ಸರೋದ್ ವಾದನ: ಸಚಿನ್ ಹಂಪೆ, ತಬಲಾ: ಉದಯರಾಜ್ ಕರ್ಪೂರ್, ಸ್ಥಳ: ಇಎಸ್‌ವಿ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

'ನೃತ್ಯಪರ್ಣಂ' ನೃತ್ಯ ಪ್ರದರ್ಶನ: ಸುಮತಿ ವಿ., ಆಯೋಜನೆ: ಅನನ್ಯ ಕಲಾನಿಕೇತನ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಬೆಳಿಗ್ಗೆ 10.30

'ಬಾರ್ಟನ್ ಪ್ರಶಸ್ತಿ' ಪ್ರದಾನ ಸಮಾರಂಭ: ಉದ್ಘಾಟನೆ: ಅಮರನಾಥ ಕಾಮತ್, ಪ್ರಶಸ್ತಿ ಪುರಸ್ಕೃತರು: ಕೇಶವ್ ವೆಂಕಟರಾಘವನ್, ಅತಿಥಿ: ಭರತ್ ಮೆಹ್ತಾ, ಅಧ್ಯಕ್ಷತೆ: ಕೆ. ಅನಂತ ಗೌಡ, ಆಯೋಜನೆ ಹಾಗೂ ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ನಂ.1, ಮಿಡ್ ಫೋರ್ಡ್ ಹೌಸ್, ಟ್ರಿನಿಟಿ ವೃತ್ತ, ಎಂ.ಜಿ. ರಸ್ತೆ, ಬೆಳಿಗ್ಗೆ 11

ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ: ಸಾನ್ನಿಧ್ಯ: ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ಅಧ್ಯಕ್ಷತೆ: ದೀಪಕ್ ಎಚ್.ಎಸ್., ಪ್ರತಿಭಾ ಪುರಸ್ಕಾರ ಪ್ರಶಸ್ತಿ ವಿತರಣೆ: ಮಲ್ಲಿಕಾರ್ಜುನ್ ಎಚ್.ಆರ್., ಬಿ. ಸೋಮಶೇಖರ್, ಆಯೋಜನೆ: ಕರುನಾಡ ವಿಜಯಸೇನೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11



ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ: ನ್ಯಾ. ಎಚ್.ಎನ್. ನಾಗಮೋಹನದಾಸ್, ಮುಖ್ಯ ಅತಿಥಿಗಳು: ಎಂ. ಕನಗವಲ್ಲಿ, ಮಾನಸ, ಅಧ್ಯಕ್ಷತೆ: ನಿಡಸಾಲೆ ಪುಟ್ಟಸ್ವಾಮಯ್ಯ, ಪ್ರಶಸ್ತಿ ಪುರಸ್ಕೃತರು: ಎನ್.ಜಗದೀಶ್ ಕೊಪ್ಪ, ರಂಜನಿ ರಾಘವನ್, ಅಭಿರುಚಿ ಗಣೇಶ್, ಟಂಕಸಾಲ ಎಸ್. ನಾಗರಾಜ್, ಆಯೋಜನೆ: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 11

'ಕರ್ಪೂರಿ ಠಾಕೂರ್' ಪುಸ್ತಕ ಬಿಡುಗಡೆ: ಬಿ.ಆರ್. ಪಾಟೀಲ, ಎಂ. ವೀರಪ್ಪ ಮೊಯಿಲಿ, ಮುಖ್ಯ ಅತಿಥಿಗಳು: ಸಿ.ಎಸ್. ದ್ವಾರಕಾನಾಥ್, ಎಸ್.ಕೆ. ಶೇಷಚಂದ್ರಿಕ, ಎಲ್. ಹನುಮಂತಯ್ಯ, ಸಿ. ಮೋಟಮ್ಮ, ಆಯೋಜನೆ: ಭವತಾರಿಣಿ ಪ್ರಕಾಶನ, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ ರಸ್ತೆ, ಬೆಳಿಗ್ಗೆ 11

ಮಥೀನ್ ಇರ್ಫಾನ್ ಕೌಶಲ ಕೇಂದ್ರ ಉದ್ಘಾಟನೆ: ಮುಖ್ಯ ಅತಿಥಿ: ಇರ್ಫಾನ್ ರಜಾಕ್, ಆಯೋಜನೆ ಹಾಗೂ ಸ್ಥಳ: ದಿ ಅಸೋಸಿಯೇಷನ್ ಫಾರ್ ದಿ ಮೆಂಟಲಿ ಚಾಲೆಂಜ್ಡ್ (ಎಎಂಸಿ), ಎಂ.ಎಚ್. ಮರಿಗೌಡ ರಸ್ತೆ, ಬೆಳಿಗ್ಗೆ 11

ಸಾಂಪ್ರದಾಯಿಕ ಮೈಸೂರು ಕಲಾ ಪ್ರದರ್ಶನ: ಉದ್ಘಾಟನೆ: ಬಿ.ಎಲ್. ಶಂಕರ್, ಕಲಾವಿದರು: ಪ್ರಭಾ ಮಲ್ಲೇಶ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 11.30

'ದಿ ಲ್ಯಾಂಗ್ವೆಜ್ ಆಫ್ ಅನ್‌ಹೆಲ್ಡ್ ವೂಂಡ್ಸ್' ಪುಸ್ತಕ ಬಿಡುಗಡೆ ಹಾಗೂ ಸಂವಾದ: ಭೂಮಿಕಾ ಆರ್., ಶೋಭಾ ಎಂ., ಮಿಥಿಲಾ ಬೈಂದೂರ್, ಆಯೋಜನೆ ಹಾಗೂ ಸ್ಥಳ: ಆಟಾ ಗಲಾಟಾ, 178, 5ನೇ ಮುಖ್ಯರಸ್ತೆ, 9ನೇ ಕ್ರಾಸ್, ಮೊದಲ ಹಂತ, ಇಂದಿರಾನಗರ, ಮಧ್ಯಾಹ್ನ 12.30

'ಗೀತಗೋವಿಂದ–ಅಷ್ಟಪದಿ' ನೃತ್ಯ ಕಾರ್ಯಾಗಾರ: ಉದ್ಘಾಟನೆ: ಮಾನಸಿ ರಘುನಂದನ್, ಅಧ್ಯಕ್ಷತೆ: ಮಹೇಂದ್ರ ಡಿ., ಉಪಸ್ಥಿತಿ: ರಶ್ಮಿ ಪ್ರಸಾದ್, ಆಯೋಜನೆ ಹಾಗೂ ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರದ ಬೆಂಗಳೂರು ಪ್ರಾದೇಶಿಕ ಕೇಂದ್ರ, ಮಲ್ಲತ್ತಹಳ್ಳಿ, ಮಧ್ಯಾಹ್ನ 2

ನಾದ ನೃತ್ಯಾನುಭವ ಹಾಗೂ20ನೇ ವರ್ಷದ ಸಂಭ್ರಮೋತ್ಸವ: ಗಾಯನ ಮತ್ತು ವಾದ್ಯ ಸಂಗೀತ: ನಟನಾ ತರಂಗಿಣಿ ಸ್ಕೂಲ್ ಆಫ್ ಮ್ಯೂಸಿಕ್ ಆ್ಯಂಡ್ ಡಾನ್ಸ್ ಸಂಸ್ಥೆ ವಿದ್ಯಾರ್ಥಿಗಳಿಂದ, ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಗಳು: ಅರವಿಂದ ಹೆಬ್ಬಾರ್, ಸುಬ್ರಹ್ಮಣ್ಯ ಶಾಸ್ತ್ರಿ, ಕೆ. ಗಂಗಾ ಪ್ರಸಾದ್, ಶ್ರೀಹರಿ,'ನಾದ ಶ್ರೀ' ಪ್ರಶಸ್ತಿ: ಶ್ರೀನಿವಾಸ ಅನಂತ ರಾಮಯ್ಯ,ಭರತನಾಟ್ಯ ಪ್ರಸ್ತುತಿ: ದಿವ್ಯಾ ವೇಣುಗೋಪಾಲ್, ಆಯೋಜನೆ: ನಟನಾ ತರಂಗಿಣಿ ಸ್ಕೂಲ್ ಆಫ್ ಮ್ಯೂಸಿಕ್ ಆ್ಯಂಡ್ ಡಾನ್ಸ್, ಸ್ಥಳ:ಜಯರಾಮ ಸೇವಾ ಮಂಡಳಿ ಸಭಾಂಗಣ, ಜಯನಗರ 8ನೇ ಬಡಾವಣೆ, ಮಧ್ಯಾಹ್ನ 2.30ರಿಂದ

'ಚಿತ್ರಪಟ' ನಾಟಕ ಪ್ರದರ್ಶನ: ರಚನೆ: ಎಚ್.ಎಸ್. ವೆಂಕಟೇಶಮೂರ್ತಿ, ನಿರ್ದೇಶನ: ಮಂಜುನಾಥ್ ಎಲ್. ಬಡಿಗೇರ, ಸಂಗೀತ: ಗಜಾನನ ಹೆಗಡೆ, ಆಯೋಜನೆ: ಸಮಷ್ಟಿ, ಸ್ಥಳ: ರಂಗಶಂಕರ, ಮಧ್ಯಾಹ್ನ 3.30 ಹಾಗೂ ಸಂಜೆ 7.30

ಮಂಗೇಶ್ ವಿ. ನಾಡಕರ್ಣಿ ಅನುವಾದಿಸಿರುವ 'ವಚನಾಮೃತಂ' ಪುಸ್ತಕ ಬಿಡುಗಡೆ: ಮುಖ್ಯ ಅತಿಥಿ: ಚಿರಂಜೀವಿ ಸಿಂಘ್, ಅಧ್ಯಕ್ಷತೆ: ಎಸ್. ಚಂದ್ರಶೇಖರ್ ಶೆಟ್ಟಿ, ಗೌರವ ಅತಿಥಿಗಳು: ಸಂಗಮೇಶ ಡಿ. ಸವದತ್ತಿಮಠ, ನೀತಾ ಇನಾಮದಾರ, ಆಯೋಜನೆ: ಮಣಿಪಾಲ್ ಯುನಿವರ್ಸಲ್ ಪ್ರೆಸ್, ಸ್ಥಳ: ಫೋರಂ ಆಫ್ ವೈಸ್ ಚಾನ್ಸಲರ್ಸ್ ಆಫ್ ಕರ್ನಾಟಕ, #1, ಹಳೆ ಕಾನೂನು ಕಾಲೇಜು, ಅರಮನೆ ರಸ್ತೆ, ಸಂಜೆ 4

'ಪರಸಂಗದ ಗೆಂಡೆತಿಮ್ಮ' ನಾಟಕ ಪ್ರದರ್ಶನ: ನಿರ್ದೇಶನ: ಕೆ.ಎಸ್.ಡಿ.ಎಲ್. ಚಂದ್ರು, ರಂಗ ಗೌರವ: ಅಪ್ಪಗೆರೆ ತಿಮ್ಮರಾಜು, ಪಲ್ಲಕ್ಕಿ ರಾಧಾಕೃಷ್ಣ, ಸುಬ್ಬಲಕ್ಷ್ಮಿ, ಆಯೋಜನೆ: ಪರಂಪರಾ ಕಲ್ಚರಲ್ ಫೌಂಡೇಶನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ನೃತ್ಯ ರಂಗೋಲಿ ರಾಷ್ಟ್ರೀಯ ನೃತ್ಯೋತ್ಸವ: ಭರತನಾಟ್ಯ: ಶ್ರೇಯಾ ಭಟ್ಟ, ಕಥಕ್: ಮುಕ್ತಿಶ್ರೀ, ಮುಖ್ಯ ಅತಿಥಿಗಳು: ಆರ್.ವಿ. ರಾಘವೇಂದ್ರ, ಜಿ.ಎಸ್. ಹೆಗಡೆ, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಮಲ್ಲೇಶ್ವರ, ಸಂಜೆ 6

ವೈ.ದ್ಯಾವಪ್ಪ ಅವರಿಗೆ ಬೀಳ್ಕೊಡುಗೆ ಹಾಗೂ ಅಭಿನಂದನಾ ಸಮಾರಂಭ: ಮುಖ್ಯ ಅತಿಥಿಗಳು: ಪಿ.ಸಿ. ಮೋಹನ್, ಎಸ್. ರಘು, ಎಂ. ನಾರಾಯಣಸ್ವಾಮಿ, ಬಿ.ಕೃಷ್ಣಪ್ಪ, ಆಯೋಜನೆ: ವೀರಾಂಜನೇಯಸ್ವಾಮಿ ಎಜುಕೇಶನ್ ಆ್ಯಂಡ್ ಚಾರಿಟಬಲ್ ಟ್ರಸ್ಟ್, ಸ್ಥಳ: ಮಾರುತಿ ಸಭಾಂಗಣ, ವೀರಾಂಜನೇಯಸ್ವಾಮಿ ದೇವಸ್ಥಾನ, ಜೆ.ಎಂ.ಪಾಳ್ಯ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಶಿಕ್ಷಕಿ ವಿರುದ್ಧ ಪೋಕ್ಸೊ ಪ್ರಕರಣ ದಾಖಲು

ಬಾಲಕಿಗೆ ಲೈಂಗಿಕ ದೌರ್ಜನ್ಯ: 50 ವರ್ಷ ವಯಸ್ಸಿನ ಶಿಕ್ಷಕಿ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ನರ್ಸರಿ ಶಾಲೆಯ 50 ವರ್ಷದ ಶಿಕ್ಷಕಿ ವಿರುದ್ಧ ಕೆ.ಜಿ.ಹಳ್ಳಿ ಪೊಲೀಸ್ ಠಾಣೆಯಲ್ಲಿ ಪೋಕ್ಸೊ (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಪೋಷಕರ ದೂರು ಆಧರಿಸಿ ಖಾಸಗಿ ಶಾಲೆ ಶಿಕ್ಷಕಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಶಿಕ್ಷಕಿಯ ವಿಚಾರಣೆ ನಡೆಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

‘ಜೂನ್ 6ರಂದು ಮಗಳನ್ನು ಖಾಸಗಿ ಶಾಲೆಗೆ ದಾಖಲು ಮಾಡಿದ್ದೆವು. 10 ದಿನ ಶಾಲೆಗೆ ತೆರಳಿದ್ದ ಪುತ್ರಿ ನಂತರ ಶಾಲೆಗೆ ತೆರಳುವುದಿಲ್ಲ ಎಂದು ಪಟ್ಟು ಹಿಡಿದಳು. ಆಕೆಯನ್ನು ವಿಚಾರಿಸಿದಾಗ, ಖಾಸಗಿ ಅಂಗಗಳಲ್ಲಿ ನೋವು ಆಗಿರುವ ಬಗ್ಗೆ ತಿಳಿಸಿದ್ದಳು. ‘ಮ್ಯಾಮ್’ ಖಾಸಗಿ ಅಂಗಗಳನ್ನು ಸ್ಪರ್ಶಿಸಿರುವ ಬಗ್ಗೆಯೂ ಮಾಹಿತಿ ನೀಡಿದ್ದಳು. ನಂತರ, ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು’ ಎಂದು ಪೋಷಕರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕಲಹ: ವಿವಾಹಿತೆ ಆತ್ಮಹತ್ಯೆ

ಅಪರಾಧ ಸುದ್ದಿ

ಬೆಂಗಳೂರು: ಕೌಟುಂಬಿಕ ಕಲಹದಿಂದ ಬೇಸತ್ತು ವಿವಾಹಿತೆ, ಮನೆಯಲ್ಲಿ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಗಂಗಮ್ಮನಗುಡಿ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದೆ.

ಪೂಜಾ (26) ಮೃತ ಗೃಹಿಣಿ. ‘ಪೂಜಾ, ಅವರ ಪತಿ ಸುನೀಲ್ ಎಂಬಿಎ ಪದವೀಧರರು. ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರು. ಪ್ರಕರಣದ ಸಂಬಂಧ ಸುನೀಲ್, ಅವರ ತಮ್ಮ ಅನಿಲ್ ಸೇರಿ ಆರು ಮಂದಿ ವಿರುದ್ಧ ವರದಕ್ಷಿಣೆ ಕಿರುಕುಳದ ಅಡಿ ಪ್ರಕರಣ ದಾಖಲಾಗಿದೆ. ತನಿಖೆ ಮುಂದುವರಿದಿದೆ’ ಎಂದು ಪೊಲೀಸರು ಹೇಳಿದರು.

‘2022ರಲ್ಲಿ ಸುನೀಲ್ ಜೊತೆ ವಿವಾಹವಾಗಿತ್ತು. ಅನಿಲ್ ಹಾಗೂ ಅವರ ಪತ್ನಿಯೂ ಜತೆಗಿದ್ದರು. ಮನೆಯಲ್ಲಿ ಗಲಾಟೆ ನಡೆದ ಕಾರಣದಿಂದ ಗಂಗಮ್ಮನಗುಡಿ ಸಮೀಪದ ಲಕ್ಷ್ಮೀ ಲೇಔಟ್‌ಗೆ ಬಂದು ನೆಲಸಿದ್ದರು. ಗುರುವಾರ ಸುನೀಲ್ ಕೆಲಸಕ್ಕೆ ತೆರಳಿದ್ದ ಮೇಲೆ ಪೂಜಾ ಅನಿಲ್‌ಗೆ ಕರೆ ಮಾಡಿ ಗಲಾಟೆ ಮಾಡಿಕೊಂಡಿದ್ದಾರೆ. ಬಳಿಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪೊಲೀಸರು ಮಾಹಿತಿ ನೀಡಿದರು.

‘ಫ್ಯಾನ್ ಪೇಜ್’ಗೆ ಕಡಿವಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿಪಟ್ಟಿಯಲ್ಲಿರುವ ವ್ಯಕ್ತಿಗಳ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸೃಷ್ಟಿಸಿರುವ ‘ಫ್ಯಾನ್ ಪೇಜ್’ಗಳಿಗೆ ಕಡಿವಾಣ ಹಾಕಲು ಸಿಸಿಬಿ ಮುಂದಾಗಿದೆ.

ಸೈಬರ್ ಅಪರಾಧ ಠಾಣೆ ಪೊಲೀಸರ ಸಹಾಯದಿಂದ ಅಂತಹ ಪೇಜ್‌ಗಳನ್ನು ನಿಷ್ಕ್ರಿಯ ಮಾಡಲಾಗುವುದು ಎಂದು ಸಿಸಿಬಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ವಿಲ್ಸನ್ ಗಾರ್ಡನ್’ ನಾಗ, ‘ಸೈಲೆಂಟ್’ ಸುನೀಲ್, ‘ಸೈಕಲ್’ ರವಿ ಸೇರಿ ಅಪರಾಧ ಹಿನ್ನೆಲೆಯುಳ್ಳ ಹಲವು ರೌಡಿಗಳ ಹೆಸರಿನಲ್ಲಿ ‘ಸಿ’-ಬಾಸ್, ‘ಎನ್’-ಬಾಸ್, ‘ಎಸ್’- ಬಾಸ್... ಹೆಸರಿನ ಟ್ಯಾಗ್‌ಲೈನ್‌ನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಫ್ಯಾನ್ ಪೇಜ್‌ಗಳನ್ನು ತೆರೆಯಲಾಗಿತ್ತು. ಇಂತಹ ಪೇಜ್ ಅನ್ನು ಸಾವಿರಾರು ಯುವಕರು ಹಿಂಬಾಲಿಸುತ್ತಿದ್ದರು. ಸಿನಿಮಾಗಳ ಸಂಭಾಷಣೆ ಹಾಗೂ ಹಾಡುಗಳನ್ನು ಬಳಸಿ ಪ್ರಚೋದಿಸಲಾಗುತ್ತಿದೆ. ಈ ಪೇಜ್‌ಗಳತ್ತ ಆಕರ್ಷಿತರಾಗುವ ಯುವಕರ ಸಂಖ್ಯೆ ಹೆಚ್ಚುತ್ತಿದ್ದು, ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಸಂಸದ ಕೋಟ ಶ್ರೀನಿವಾಸ ಪೂಜಾರಿ ವಿರುದ್ಧದ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆ ಚುನಾವಣೆ ವೇಳೆ ಮಾಡಲಾದದ ಭಾಷಣದಲ್ಲಿ ನೀತಿ ಸಂಹಿತೆ ಉಲ್ಲಂಘಿಸಲಾಗಿದೆ' ಎಂಬ ಆರೋಪದಡಿ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಮತ್ತು ಇತರರ ವಿರುದ್ಧ ದಾಖಲಾಗಿರುವ ದೂರಿಗೆ ಸಂಬಂಧಿಸಿದ ವಿಚಾರಣಾ ಕೋರ್ಟ್ ನ್ಯಾಯಿಕ ಪ್ರಕ್ರಿಯೆಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಶಾಸಕ ಲಾಲ್‌ಜಿ ಆರ್. ಮೆಂಡನ್ ಮತ್ತು ತ್ರಿಶಾ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಎನ್.ಎಸ್.ಗೋಪಾಲಕೃಷ್ಣ ಸಲ್ಲಿಸಿದ್ದ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಪ್ರಕರಣಕ್ಕೆ ಸಂಬಂಧಿಸಿದಂತೆ ಚುನಾವಣಾ ಸಂಚಾರ ಜಾಗೃತದಳದ ಅಧಿಕಾರಿಯು ಅರ್ಜಿದಾರರ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 188ರ ಅಡಿಯಲ್ಲಿ ದೂರು ದಾಖಲಿಸಿದ್ದಾರೆ. ಈ ದೂರು ದಾಖಲಿಸುವ ಅಧಿಕಾರ ವ್ಯಾಪ್ತಿಯನ್ನು ಅಧಿಕಾರಿ ಹೊಂದಿಲ್ಲ. ದೂರು ದಾಖಲಿಸುವಲ್ಲಿ ಕಾನೂನು ಉಲ್ಲಂಘನೆಯಾಗಿದ್ದು, ರದ್ದುಪಡಿಸಬೇಕು' ಎಂದು ಕೋರಿದರು.

ವಾದ ಆಲಿಸಿದ ನ್ಯಾಯಪೀಠ, 'ದೂರಿಗೆ ಸಂಬಂಧಿಸಿದಂತೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗೆ ತಡೆ ನೀಡಿತು.

ಪ್ರಚಾರದ ಕೊರತೆಯಿಂದ ಜನರಿಗೆ ತಲುಪದ ಮಾಹಿತಿ; ಮಾಸಿಕ ಸಾವಿರ ದಾಟದ ಪ್ರವಾಸಿಗರ ಸಂಖ್ಯೆ

'ಬೆಂಗಳೂರು ದರ್ಶಿನಿ'ಗೆ ಸಿಗದ ಸ್ಪಂದನ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಗರದ ಪ್ರವಾಸಿ ತಾಣಗಳಿಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗುವ ಬಿಎಂಟಿಸಿಯ ಯೋಜನೆ 'ಬೆಂಗಳೂರು ದರ್ಶಿನಿ'ಗೆ ಪ್ರವಾಸಿಗರಿಂದ ನಿರೀಕ್ಷಿತ ಸ್ಪಂದನ ದೊರೆತಿಲ್ಲ. ಪ್ರವಾಸಿಗರ ಸಂಖ್ಯೆ ತಿಂಗಳಿಗೆ ಸಾವಿರದ ಗಡಿ ದಾಟುವುದೂ ಅಪರೂಪವಾಗಿದೆ.

ಬೆಂಗಳೂರು ದರ್ಶಿನಿ ಅಥವಾ 'ಬೆಂಗಳೂರು ರೌಂಡ್ಸ್' ಎಂಬ ಯೋಜನೆಯನ್ನು ಬಿಎಂಟಿಸಿ 2015ರಲ್ಲಿ ಆರಂಭಿಸಿತ್ತು. ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣದಿಂದ ಬೆಳಿಗ್ಗೆ ಹೊರಟು ಸಂಜೆ ಮತ್ತೆ ಇಲ್ಲಿಗೇ ವಾಪಸ್ ಆಗುವ ಯೋಜನೆ ಇದಾಗಿದ್ದು, ಕೋವಿಡ್ ಕಾಲದಲ್ಲಿ ಸ್ಥಗಿತವಾಗಿತ್ತು. 2021ರಲ್ಲಿ ಮತ್ತೆ ಆರಂಭವಾದರೂ ಒಂದು ವರ್ಷದಲ್ಲಿ ಕೇವಲ 685 ಮಂದಿ ಈ ಯೋಜನೆಯ ಪ್ರಯೋಜನ ಪಡೆದಿದ್ದರು.

2022ರಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದರೂ ಜುಲೈ ತಿಂಗಳಿನಲ್ಲಷ್ಟೇ (1,056) ಸಾವಿರದ ಗಡಿ ದಾಟಿತ್ತು. 2023ರಲ್ಲಿ ಮೇ ತಿಂಗಳಿನಲ್ಲೊಮ್ಮೆ (1,066) ನಾಲ್ಕು ಅಂಕಿ ತಲುಪಿತ್ತು. ಉಳಿದಂತೆ ಪ್ರತಿ ತಿಂಗಳು ಮೂರಂಕಿಯಲ್ಲಿಯೇ ಪ್ರವಾಸಿಗರ ಪ್ರಮಾಣ ಇದೆ.

'ಮೈಸೂರಿನಲ್ಲಿ ಕೆಎಸ್‌ಆರ್‌ಟಿಸಿ ನಡೆಸುತ್ತಿರುವ ದರ್ಶಿನಿ ಟ್ರಿಪ್‌ಗಳಿಗೆ ಭಾರಿ ಸ್ಪಂದನವಿದೆ. ಅದೇ ಮಟ್ಟದಲ್ಲಿ ಬೆಂಗಳೂರಿನಲ್ಲಿಯೂ ದರ್ಶಿನಿ ಟ್ರಿಪ್ ನಡೆಸಲು ಅವಕಾಶವಿದೆ. ಆದರೆ, ಈ ರೀತಿ ಒಂದೇ ದಿನ ನಗರದ ಪ್ರಮುಖ ಸ್ಥಳಗಳಿಗೆ ಭೇಟಿ ನೀಡುವ ಯೋಜನೆ ಇದೆ ಎಂಬುದರ ಬಗ್ಗೆ ಜನರಿಗೆ ಮಾಹಿತಿಯೇ ಇಲ್ಲ' ಎಂದು ಪ್ರಯಾಣಿಕ ಸೃಜನ್ ಪಿ. ಬೇಸರ ವ್ಯಕ್ತಪಡಿಸಿದರು.

'ಮೈಸೂರು ಐತಿಹಾಸಿಕ ಜಿಲ್ಲೆ. ಬೆಂಗಳೂರು ಪಕ್ಕಾ ವ್ಯಾವಹಾರಿಕ ಕೇಂದ್ರ. ಹಾಗಾಗಿ ಮೈಸೂರಿನಲ್ಲಿ ದರ್ಶಿನಿ ಟ್ರಿಪ್‌ನಲ್ಲಿ ಪ್ರಯಾಣಿಸುವಷ್ಟು ಸಂಖ್ಯೆಯ ಪ್ರವಾಸಿಗರನ್ನೂ ಇಲ್ಲಿ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಆದರೆ, ಪ್ರಚಾರದ ಮೂಲಕ ಈಗಿರುವುದಕ್ಕಿಂತ ಮೂರ್ನಾಲ್ಕು ಪಟ್ಟು ಹೆಚ್ಚಿಸಲು ಸಾಧ್ಯವಿದೆ' ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ತಿಳಿಸಿದರು.

'ಒಂದು ವಿಶೇಷ ಬಸ್ ಬೆಂಗಳೂರು ದರ್ಶಿನಿಗಾಗಿ ಪ್ರತಿದಿನ ಸಿದ್ಧವಾಗಿರುತ್ತದೆ. ಕೆಲವು ವಾರಾಂತ್ಯ ಮತ್ತು ವಿಶೇಷ ದಿನಗಳಲ್ಲಿ ಮಾತ್ರ ಪ್ರಯಾಣಿಕರ ಸಂಖ್ಯೆ ಹೆಚ್ಚಿರುತ್ತದೆ. ಆಗ ಎರಡು–ಮೂರು ಬಸ್‌ಗಳು 'ದರ್ಶಿನಿ' ಸಂಚಾರ ನಡೆಸುತ್ತವೆ. ಈಗ ಆಷಾಢ ಬಂದಿರುವುದರಿಂದ ವಾರದ ನಡುವೆ ಪ್ರಯಾಣಿಕರೇ ಇಲ್ಲದಂತೆಯೂ ಆಗುವುದಿದೆ' ಎಂದು ಮಾಹಿತಿ ನೀಡಿದರು.



ಬೆಂಗಳೂರು ದರ್ಶಿನಿ ಬಸ್

ಅಂಕಿ ಅಂಶ

₹420 ವಯಸ್ಕರಿಗೆ 'ದರ್ಶಿನಿ' ದರ

₹315 ಮಕ್ಕಳಿಗೆ 'ದರ್ಶಿನಿ ದರ

ಬೆಳಿಗ್ಗೆ 9 ಮೆಜೆಸ್ಟಿಕ್‌ನಿಂದ ಹೊರಡುವ ಸಮಯ

ಸಂಜೆ 7 ಮೆಜೆಸ್ಟಿಕ್‌ಗೆ ವಾಪಸ್ ಆಗುವ ಸಮಯ

'ಪ್ರಚಾರ ಮಾಡಿ ಜನರನ್ನು ತಲುಪುತ್ತೇವೆ'


ರಾಮಚಂದ್ರನ್ ಆರ್.

'ಬೆಂಗಳೂರಿನಲ್ಲಿ ಪ್ರವಾಸಿ ತಾಣಗಳ ಕೊರತೆ ಇಲ್ಲ. ಬೆಂಗಳೂರು ದರ್ಶಿನಿಗೆ ಪ್ರಚಾರದ ಕೊರತೆ ಇದೆ. ಜನರಿಗೆ ಹೇಗೆಲ್ಲ ಮಾಹಿತಿ ತಲುಪಿಸಬಹುದು ಎಂದು ಚಿಂತನೆ ನಡೆಸಿ ಕಾರ್ಯಪ್ರವೃತ್ತರಾಗುತ್ತಿದ್ದೇವೆ. 'ದರ್ಶಿನಿ' ಪ್ರವಾಸಿಗರನ್ನು ಹೆಚ್ಚು ಮಾಡುತ್ತೇವೆ' ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ವಿಶ್ವಾಸ ವ್ಯಕ್ತಪಡಿಸಿದರು.

'ರೀಲ್ಸ್ ಮಾಡಿ ವಾಟ್ಸ್‌ಆ್ಯಪ್, ಫೇಸ್‌ಬುಕ್ ಮುಂತಾದ ಜಾಲತಾಣಗಳಲ್ಲಿ ಹಂಚುತ್ತೇವೆ. ಮಾಹಿತಿಪತ್ರವನ್ನು (ಬ್ರೋಷರ್) ಹಂಚಲು ಕ್ರಮ ವಹಿಸುತ್ತೇವೆ. ಪ್ರಚಾರಕ್ಕೇ ಇನ್ನೇನೆಲ್ಲ ಕ್ರಮ ವಹಿಸಬಹುದು ಎಂದು ಚರ್ಚೆ ನಡೆಸಿ ಮುಂದಡಿ ಇಡುತ್ತೇವೆ' ಎಂದು ತಿಳಿಸಿದರು.

'12 ಪ್ರವಾಸಿ ತಾಣಗಳಿಗೆ 'ಬೆಂಗಳೂರು ದರ್ಶಿನಿ' ಸಂದರ್ಶಿಸುತ್ತಿದೆ. ಒಮ್ಮೆ ದರ್ಶಿನಿಯಲ್ಲಿ ಬಂದವರು ಮತ್ತೆ ಅದೇ ತಾಣಗಳಿಗೆ ಬರುವುದಿಲ್ಲ. ಇದು ಕೂಡ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ. ಅದಕ್ಕಾಗಿ ಇನ್ನಷ್ಟು ಪ್ರವಾಸಿ ತಾಣಗಳನ್ನು ಗುರುತಿಸಿ ಅವುಗಳಿಗೆ ಹೊಸ ಮಾರ್ಗ ಮಾಡಿ 'ದರ್ಶಿನಿ'ಗಳ ಸಂಖ್ಯೆ ಹೆಚ್ಚಿಸುವ ಚಿಂತನೆ ಕೂಡ ಇದೆ' ಎಂದು ಮಾಹಿತಿ ನೀಡಿದರು.

'ದರ್ಶಿನಿ'ಯ ಪ್ರವಾಸಿ ತಾಣಗಳು

ಇಸ್ಕಾನ್ ಟೆಂಪಲ್, ವಿಧಾನಸೌಧ, ಟಿಪ್ಪು ಪ್ಯಾಲೆಸ್, ಗವಿ ಗಂಗಾಧರೇಶ್ವರ ದೇವಸ್ಥಾನ, ಬಸವನಗುಡಿ ದೊಡ್ಡ ಬಸವಣ್ಣ ದೇವಸ್ಥಾನ, ಲಾಲ್‌ಭಾಗ್, ಕರ್ನಾಟಕ ಸಿಲ್ಕ್ ಎಂಪೋರಿಯಂ, ಕರ್ನಾಟಕ ಚಿತ್ರಕಲಾ ಪರಿಷತ್ತು, ವಸ್ತು ಸಂಗ್ರಹಾಲಯ, ಸರ್.ಎಂ. ವಿಶ್ವೇಶ್ವರಯ್ಯ ಮ್ಯೂಸಿಯಂ, ವೆಂಕಟಪ್ಪ ಆರ್ಟ್ ಗ್ಯಾಲರಿ, ಕಬ್ಬನ್‌ಪಾರ್ಕ್.

ಬುಕ್ಕಿಂಗ್: ಕೆಎಸ್‌ಆರ್‌ಟಿಸಿ ಆನ್‌ಲೈನ್ ಬುಕ್ಕಿಂಗ್, ಬೆಂಗಳೂರು ಒನ್ ಸೆಂಟರ್‌ಗಳಲ್ಲಿಯೂ ಬುಕ್ಕಿಂಗ್ ಮಾಡಬಹುದು. ಬಸ್‌ನಿಲ್ದಾಣದಲ್ಲಿಯೇ ನೇರವಾಗಿ ಟಿಕೆಟ್ ಪಡೆಯಲೂ ಅವಕಾಶವಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಅಂಗನವಾಡಿಗಳಲ್ಲೇ ಎಲ್‌ಕೆಜಿ ಕೇಂದ್ರದ ಜತೆ ಚರ್ಚೆ- ಸಚಿವೆ

ಬೆಂಗಳೂರು: ಅಂಗನವಾಡಿ ಕೇಂದ್ರಗಳಲ್ಲೇ ಎಲ್‌ಕೆಜಿ, ಯುಕೆಜಿ ಮಾದರಿಯಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಆರಂಭಿಸುವ ಕುರಿತು ಕೇಂದ್ರ ಸಹಭಾಗಿತ್ವದ ಇಲಾಖಾ ಯೋಜನೆಗಳ ಅನುಮೋದನಾ ಮಂಡಳಿ ಜೊತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ ಶುಕ್ರವಾರ ಚರ್ಚೆ ನಡೆಸಿದರು.

ರಾಜ್ಯದ ಎಲ್ಲಾ ಅಂಗನವಾಡಿ ಕೇಂದ್ರಗಳನ್ನು ಉನ್ನತೀಕರಿಸಲು, ಮಕ್ಕಳಿಗೆ ಪೌಷ್ಟಿಕ ಆಹಾರ ಮತ್ತು ಗುಣಮಟ್ಟದ ಶಿಕ್ಷಣ ನೀಡಲು ಇಲಾಖೆ ಅಗತ್ಯ ಕ್ರಮ ಕೈಗೊಂಡಿದೆ. 2024-25ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಘೋಷಣೆ ಮಾಡಿರುವಂತೆ ಕೇಂದ್ರ ಸಹಭಾಗಿತ್ವದ ವಿವಿಧ ಯೋಜನೆಗಳ ಜಾರಿಗೆ ರಾಜ್ಯಕ್ಕೆ ಬಿಡುಗಡೆ ಆಗಬೇಕಿರುವ ಅನುದಾನವನ್ನು ತುರ್ತಾಗಿ ಬಿಡುಗಡೆ ಮಾಡಬೇಕು. ಅಂಗನವಾಡಿ ಕೇಂದ್ರಗಳಿಗೆ ಅಗತ್ಯವಿರುವ ಅಕ್ಕಿ, ಗೋಧಿಯನ್ನು ಪೂರೈಸಲು ಕ್ರಮ ಕೈಗೊಳ್ಳಬೇಕು. ಎಲ್‌ಕೆಜಿ, ಯುಕೆಜಿ ಆರಂಭಕ್ಕೆ ಅಗತ್ಯ ನೆರವು ನೀಡಬೇಕು ಎಂದು ಕೋರಿದರು.

ಕೇಂದ್ರದ ಅನುದಾನ ಸಕಾಲಕ್ಕೆ ದೊರೆತರೆ ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ, ಕುಡಿಯುವ ನೀರು, ವಿದ್ಯುತ್ ಸೌಕರ್ಯ ಸೇರಿದಂತೆ ಮೂಲ-ಸೌಕರ್ಯಗಳ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ರಾಜ್ಯದಲ್ಲಿ ಹೊಸದಾಗಿ ಆರಂಭಿಸಿದ ತಾಲ್ಲೂಕುಗಳಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಮತ್ತು ವಿವಿಧ ಸೌಲಭ್ಯಗಳಿಗೂ ಅನುದಾನದ ಅಗತ್ಯವಿದೆ. ಪೋಷಣ್ ಅಭಿಯಾನ, ಮಿಷನ್ ಶಕ್ತಿ, ವಾತ್ಸಲ್ಯ ಸೇರಿದಂತೆ ಕೇಂದ್ರದ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗಿದೆ ಎಂದರು.

ಕೇಂದ್ರ ಮಹಿಳಾ ಮತ್ತು ಮಕ್ಕಳ ಸಚಿವಾಲಯದ ಕಾರ್ಯದರ್ಶಿ ಅನಿಲ್ ಮಲ್ಲಿಕ್, ಇಲಾಖೆಯ ಪ್ರಧಾನ ಕಾರ್ಯದರ್ಶಿ ಜಿ.ಎಸ್. ಪ್ರಕಾಶ್, ನಿರ್ದೇಶಕ ಸಿದ್ದೇಶ್ವರ್, ಮಹಿಳಾ ಮತ್ತು ಮಕ್ಕಳ ರಕ್ಷಣಾಧಿಕಾರಿ ಎಂ.ಆರ್. ರವಿ, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಬಿ.ಎಚ್. ನಿಶ್ಚಲ್ ಉಪಸ್ಥಿತರಿದ್ದರು.

144 ವಾಹನಗಳ ವಶ



ಬೆಂಗಳೂರು: ನಗರದಾದ್ಯಂತ ವಿವಿಧ ಪ್ರಾದೇಶಿಕ ಸಾರಿಗೆ ಕಚೇರಿಗಳ ವ್ಯಾಪ್ತಿಯಲ್ಲಿ ಶುಕ್ರವಾರ ಸಾರಿಗೆ ಅಧಿಕಾರಿಗಳ ವಿಶೇಷ ತಂಡಗಳು ಕಾರ್ಯಾಚರಣೆ ನಡೆಸಿ, 29 ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಸೇರಿದಂತೆ ಅನಧಿಕೃತವಾಗಿ ಸಂಚರಿಸುತ್ತಿದ್ದ 144 ವಾಹನಗಳನ್ನು ವಶಪಡಿಸಿಕೊಂಡಿವೆ.

'ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗಳು ಬಾಡಿಗೆಗೆ ಸಂಚರಿಸುವುದನ್ನು ನಿಷೇಧಿಸಿದ್ದರೂ ಕ್ರಮ ಕೈಗೊಂಡಿಲ್ಲ, ಒಂದು ನಗರ ಒಂದು ದರ ಎಂದು ಕಾನೂನು ಮಾಡಿದ್ದರೂ ಅಗ್ರಿಗೇಟರ್ ಕಂಪನಿಗಳ ವಾಹನಗಳು ಹೆಚ್ಚುವರಿ ಬಾಡಿಗೆ ಪಡೆಯುತ್ತಿವೆ' ಎಂದು ಆರೋಪಿಸಿ ಸಾರಿಗೆ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಚಾಲಕರು ಗುರುವಾರ ಸಾರಿಗೆ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿದ್ದರು. ಬಳಿಕ ಎಚ್ಚೆತ್ತುಕೊಂಡ ಸಾರಿಗೆ ಆಯುಕ್ತ ಎ.ಎಂ. ಯೋಗೀಶ್ ಅನಧಿಕೃತವಾಗಿ ಸಂಚರಿಸುವ ವಾಹನಗಳ ಪತ್ತೆಗೆ ಪ್ರಾದೇಶಿಕ ಸಾರಿಗೆ ಕಚೇರಿವಾರು 11 ತಂಡಗಳನ್ನು ರಚಿಸಿದ್ದರು.

ಶುಕ್ರವಾರ ಬೆಳಿಗ್ಗೆಯೇ ಅಧಿಕಾರಿಗಳು ವಾಹನ ತಪಾಸಣೆ ಮಾಡುವಂತೆ ಸಹಾಯಕ ಸಾರಿಗೆ ಆಯುಕ್ತ ಮಲ್ಲಿಕಾರ್ಜುನ್ ಸೂಚನೆ ನೀಡಿದ್ದರು.

ಜ್ಞಾನಭಾರತಿ ಪ್ರಾದೇಶಿಕ ಸಾರಿಗೆ ಕಚೇರಿ ವ್ಯಾಪ್ತಿಯಲ್ಲಿ 11, ದೇವನಹಳ್ಳಿ ವ್ಯಾಪ್ತಿಯಲ್ಲಿ ಒಂಬತ್ತು, ಚಂದ್ರಾಪುರ ವ್ಯಾಪ್ತಿಯಲ್ಲಿ 11, ಯಲಹಂಕ ವ್ಯಾಪ್ತಿಯಲ್ಲಿ 15, ಜಯನಗರ ವ್ಯಾಪ್ತಿಯಲ್ಲಿ 12, ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯಲ್ಲಿ 12, ಕೆ.ಆರ್.ಪುರ ವ್ಯಾಪ್ತಿಯಲ್ಲಿ 10, ಕೋರಮಂಗಲ ವ್ಯಾಪ್ತಿಯಲ್ಲಿ 18, ರಾಜಾಜಿನಗರ ವ್ಯಾಪ್ತಿಯಲ್ಲಿ 15, ಯಶವಂತಪುರ ವ್ಯಾಪ್ತಿಯಲ್ಲಿ 16 ಹಾಗೂ ಕಸ್ತೂರಿನಗರ ಪ್ರಾದೇಶಿಕ ಸಾರಿಗೆ ಕಚೇರಿ ವ್ಯಾಪ್ತಿಯಲ್ಲಿ 15 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

ಸಿ.ಎಂ. ವ್ಯಾಕರಣ ಪಾಠ


ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿಶಾಲೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಊಟ ಸವಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಎಚ್. ಸಿ. ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ಷರಗಳು ಎಡಬಿಡದೆ ಸೇರುವುದೇ ಸಂಧಿ...', 'ಮನುಷ್ಯರ ಮಧ್ಯದ ತಾರತಮ್ಯ, ಜಾತಿ ವ್ಯವಸ್ಥೆ ವಿರೋಧಿಸಿ ಬಸವಣ್ಣನವರು ಸಾಮಾಜಿಕ ಕ್ರಾಂತಿ ನಡೆಸಿದರು...'

– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಕ್ಕಳಿಗೆ ಪ್ರಶ್ನೆ ಕೇಳಿ, ಉತ್ತರವನ್ನೂ ಅವರೇ ವಿವರಿಸಿದ್ದು ಹೀಗೆ.

ಚಾಮರಾಜಪೇಟೆಯ ಮೊರಾರ್ಜಿ ದೇಸಾಯಿ ವಸತಿಶಾಲೆಗೆ ಶುಕ್ರವಾರ ಮಧ್ಯಾಹ್ನ ದಿಢೀರ್ ಭೇಟಿ ನೀಡಿ ಪರಿಶೀಲಿಸಿದ ಅವರು ಮಕ್ಕಳಿಗೆ ವ್ಯಾಕರಣ ಪಾಠವನ್ನೂ ಮಾಡಿದರು.

ಸಂಧಿ ಎಂದರೇನು? ಸಂಧಿಗಳಲ್ಲಿ ಎಷ್ಟು ವಿಧ? ಕನ್ನಡ ವರ್ಣಮಾಲೆಯಲ್ಲಿ ಎಷ್ಟು ಅಕ್ಷರಗಳಿವೆ? ಅವುಗಳಲ್ಲಿ ಯೋಗವಾಹಗಳು ಎಷ್ಟು? ಸ್ವರ ಎಂದರೇನು? ವ್ಯಂಜನಗಳು ಎಂದರೇನು? ಎಷ್ಟಿವೆ? ವರ್ಗೀಯ, ಅವರ್ಗೀಯ ವ್ಯಂಜನಗಳು ಎಷ್ಟಿವೆ? ಅಲ್ಪಪ್ರಾಣ, ಮಹಾಪ್ರಾಣ ಎಂದರೇನು? ಅಲ್ಪ ಪ್ರಾಣಕ್ಕೆ ಉದಾಹರಣೆ ಹೇಳಿ ಎನ್ನುವ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿದ ಸಿದ್ದರಾಮಯ್ಯ ಅವರು, ಮಕ್ಕಳು ಹೇಳಿದ ಉತ್ತರಗಳನ್ನು ತಿದ್ದಿದರು.

ಮೊರಾರ್ಜಿ ದೇಸಾಯಿ ಶಾಲೆಗಳನ್ನು ರಾಜ್ಯದಲ್ಲಿ ಯಾರು, ಯಾವಾಗ ಆರಂಭಿಸಿದರು ಎಂಬ ಮುಖ್ಯಮಂತ್ರಿಯವರ ಪ್ರಶ್ನೆಗೆ, 'ನೀವೇ ಆರಂಭಿಸಿದ್ದು' ಎಂದ ವಿದ್ಯಾರ್ಥಿಯು ಇಸವಿ ಹೇಳಲಿಲ್ಲ. ಬಳಿಕ, 94-95ರಲ್ಲಿ ಆರಂಭಿಸಿದ್ದಾಗಿ ಸಿದ್ದರಾಮಯ್ಯ ಹೇಳಿದರು. ಮಕ್ಕಳು ಚಪ್ಪಾಳೆ ತಟ್ಟಿದರು.

250 ವಿದ್ಯಾರ್ಥಿಗಳಿರುವ ಶಾಲೆಯಲ್ಲಿ ಮೊದಲಿಗೆ 10ನೇ ತರಗತಿ ಕೊಠಡಿಗೆ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಭೇಟಿ ನೀಡಿದರು.

'ಪಠ್ಯ, ಸ್ನಾನದ ಕಿಟ್‌ಗಳ ಸಮರ್ಪಕ ವಿತರಣೆ ಆಗ್ತಿದೆ' ಎಂದು ಹೇಳಿದ ವಿದ್ಯಾರ್ಥಿಗಳು, 'ಬೆಳಿಗ್ಗೆ ದೋಸೆ, ಮಧ್ಯಾಹ್ನ ಊಟ ಚೆನ್ನಾಗಿರುತ್ತೆ. ಆಗಾಗ ಪಲಾವ್ ಕೊಡುತ್ತಾರೆ. ನಮ್ಮ ಆರೋಗ್ಯ ತಪಾಸಣೆಗೆ ನಿಯಮಿತವಾಗಿ ವೈದ್ಯರು ಬರುತ್ತಿದ್ದಾರೆ' ಎಂದು ಮುಖ್ಯಮಂತ್ರಿಯವರ ಪ್ರಶ್ನೆಗೆ ಉತ್ತರಿಸಿದರು.

'ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಲ್ಲರೂ 'ಡಿಸ್ಟಿಂಕ್ಷನ್'ನಲ್ಲಿ ಉತ್ತೀರ್ಣರಾಗಿದ್ದು, ಒಬ್ಬ ವಿದ್ಯಾರ್ಥಿನಿ ಮಾತ್ರ ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ' ಎಂದು ಶಿಕ್ಷಕರು ಮಾಹಿತಿ ನೀಡಿದರು.

ನೈತಿಕ ನಡವಳಿಕೆ ಅಗತ್ಯ: ಜತಿನ್ ದಾಸ್

ಚಿತ್ರಕಲಾ ಪರಿಷತ್‌ನಲ್ಲಿ ಎಂ.ಎಸ್. ನಂಜುಂಡ ರಾವ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈತಿಕತೆ, ಗೌರವದ ನಡವಳಿಕೆಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದೇ ದೇಶದ ಕಲೆ, ಸಂಸ್ಕೃತಿ ಉಳಿಸುವ ಕೆಲಸಕ್ಕೆ ನೀಡುವ ದೊಡ್ಡ ಕೊಡುಗೆ ಎಂದು ಕಲಾವಿದ ಜತಿನ್ ದಾಸ್ ತಿಳಿಸಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತು ನೀಡುವ ಎಂ.ಎಸ್. ನಂಜುಂಡ ರಾವ್ ರಾಷ್ಟ್ರೀಯ ಪ್ರಶಸ್ತಿಯನ್ನು ಶುಕ್ರವಾರ ಸ್ವೀಕರಿಸಿ ಅವರು ಮಾತನಾಡಿದರು.

'ಕಲಾವಿದರು ಸೇರಿದಂತೆ ಎಲ್ಲರೂ ನಮ್ಮ ಮಣ್ಣಿನ ಗುಣಗಳಿಗೆ ಪೂರಕವಾಗಿ ಕೆಲಸ ಮಾಡಬೇಕು. ಹೂಗುಚ್ಛ ಕೊಡುವುದು ಪಾಶ್ಚಾತ್ಯ ಸಂಸ್ಕೃತಿ. ಅಷ್ಟು ಒಳ್ಳೆಯ ಹೂವುಗಳಿಗೆ ಬಣ್ಣದ ಪ್ಲಾಸ್ಟಿಕ್ ಯಾಕೆ ಸುತ್ತುತ್ತೀರಿ? ಹೂವುಗಳನ್ನು ನೀವೇ ಬೆಳೆಸಿ. ಅತಿಥಿಗಳಿಗೆ ನೀಡುವುದಿದ್ದರೆ ಒಂದು ಹೂವು ನೀಡಿ. ನೀರು, ಚಹಾ ಕುಡಿಯಲು ಪ್ಲಾಸ್ಟಿಕ್ ಲೋಟಗಳನ್ನು ಬಳಸಬೇಡಿ. ಊಟಕ್ಕೆ ಬಾಳೆ ಎಲೆಯ ಚಿತ್ರ ಇರುವ ತಟ್ಟೆ ಬಳಸುವ ಬದಲು ಬಾಳೆ ಎಲೆಯನ್ನೇ ಬಳಸಿ' ಎಂದು ಸಲಹೆ ನೀಡಿದರು.



ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತು ವತಿಯಿಂದ ಎಂ.ಎಸ್. ನಂಜುಂಡ ರಾವ್ ರಾಷ್ಟ್ರೀಯ ಪ್ರಶಸ್ತಿಯನ್ನು ಅಂತರರಾಷ್ಟ್ರೀಯ ಕಲಾವಿದ ಜತಿನ್ ದಾಸ್ ಅವರಿಗೆ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಶುಕ್ರವಾರ ಪ್ರದಾನ ಮಾಡಿದರು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಶಶಿಧರ್ ಮತ್ತು ಕಲಾವಿದೆ ಪುಷ್ಪಾ ದ್ರಾವಿಡ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ನನಗೆ ಪ್ರಶಸ್ತಿ ಬಗ್ಗೆ ವ್ಯಾಮೋಹವಿಲ್ಲ. ನಂಜುಂಡ ರಾವ್ ನನ್ನ ಗೆಳೆಯರಾಗಿದ್ದರು. ಅದಕ್ಕಾಗಿ ಇಲ್ಲಿಗೆ ಬಂದೆ. 1996ರಲ್ಲಿ ನನ್ನ ಏಕವ್ಯಕ್ತಿ ಚಿತ್ರ ಪ್ರದರ್ಶನವನ್ನು ನಂಜುಂಡ ರಾವ್ ಇದೇ ಚಿತ್ರಕಲಾ ಪರಿಷತ್ತಿನಲ್ಲಿ ಏರ್ಪಡಿಸಿದ್ದರು' ಎಂದು ನೆನಪು ಮಾಡಿಕೊಂಡರು.

ಕಲಾವಿದೆ ಪುಷ್ಪಾ ದ್ರಾವಿಡ್ ಮಾತನಾಡಿ, 'ನಂಜುಂಡ ರಾವ್ ಅವರು ಸಣ್ಣ ಕೊಠಡಿಯಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ ನಡೆಸುತ್ತಿದ್ದರು. ಇಲ್ಲಿ ಅದಕ್ಕೆ ಜಮೀನು ಕೊಡಿಸಲು ದಶಕಗಳ ಕಾಲ ಹೋರಾಟ ಮಾಡಿ ಯಶಸ್ವಿಯಾದರು. ಬಳಿಕ ಪರಿಷತ್ತಿನ ಕಟ್ಟಡ ನಿರ್ಮಿಸಲು ನಿಧಿ ಸಂಗ್ರಹಕ್ಕೆ ಹೋರಾಟ ಮಾಡಿದರು. ಅವರ ಬದುಕೇ ಹೋರಾಟವಾಗಿತ್ತು' ಎಂದು ಸ್ಮರಿಸಿದರು.

ಅಧ್ಯಕ್ಷತೆ ವಹಿಸಿದ್ದ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಮಾತನಾಡಿ, 'ನಂಜುಂಡರಾವ್ ಅವರ ಹೆಸರಲ್ಲಿ ಕಳೆದ ಎಂಟು ವರ್ಷಗಳಿಂದ ದೇಶದ ಅತ್ಯುನ್ನತ ಕಲಾವಿದರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುತ್ತಿದೆ' ಎಂದರು.

ಪ್ರಧಾನ ಕಾರ್ಯದರ್ಶಿ ಶಶಿಧರ್ ಎಸ್.ಎನ್. ಮಾತನಾಡಿ, 'ನಂಜುಂಡ ರಾವ್ ಅವರು ಸ್ವಂತ ಚಿತ್ರಗಳ ಪ್ರದರ್ಶನಕ್ಕೆ ಗಮನ ನೀಡದೇ ಸಹ ಕಲಾವಿದರ, ಕಲಾ ಸಮೂಹದ ಪ್ರೋತ್ಸಾಹಕ್ಕೆ ನಿಂತವರು. ಅವರ ಹೆಸರಲ್ಲಿ ಈ ಬಾರಿ ದೇಶದ ಪ್ರಸಿದ್ಧ ಕಲಾವಿದ ಒಡಿಶಾದ ಜತಿನ್ ದಾಸ್ ಅವರಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಜತಿನ್ ದಾಸ್ ಈವರೆಗೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ 85 ಏಕವ್ಯಕ್ತಿ ಚಿತ್ರಕಲೆ ಪ್ರದರ್ಶನ ಮಾಡಿದ್ದಾರೆ' ಎಂದು ಪರಿಚಯಿಸಿದರು.

ವಿದ್ಯಾರ್ಥಿಗಳಿಗೆ ಡೆಂಗಿ, ಶುಚಿತ್ವದ ಅರಿವು


'ಮೈ ಸಿಟಿ ಮೈ ಹೆಲ್ತ್' ಆರೋಗ್ಯ ಜಾಗೃತಿ ಉತ್ಸವದಲ್ಲಿ ವಿದ್ಯಾರ್ಥಿಗಳಿಗೆ ಸೊಳ್ಳೆಗಳ ಉತ್ಪತ್ತಿ ಬಗ್ಗೆ ಅರಿವು ಮೂಡಿಸಲಾಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆಯೊಳಗೆ, ಹೊರಗೆ ಸ್ವಚ್ಛತೆ ಕಾಪಾಡಿಕೊಳ್ಳಿ, ಕೈಗಳನ್ನು ಸೋಪಿನಿಂದ ತೊಳೆದು ಶುಚಿಯಾಗಿಟ್ಟುಕೊಳ್ಳಿ, ತ್ಯಾಜ್ಯವನ್ನು ಎಲ್ಲೆಂದರಲ್ಲಿ ಬಿಸಾಡಬೇಡಿ, ನಿಮ್ಮ ಆರೋಗ್ಯ ಚೆನ್ನಾಗಿದ್ದರೆ, ನಗರದ ಆರೋಗ್ಯವೂ ಉತ್ತಮವಾಗಿರುತ್ತದೆ...'

ನಗರದ ಹಲವು ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆಗಳು, ಚಿತ್ರ–ವಿಡಿಯೊಗಳ ಮೂಲಕ ಆರೋಗ್ಯದ ಬಗ್ಗೆ ಈ ರೀತಿ ಅರಿವು ಮೂಡಿಸಲಾಯಿತು.

ದಿ ಬೆಂಗಳೂರು ಸೈನ್ಸ್ ಆ್ಯಂಡ್ ಟೆಕ್ನಾಲಜಿ ಕ್ಲಸ್ಟರ್ ವತಿಯಿಂದ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯದಲ್ಲಿ ಶುಕ್ರವಾರ ಆಯೋಜಿಸಿದ್ದ 'ಮೈ ಸಿಟಿ ಮೈ ಹೆಲ್ತ್' ಆರೋಗ್ಯ ಜಾಗೃತಿ ಉತ್ಸವದಲ್ಲಿ ವಿದ್ಯಾರ್ಥಿಗಳಿಗೆ ಆರೋಗ್ಯ ಕ್ಷೇತ್ರದ ಆವಿಷ್ಕಾರಗಳ ಬಗ್ಗೆ ಮಾಹಿತಿ ನೀಡಿ, ಡೆಂಗಿ ಸೇರಿ ವಿವಿಧ ರೋಗಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಈಡಿಸ್ ಸೊಳ್ಳೆಗಳು ಹಗಲು ಹೊತ್ತು ಕಚ್ಚುತ್ತವೆ. ಈ ಸೊಳ್ಳೆಯಿಂದ ಡೆಂಗಿ, ಚಿಕೂನ್ ಗುನ್ಯಾ, ಝಿಕಾ, ಹಳದಿ ಜ್ವರ ಹರಡುತ್ತದೆ. ಅನಾಫಿಲಿಸ್ ಸೊಳ್ಳೆಗಳು ರಾತ್ರಿ ಸಮಯದಲ್ಲಿ ಕಚ್ಚುತ್ತವೆ. ಈ ಸೊಳ್ಳೆಯಿಂದ ಮಲೇರಿಯಾ ಹರಡುತ್ತದೆ. ಕ್ಯೂಲೆಕ್ಸ್ ಸೊಳ್ಳೆ ಮುಂಜಾನೆ ಹಾಗೂ ಮುಸ್ಸಂಜೆಯ ಸಮಯದಲ್ಲಿ ಕಚ್ಚುತ್ತವೆ. ಇವುಗಳಿಂದ ಫೈಲೇರಿಯಾ, ಜಪಾನೀಸ್ ಎನ್ಸೆಫಾಲಿಟಿಸ್, ವೆಸ್ಟ್ ನೈಲ್ ಜ್ವರ ಹರಡುತ್ತದೆ ಎಂದು ತಜ್ಞರು ವಿದ್ಯಾರ್ಥಿಗಳಿಗೆ ಸೊಳ್ಳೆಗಳನ್ನು ತೋರಿಸಿ ವಿವರಣೆ ನೀಡಿದರು.

ಸೊಳ್ಳೆ ಉತ್ಪತ್ತಿ ಹೇಗಾಗುತ್ತದೆ, ಯಾವ ರೀತಿಯ ರಾಸಾಯನಿಕಗಳನ್ನು ಸಿಂಪಡಿಸಬೇಕು, ಮುನ್ನೆಚ್ಚರಿಕೆ ವಿಧಾನ ಹೇಗೆ ಅನುಸರಿಸಬೇಕು ಎಂಬುದನ್ನು ಪ್ರಾತ್ಯಕ್ಷಿಕೆಗಳ ಮೂಲಕ ತೋರಿಸಲಾಯಿತು.

ಪ್ರತಿಭಟನೆ ವ್ಯಕ್ತಿಯ ಹಕ್ಕು: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿಭಟನೆ ನಡೆಸುವುದು ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಯೊಬ್ಬನ ಬಹುಮುಖ್ಯವಾದ ಹಕ್ಕು. ಪ್ರತಿಭಟನೆಗಳಲ್ಲಿ ಸಾರ್ವಜನಿಕ ಆಸ್ತಿಗಳಿಗೆ ಸಣ್ಣ-ಪುಟ್ಟ ಹಾನಿ ಸಂಭವಿಸುವುದು ಸಹಜ. ಪ್ರತಿಭಟನೆಗಳು ಪ್ರಯೋಗ ಶಾಲೆಯಲ್ಲಿ ನಡೆಯುವುದಿಲ್ಲ' ಎಂದು ಹೈಕೋರ್ಟ್ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

'ನಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಬಿಜೆಪಿಯ ವಿರಾಜಪೇಟೆ ಮಂಡಲದ ಅಧ್ಯಕ್ಷ ಸುವಿನ್ ಗಣಪತಿ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಅರ್ಜಿದಾರರು ಕಾನೂನು ಪರಿಪಾಲಿಸುವ ನಾಗರಿಕರಾಗಿದ್ದಾರೆ. ಅನುಮತಿ ಪಡೆದೇ ಪ್ರತಿಭಟನೆ ನಡೆಸಿದ್ದಾರೆ. ಆದರೆ, ರಾಜಕೀಯ ಪ್ರೇರಿತವಾಗಿ ಅವರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ ದೂರು ದಾಖಲಿಸಲಾಗಿದ್ದು, ಪ್ರಕರಣವನ್ನು ರದ್ದುಪಡಿಸಬೇಕು' ಎಂದು ಕೋರಿದರು.

ಇದನ್ನು ಆಕ್ಷೇಪಿಸಿದ ರಾಜ್ಯ ಪ್ರಾಸಿಕ್ಯೂಟರ್–1 ಬಿ.ಎ.ಬೆಳ್ಳಿಯಪ್ಪ, 'ಪ್ರತಿಭಟನೆಯನ್ನು ಶಾಂತಿಯಿಂದ ನಡೆಸಬೇಕು. ಆದರೆ, ಈ ಪ್ರಕರಣದಲ್ಲಿ ಅರ್ಜಿದಾರರು ಪ್ರತಿಭಟನೆ ನಡೆಸುವ ನೆಪದಲ್ಲಿ ಸಾರ್ವಜನಿಕ ಆಸ್ತಿಗೆ ಹಾನಿ ಉಂಟು ಮಾಡಿದ್ದಾರೆ. ಎರಡು ಗಂಟೆಗಳಿಗೂ ಹೆಚ್ಚು ಕಾಲ ರಸ್ತೆಯಲ್ಲಿನ ಸುಗಮ ಸಂಚಾರಕ್ಕೆ ಅಡಚಣೆ ಉಂಟುಮಾಡಿದ್ದಾರೆ. ಇದರಿಂದ ಶ್ರೀಸಾಮಾನ್ಯರಿಗೆ ತೊಂದರೆಯಾಗಿದೆ. ಆದ್ದರಿಂದ, ಪ್ರಕರಣ ರದ್ದುಪಡಿಸಬಾರದು' ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಅರ್ಜಿದಾರರು ಪೆಟ್ರೋಲ್-ಡೀಸೆಲ್ ಬೆಲೆ ಏರಿಕೆ ವಿಚಾರವಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಾರ್ವಜನಿಕ ಸ್ಥಳದಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಪ್ರತಿಭಟನೆ ಪ್ರಜಾಪ್ರಭುತ್ವದ ಬಹುಮುಖ್ಯವಾದ ಹಕ್ಕು. ಈ ಪ್ರಕರಣದಲ್ಲಿ ರಸ್ತೆಗೆ ಅಲ್ಪ ಪ್ರಮಾಣದಲ್ಲಿ ಹಾನಿ ಉಂಟಾಗಿದೆ. ಪ್ರತಿಭಟನೆಯನ್ನೇ ಮಾಡಬಾರದೆ? ಹೀಗಾದರೆ ಹೇಗೆ? ಅರ್ಜಿದಾರರು ಪ್ರತಿಭಟನೆಗೆ ಪೂರ್ವಾನುಮತಿ ಕೇಳಿದ್ದಾರಲ್ಲವೇ' ಎಂದು ಪ್ರಶ್ನಿಸಿತು.

ಇದನ್ನು ಅಲ್ಲಗಳೆದ ಬೆಳ್ಳಿಯಪ್ಪ ಅವರು, 'ಅರ್ಜಿದಾರರು ಸ್ಥಳೀಯ ಶಾಸಕರು, ಮುಖ್ಯಮಂತ್ರಿ ಪ್ರತಿಕೃತಿ ದಹನ ಮಾಡಿ ರಸ್ತೆಗೆ ಹಾನಿ ಉಂಟು ಮಾಡಿದ್ದಾರೆ. ₹1ನಷ್ಟು ಹಾನಿಯಾದರೂ ಅಷ್ಟೇ, ₹50 ಸಾವಿರದಷ್ಟು ಹಾನಿಯಾದರೂ ಅಷ್ಟೇ, ಅದು ಸಾರ್ವಜನಿಕ ಆಸ್ತಿ. ಹಾಗಾಗಿ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಕೋರಿದರು.

ಇದನ್ನು ಒಪ್ಪದ ನ್ಯಾಯಪೀಠ, 'ಮಹಜರು ವರದಿಯಲ್ಲಿ ಸಾರ್ವಜನಿಕ ಆಸ್ತಿಯ ಹಾನಿಯ ಕುರಿತಂತೆ ಉಲ್ಲೇಖವಿಲ್ಲ. ಈ ರೀತಿಯ ಸಣ್ಣ- ಪುಟ್ಟ ವಿಷಯಗಳಲ್ಲಿ ನ್ಯಾಯಾಲಯ ಮಧ್ಯ ಪ್ರವೇಶ ಮಾಡಲಾಗುವುದಿಲ್ಲ' ಎಂದು ಹೇಳಿತು. ಅಂತೆಯೇ, ಅರ್ಜಿದಾರರ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದ ಮುಂದಿನ ಎಲ್ಲ ನ್ಯಾಯಿಕ ಪ್ರಕ್ರಿಯೆ ಹಾಗೂ ತನಿಖೆಗೆ ಮಧ್ಯಂತರ ತಡೆ ನೀಡಿ ಆದೇಶಿಸಿತು.

ಪ್ರಕರಣವೇನು?: ಪೆಟ್ರೋಲ್-ಡೀಸೆಲ್ ಬೆಲೆ ಏರಿಕೆ ಹಿನ್ನೆಲೆಯಲ್ಲಿ 2024ರ ಜೂನ್ 20ರಂದು ಬಿಜೆಪಿಯ ವಿರಾಜಪೇಟೆ ಮಂಡಲದ ಅಧ್ಯಕ್ಷ ಸುವಿನ್ ಗಣಪತಿ ನೇತೃತ್ವದಲ್ಲಿ ಕಾರ್ಯಕರ್ತರು, ಮುಖಂಡರು ಪ್ರತಿಭಟನೆ ನಡೆಸಿದ್ದರು. 'ಈ ಪ್ರತಿಭಟನೆಯಿಂದ ಸಾರ್ವಜನಿಕರ ಸುಗಮ ಸಂಚಾರಕ್ಕೆ ತಡೆ ಉಂಟಾಗಿದೆ. ಪ್ರತಿಭಟನಕಾರರು ಸಾರ್ವಜನಿಕ ಆಸ್ತಿಗೆ ಹಾನಿ ಉಂಟು ಮಾಡಿದ್ದಾರೆ' ಎಂದು ಆರೋಪಿಸಿ ವಿರಾಜಪೇಟೆ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು.

ಪ್ರಜ್ವಲ್ ಜಾಮೀನು ಅರ್ಜಿ: ಎಸ್‌ಐಟಿಗೆ ನೋಟಿಸ್

ಬೆಂಗಳೂರು: ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣಗಳಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರು ಸಲ್ಲಿಸಿರುವ ನಿಯಮಿತ (ರೆಗ್ಯುಲರ್) ಮತ್ತು ನಿರೀಕ್ಷಣಾ ಜಾಮೀನು ಅರ್ಜಿಗಳಿಗೆ ಸಂಬಂಧಿಸಿದಂತೆ ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಅರ್ಜಿಗಳನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, ಎಸ್‌ಐಟಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿತು.

ಹೊಳೆನರಸೀಪುರ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 354, 354ಎ, 354ಬಿ, 354ಡಿ, 376, 376ಕೆ, 506 ಮತ್ತು 509ರ ಅಡಿ ಎಫ್‌ಐಆರ್ ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ರೇವಣ್ಣ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದು, ನಿಯಮಿತ ಜಾಮೀನು ಕೋರಿದ್ದಾರೆ. ಈ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ನಿರಾಕರಿಸಿತ್ತು. ಬೆಂಗಳೂರಿನ ಸಿಐಡಿ ಠಾಣೆಯಲ್ಲಿ ಐಪಿಸಿ ಕಲಂ 376(2)(ಎನ್), 376(2)(ಕೆ), 506, 354-ಎ, 354(ಎ), 354(ಬಿ), 354(ಸಿ) ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ–2000ದ ಕಲಂ 66ಇ ಅಡಿ ಪ್ರಕರಣ ದಾಖಲಿಸಲಾಗಿದ್ದು, ಇದರಲ್ಲಿ ಪ್ರಜ್ವಲ್ ನಿರೀಕ್ಷಣಾ ಜಾಮೀನು ಕೋರಿದ್ದಾರೆ.

ಹೈಕೋರ್ಟ್ ಸುದ್ದಿ

ಚಿತ್ರಾವಳಿ


ಪ್ರಸಿದ್ಧ ಸಿನಿಮಾ ಛಾಯಾಗ್ರಾಹಕ ನವ್ರೋಜ್ ಕಂಟ್ರಾಕ್ಟರ್ ಅವರು ಸೆರೆಹಿಡಿದ ಛಾಯಾಚಿತ್ರಗಳ ಪ್ರದರ್ಶನ ಬೆಂಗಳೂರು ಅಂತರಾಷ್ಟ್ರೀಯ ಕೇಂದ್ರದಲ್ಲಿ ಶುಕ್ರವಾರ ಆರಂಭವಾಗಿದ್ದು, ಪ್ರದರ್ಶನ ವೀಕ್ಷಣೆಗೆ ಬಂದಿದ್ದ ಯುವತಿಯೊಬ್ಬರು ತಮ್ಮ ಮೊಬೈಲ್‌ನಲ್ಲಿ ಚಿತ್ರವನ್ನು ಸೆರೆಹಿಡಿದರು –ಪ್ರಜಾವಾಣಿ ಚಿತ್ರ


ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ವೈದ್ಯರ ದಿನಾಚರಣೆ ಪ್ರಯುಕ್ತ 'ಆರೋಗ್ಯಕರ ಹೃದಯಕ್ಕಾಗಿ ನಡೆಯಿರಿ' ವಾಕಥಾನ್ ಮತ್ತು ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಯಿತು. ಕ್ರಿಕೆಟ್ ವೀಕ್ಷಕ ವಿವರಣೆಕಾರ ವಿಜಯ್ ಭಾರದ್ವಾಜ್, ಆಸ್ಪತ್ರೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಸ್. ವಿಜಯಾನಂದ್, ಡೀನ್ ಡಾ.ಸತ್ಯಮೂರ್ತಿ, ಪ್ರಾಂಶುಪಾಲರಾದ ಡಾ.ನವೀನ್, ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಪ್ರವೀಣ್ ಕುಮಾರ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು


ಸಿಟಿ ಸಿವಿಲ್ ಕೋರ್ಟ್‌ನ ವಕೀಲರ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ, ವಕೀಲರು ಮತ್ತು ವಕೀಲರ ಕುಟುಂಬದ ಸದಸ್ಯರಿಗೆ ಪಾಸ್‌ಪೋರ್ಟ್ ಸೌಲಭ್ಯವನ್ನು ಸುಲಭವಾಗಿ ಒದಗಿಸುವ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು. ಹೈಕೋರ್ಟ್ ನ್ಯಾಯಮೂರ್ತಿಗಳಾದ ಎಂ.ನಾಗಪ್ರಸನ್ನ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ನ್ಯಾಯಮೂರ್ತಿಗಳಾದ ವಿ.ಕಾಮೇಶ್ವರ ರಾವ್, ಸೂರಜ್ ಗೋವಿಂದರಾಜ್, ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತು ಸಿಟಿ ಸಿವಿಲ್ ಮತ್ತು ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್‌ನ ಪ್ರಧಾನ ನ್ಯಾಯಾಧೀಶ ಮುರಳೀಧರ ಪೈ ಇದ್ದರು


ಆದಿಚುಂಚನಗಿರಿ ಸಂಕ್ರಮಣ ಗುರುವಂದನ ಬಳಗ ಬೆಂಗಳೂರಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸತ್ಸಂಗ ಸದ್ವಿಚಾರಗಳ ಸಂಪ್ರೋಕ್ಷಣೆ ಕಾರ್ಯಕ್ರಮದಲ್ಲಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿಯವರಿಗೆ ಭಕ್ತರು ಗುರುವಂದನೆ ಸಲ್ಲಿಸಿದರು

ತಮಿಳುನಾಡು ಬಿಎಸ್‌ಪಿ ಅಧ್ಯಕ್ಷನ ಹತ್ಯೆ

ಚೆನ್ನೈ (ಪಿಟಿಐ): ತಮಿಳುನಾಡು ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಆರ್ಮ್‌ಸ್ಟ್ರಾಂಗ್ ಅವರನ್ನು ಶುಕ್ರವಾರ ಸಂಜೆ ಬೈಕ್‌ನಲ್ಲಿ ಬಂದಿದ್ದ ಆರು ಜನ ದುಷ್ಕರ್ಮಿಗಳು ಬರ್ಬರವಾಗಿ ಹತ್ಯೆ ಮಾಡಿದ್ದಾರೆ.

ಪೆರಂಬೂರ್‌ನಲ್ಲಿರುವ ಅವರ ಮನೆಯ ಬಳಿಯೇ ಕೃತ್ಯ ನಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಅರ್ಮ್‌ಸ್ಟ್ರಾಂಗ್ ಅವರನ್ನು ಆಸ್ಪತ್ರೆಗೆ ಸಾಗಿಸುವಾಗ ಅವರು ಮೃತಪಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆಗೆ ಕಾರಣ ತಿಳಿದುಬಂದಿಲ್ಲ. ಮೃತ ಅರ್ಮ್‌ಸ್ಟ್ರಾಂಗ್ ಚೆನ್ನೈ ಮಹಾನಗರಪಾಲಿಕೆಯ ಮಾಜಿ ಸದಸ್ಯರೂ ಹೌದು. ಹಲ್ಲೆ ನಡೆಸಿದ ದುಷ್ಕರ್ಮಿಗಳ ಶೋಧಕ್ಕೆ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ.

ಮೊದಲ ದಿನ ನಾಲ್ಕು ಕ್ಷೇತ್ರಗಳ ಮುಖಂಡರ ಸಭೆ: ಹಲವರ ವಿರುದ್ಧ ಅಸಮಾಧಾನ

ಸೋಲಿನ ಪರಾಮರ್ಶೆ ಆರಂಭಿಸಿದ ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಎಂಟು ಕ್ಷೇತ್ರಗಳಲ್ಲಿ ಸೋಲಿಗೆ ಕಾರಣ ಹುಡುಕಲು ಬಿಜೆಪಿ ಶುಕ್ರವಾರದಿಂದ ಪರಾಮರ್ಶೆ ಆರಂಭಿಸಿದೆ. ಮೊದಲ ದಿನ ನಾಲ್ಕು ಕ್ಷೇತ್ರಗಳ ಮುಖಂಡರ ಸಭೆ ನಡೆಸಿದ್ದು, ಹೊಂದಾಣಿಕೆ, ಅಭ್ಯರ್ಥಿಗಳ ವರ್ಚಸ್ಸು ಮತ್ತು ಕೆಲವರ ಪಕ್ಷಾಂತರ ಸೋಲಿಗೆ ಕಾರಣ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್‌ವಾಲ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರಾಯಚೂರು, ಕೊಪ್ಪಳ, ಕಲಬುರಗಿ ಮತ್ತು ಬಳ್ಳಾರಿ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋಲಲು ಕಾರಣವಾದ ಅಂಶಗಳ ಕುರಿತು ಮಾಹಿತಿ ಸಂಗ್ರಹಿಸಲಾಯಿತು. ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ಪಿ.ರಾಜೀವ್, ಪ್ರೀತಂಗೌಡ, ನಂದೀಶ್‌ರೆಡ್ಡಿ ಸೇರಿದಂತೆ ಹಲವು ಪ್ರಮುಖರು ಸಭೆಯಲ್ಲಿದ್ದರು.

ಅಭ್ಯರ್ಥಿ ವಿರುದ್ಧವೇ ದೂರು: 'ರಾಯಚೂರು ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯಾಗಿದ್ದ ರಾಜಾ ಅಮರೇಶ್ವರ ಅವರಿಂದಾಗಿಯೇ ಸೋಲಾಗಿದೆ ಎಂದು ಮಾಜಿ ಸಂಸದ ಬಿ.ವಿ. ನಾಯಕ್ ಸೇರಿದಂತೆ ಅಲ್ಲಿನ ಕೆಲವು ಮುಖಂಡರು ದೂರಿದ್ದಾರೆ. ಹಾಲಿ ಸಂಸದರು ಸೋಲುತ್ತಾರೆ ಎಂಬ ವರದಿಗಳಿದ್ದರೂ ಅವರಿಗೆ ಮತ್ತೆ ಟಿಕೆಟ್ ನೀಡಿದ್ದು ತಪ್ಪು. ದೇವದುರ್ಗ ಕ್ಷೇತ್ರದಲ್ಲಿ ಜೆಡಿಎಸ್ ಮತಗಳು ಕೂಡ ವರ್ಗಾವಣೆ ಆಗಿಲ್ಲ ಎಂಬುದಾಗಿ ಕೆಲವರು ದೂರಿದರು' ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಬಿ.ವಿ.ನಾಯಕ್, ಬಿಜೆಪಿ ರಾಯಚೂರು ಜಿಲ್ಲಾ ಘಟಕದ ಅಧ್ಯಕ್ಷರಾದ ಶಾಸಕ ಶಿವರಾಜ್ ಪಾಟೀಲ್ ಸೇರಿದಂತೆ ರಾಯಚೂರು ಜಿಲ್ಲೆಯ ಪ್ರಮುಖ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು. ಚುನಾವಣೆಯಲ್ಲಿ ಸೋತಿರುವ ಬಿಜೆಪಿ ಅಭ್ಯರ್ಥಿ ರಾಜಾ ಅಮರೇಶ್ವರ ನಾಯಕ್ ಸಭೆಗೆ ಗೈರಾಗಿದ್ದರು.

'ಕರಡಿ ಪಕ್ಷಾಂತರದ ಹೊಡೆತ': ಕೊಪ್ಪಳ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ. ಬಸವರಾಜ ಕ್ಯಾವಟರ್ ಸೋಲಲು ಹಾಲಿ ಸಂಸದರಾಗಿದ್ದ ಕರಡಿ ಸಂಗಣ್ಣ ಪಕ್ಷಾಂತರ ಪ್ರಮುಖ ಕಾರಣ ಎಂದು ಅಲ್ಲಿನ ಕೆಲವರು ಪರಾಮರ್ಶೆ ಸಭೆಗೆ ಮಾಹಿತಿ ನೀಡಿದ್ದಾರೆ. ಹಿಟ್ನಾಳ್ ಕುಟುಂಬದ ಬಗೆಗಿನ ಅನುಕಂಪವೂ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಕಾರಣ ಎಂದು ಕೆಲವರು ಹೇಳಿದ್ದಾರೆ.

ಶಾಸಕ ಜಿ. ಜನಾರ್ದನ ರೆಡ್ಡಿ, ಮಾಜಿ ಸಚಿವ ಹಾಲಪ್ಪ ಆಚಾರ್, ಬಸವರಾಜ ಕ್ಯಾವಟರ್ ಸೇರಿದಂತೆ ಕೊಪ್ಪಳ ಜಿಲ್ಲೆಯ ಹಲವು ಮುಖಂಡರು ಸಭೆಯಲ್ಲಿದ್ದರು.

'ಹೊಂದಾಣಿಕೆ ರಾಜಕಾರಣದಿಂದ ಸೋಲು': 'ಕಲಬುರಗಿ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯ ಕೆಲವು ಮುಖಂಡರ ಹೊಂದಾಣಿಕೆ ರಾಜಕಾರಣದಿಂದಲೇ ನಮಗೆ ಸೋಲಾಗಿದೆ. ಯಾರು ಏನೇನು ಮಾಡಿದ್ದಾರೆ ಎಂಬುದು ಗೊತ್ತಿದೆ ಎಂದು ವಿಜಯೇಂದ್ರ ಮತ್ತು ರಾಧಾ ಮೋಹನ್‌ದಾಸ್ ಅಗರ್‌ವಾಲ್ ಅಸಮಾಧಾನ ವ್ಯಕ್ತಪಡಿಸಿದರು' ಎಂದು ಮೂಲಗಳು ತಿಳಿಸಿವೆ.

ಶಾಸಕ ಬಸವರಾಜ್ ಮತ್ತಿಮೂಡ್, ಮುಖಂಡರಾದ ರಘುನಾಥರಾವ್ ಮಲ್ಕಾಪುರೆ, ಮಣಿಕಂಠ ರಾಠೋಡ್, ನಿತಿನ್ ಗುತ್ತೇದಾರ್, ಚಂದು ಪಾಟೀಲ್ ಸೇರಿದಂತೆ ಹಲವರು ಸಭೆಯಲ್ಲಿದ್ದರು. ಡಾ. ಉಮೇಶ್ ಜಾಧವ್ ವಿರುದ್ಧವೇ ಕೆಲವು ಮುಖಂಡರು ದೂರಿದ್ದಾರೆ.

ಸೋಲಿನ ಹೊಣೆ ಹೊತ್ತ ಶ್ರೀರಾಮುಲು

ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ತಮ್ಮ ಸೋಲಿನ ಹೊಣೆಯನ್ನು ತಾವೇ ಹೊತ್ತುಕೊಳ್ಳುವುದಾಗಿ ಮಾಜಿ ಸಚಿವ ಬಿ. ಶ್ರೀರಾಮುಲು ಪರಾಮರ್ಶೆ ಸಭೆಯಲ್ಲಿ ತಿಳಿಸಿದ್ದಾರೆ.

'ನನ್ನ ಸೋಲಿನ ಹೊಣೆಯನ್ನು ನಾನೇ ಹೊರುತ್ತೇನೆ. ಈ ವಿಚಾರದಲ್ಲಿ ಯಾರನ್ನೂ ದೂರುವುದಿಲ್ಲ. ಸಂಡೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದಿಲ್ಲ. ಪಕ್ಷ ಯಾರನ್ನೇ ಕಣಕ್ಕಿಳಿಸಿದರೂ ಅವರ ಪರವಾಗಿ ಕೆಲಸ ಮಾಡುತ್ತೇನೆ ಎಂಬ ಭರವಸೆಯನ್ನು ಶ್ರೀರಾಮುಲು ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ತಮ್ಮ ಸರ್ಕಾರಕ್ಕೇ ಸಿ.ಎಂ ಬ್ಲ್ಯಾಕ್‌ಮೇಲ್'

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸರ್ಕಾರದ ವಿರುದ್ಧವೇ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ' ಎಂದು ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯ ಟೀಕಿಸಿದ್ದಾರೆ.

ಮುಡಾ ನಿವೇಶನ ಹಂಚಿಕೆ ಸಂಬಂಧ ಸಿದ್ದರಾಮಯ್ಯ ಅವರು ₹62 ಕೋಟಿ ಪರಿಹಾರ ಕೇಳಿದ ಸಂಬಂಧ ಲಹರ್ ಸಿಂಗ್ ಈ ಹೇಳಿಕೆ ನೀಡಿದ್ದಾರೆ. ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ದೇಶದಲ್ಲಿ ಯಾವ ಮುಖ್ಯಮಂತ್ರಿಯೂ ತಮ್ಮ ನೇತೃತ್ವದ ಸರ್ಕಾರದ ವಿರುದ್ಧವೇ ಹೀಗೆ ವರ್ತಿಸಿಲ್ಲ. ಇಷ್ಟು ದೊಡ್ಡ ಮೊತ್ತದ ಪರಿಹಾರ ಕೇಳುವುದು ಲಜ್ಜೆಗೆಟ್ಟ ನಡೆಯೂ ಹೌದು' ಎಂದು ಟೀಕಿಸಿದ್ದಾರೆ. 'ಅವರು ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಲು ಹಿಂಜರಿಯಬಾರದು' ಎಂದಿದ್ದಾರೆ.

ನೈರುತ್ಯ ರೈಲ್ವೆ: ಬೋಗಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾನ್ಯ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಬೋಗಿಗಳ ಸಂಖ್ಯೆಯನ್ನು ಹೆಚ್ಚಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಎಸ್‌ಎಸ್‌ಎಸ್ ಹುಬ್ಬಳ್ಳಿ– ಹೈದರಾಬಾದ್–ಎಸ್‌ಎಸ್‌ಎಸ್ ಹುಬ್ಬಳ್ಳಿ ಎಕ್ಸ್‌ಪ್ರೆಸ್, ಎಸ್‌ಎಸ್‌ಎಸ್ ಹುಬ್ಬಳ್ಳಿ– ದಾದರ್–ಎಸ್‌ಎಸ್‌ಎಸ್ ಹುಬ್ಬಳ್ಳಿ ಎಕ್ಸ್‌ಪ್ರೆಸ್, ಯಶವಂತ ಪುರ-ಮೈಸೂರು-ಯಶವಂತಪುರ ಎಕ್ಸ್‌ಪ್ರೆಸ್, ಯಶವಂತಪುರ-ಸೇಲಂ-ಯಶವಂತಪುರ ಎಕ್ಸ್‌ಪ್ರೆಸ್, ಚಾಮರಾಜನಗರ-ಮೈಸೂರು ಪ್ಯಾಸೆಂಜರ್ ವಿಶೇಷ ರೈಲು, ತುಮಕೂರು-ಶಿವಮೊಗ್ಗ-ತುಮಕೂರು ಎಕ್ಸ್‌ಪ್ರೆಸ್, ಚಾಮರಾಜನಗರ-ತುಮಕೂರು-ಚಾಮರಾಜನಗರ ಪ್ಯಾಸೆಂಜರ್ ವಿಶೇಷ ರೈಲು, ತಾಳಗುಪ್ಪ- ಮೈಸೂರು-ತಾಳಗುಪ್ಪ ಎಕ್ಸ್‌ಪ್ರೆಸ್, ಮೈಸೂರು-ಚಾಮರಾಜನಗರ-ಮೈಸೂರು ಪ್ಯಾಸೆಂಜರ್ ವಿಶೇಷ ರೈಲುಗಳಲ್ಲಿ ಸಾಮಾನ್ಯ ಬೋಗಿ ಅಳವಡಿಸಲಾಗಿದೆ.

ಅರಸೀಕೆರೆ-ಮೈಸೂರು-ಅರಸೀಕೆರೆ ಪ್ಯಾಸೆಂಜರ್ ವಿಶೇಷ ರೈಲು, ಮೈಸೂರು-ಶಿವಮೊಗ್ಗ-ಮೈಸೂರು ಎಕ್ಸ್‌ಪ್ರೆಸ್, ಶಿವಮೊಗ್ಗ -ಚಿಕ್ಕಮಗಳೂರು-ಶಿವಮೊಗ್ಗ ಪ್ಯಾಸೆಂಜರ್ ವಿಶೇಷ ರೈಲು, ಕೆಎಸ್‌ಆರ್ ಬೆಂಗಳೂರು-ಚನ್ನಪಟ್ಟಣ-ಕೆಎಸ್‌ಆರ್ ಬೆಂಗಳೂರು ಪ್ಯಾಸೆಂಜರ್ ವಿಶೇಷ ರೈಲು, ಕೆಎಸ್‌ಆರ್ ಬೆಂಗಳೂರು- ಅರಸೀಕೆರೆ-ಕೆಎಸ್‌ಆರ್ ಬೆಂಗಳೂರು ಪ್ಯಾಸೆಂಜರ್ ವಿಶೇಷ, ಚಿಕ್ಕಮಗಳೂರು-ಯಶವಂತಪುರ- ಚಿಕ್ಕಮಗಳೂರು ಎಕ್ಸ್‌ಪ್ರೆಸ್, ಅರಸೀಕೆರೆ-ಮೈಸೂರು-ಅರಸೀಕೆರೆ ಪ್ಯಾಸೆಂಜರ್ ವಿಶೇಷ, ಮೈಸೂರು-ಎಸ್‌ಎಂವಿಟಿ ಬೆಂಗಳೂರು- ಮೈಸೂರು ಪ್ಯಾಸೆಂಜರ್ ವಿಶೇಷ, ಎಸ್‌ಎಂವಿಟಿ ಬೆಂಗಳೂರು-ಕಾರೈಕಲ್- ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್, ಎಸ್‌ಎಂವಿಟಿ ಬೆಂಗಳೂರು-ದಾನಾಪುರ-ಎಸ್‌ಎಂವಿಟಿ ಬೆಂಗಳೂರು ಸಂಘಮಿತ್ರ ಎಕ್ಸ್‌ಪ್ರೆಸ್, ಯಶವಂತಪುರ-ಕೋರ್ಬಾ-ಯಶವಂತ ಪುರ ಎಕ್ಸ್‌ಪ್ರೆಸ್, ಎಸ್‌ಎಂವಿಟಿ ಬೆಂಗಳೂರು-ಬಾಗಲ್ಪುರ-ಎಸ್‌ಎಂವಿಟಿ ಬೆಂಗಳೂರು ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲುಗಳಿಗೆ ಬೋಗಿ ಅಳವಡಿಸಲಾಗುತ್ತಿದೆ.

ವಾಸ್ಕೋ ಡ ಗಾಮಾ-ಜಸಿದಿಹ್-ವಾಸ್ಕೋ ಡ ಗಾಮಾ, ಮೈಸೂರು-ಬೆಳಗಾವಿ-ಮೈಸೂರು, ಮೈಸೂರು-ಜೈಪುರ- ಮೈಸೂರು, ಕೆಎಸ್‌ಆರ್ ಬೆಂಗಳೂರು-ಕಣ್ಣೂರು-ಕೆಎಸ್‌ಆರ್ ಬೆಂಗಳೂರು, ಚಾಮರಾಜನಗರ-ತಿರುಪತಿ- ಚಾಮರಾಜನಗರ, ಮೈಸೂರು-ಬಾಗಲಕೋಟೆ-ಮೈಸೂರು, ಮೈಸೂರು-ತಾಳಗುಪ್ಪ-ಮೈಸೂರು ರೈಲುಗಳಿಗೆ ಶೀಘ್ರದಲ್ಲಿಯೇ ಸಾಮಾನ್ಯ ಬೋಗಿಗಳನ್ನು ಅಳವಡಿಸಲು ಕ್ರಮ ವಹಿಸಲಾಗುವುದು ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಗಮನ ಸೆಳೆದಿದ್ದ 'ಪ್ರಜಾವಾಣಿ': ರೈಲುಗಳ ಸಂಖ್ಯೆ ಹೆಚ್ಚಿದ್ದರೂ ಸಾಮಾನ್ಯ ಜನರು ಪ್ರಯಾಣಿಸುವ ಸಾಮಾನ್ಯ ಬೋಗಿಗಳು ಕಡಿಮೆಯಾಗಿದ್ದವು. ಇದರಿಂದ ಸಾಮಾನ್ಯ ಬೋಗಿಗಳಲ್ಲಿ ನೂಕುನುಗ್ಗಲು ಉಂಟಾಗುತ್ತಿತ್ತು. ಈ ಬಗ್ಗೆ 'ಆಳುವವರಿಗೆ ಬೇಡವಾದ ಬಡವರ ಬೋಗಿ' ವಿಶೇಷ ವರದಿಯ ಮೂಲಕ 'ಪ್ರಜಾವಾಣಿ' ಗಮನ ಸೆಳೆದಿತ್ತು.

ರೈಲು ಸಂಖ್ಯೆಯಲ್ಲಿ ಹೆಚ್ಚಳ

ಪ್ರಜಾವಾಣಿ ವಾರ್ತೆ



ನೇರಳೆ ಮಾರ್ಗ

ಬೆಂಗಳೂರು: 'ನಮ್ಮ ಮೆಟ್ರೊ' ನೇರಳೆ ಮಾರ್ಗದಲ್ಲಿ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣದಿಂದ ಹೊರಡುವ ರೈಲುಗಳ ಸಂಖ್ಯೆಯನ್ನು ಒಂಬತ್ತರಿಂದ 15ಕ್ಕೆ ಹೆಚ್ಚಳ ಮಾಡಲಾಗಿದೆ. ಪ್ರಯಾಣಿಕರ ಬೇಡಿಕೆಯ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಜುಲೈ 6ರಿಂದ ಹೊಸ ವೇಳಾಪಟ್ಟಿ ಜಾರಿಗೆ ಬರಲಿದೆ. ಹತ್ತು ರೈಲುಗಳು ಪಟ್ಟಂದೂರು ಅಗ್ರಹಾರದ ವರೆಗೆ (ಐಟಿಪಿಎಲ್), ನಾಲ್ಕು ರೈಲು ವೈಟ್‌ಫೀಲ್ಡ್ ಮತ್ತು ಒಂದು ರೈಲು ಬೈಯಪ್ಪನಹಳ್ಳಿ ನಿಲ್ದಾಣದವರೆಗೆ ಚಲಿಸಲಿವೆ.

ಬೆಳಿಗ್ಗೆ 10.25ರವರೆಗೆ ನಿಯಮಿತವಾಗಿ ಮೆಜೆಸ್ಟಿಕ್ ನಿಲ್ದಾಣದ ಮೂಲಕ ಹಾದುಹೋಗುವ ಮೆಟ್ರೊ ರೈಲುಗಳು ಎಂದಿನಂತೆ ಇರಲಿವೆ. ಅದರ ಜೊತೆಗೆ ಬೆಳಿಗ್ಗೆ 8.48, 8.58, 9.08, 9.18, 9.29, 9.39, 9.50, 10, 10.11, 10.21, 10.39, 10.50, 11.00, 11.22ಕ್ಕೆ ಹೆಚ್ಚುವರಿ ರೈಲುಗಳು ಸಂಚರಿಸಲಿವೆ.

ವೈಟ್‌ಫೀಲ್ಡ್ ಕಡೆಗೆ ರೈಲುಗಳನ್ನು ಹೆಚ್ಚಿಸಬೇಕು ಎಂಬ ಬೇಡಿಕೆಗೆ ಸ್ಪಂದಿಸಲಾಗಿದ್ದು, ಪ್ರಸ್ತುತ ಗರುಡಾಚಾರ್ ಪಾಳ್ಯ ಮೆಟ್ರೊ ನಿಲ್ದಾಣದಲ್ಲಿ ಕೊನೆಗೊಳ್ಳುವ 14 ರೈಲುಗಳಲ್ಲಿ, ಆರು ರೈಲುಗಳನ್ನು ಪಟ್ಟಂದೂರು ಅಗ್ರಹಾರ (ಐಟಿಪಿಎಲ್)/ ವೈಟ್‌ಫೀಲ್ಡ್ ವರೆಗೆ ವಿಸ್ತರಿಸಲಾಗಿದೆ. ಗರುಡಾಚಾರ್ ಪಾಳ್ಯ ಮೆಟ್ರೊ ನಿಲ್ದಾಣದಲ್ಲಿ ಇಳಿಯುವ ಪ್ರಯಾಣಿಕರಿಗೆ ಪಟ್ಟಂದೂರು ಅಗ್ರಹಾರ ಕಡೆಗೆ ಪ್ರಯಾಣಿಸಲು ಮುಂದಿನ ರೈಲು 3.5 ನಿಮಿಷಗಳ ಆವರ್ತನದಲ್ಲಿ ಲಭ್ಯವಿರುತ್ತದೆ.

ಬೈಯಪ್ಪನಹಳ್ಳಿ ನಿಲ್ದಾಣದಿಂದ ಮೈಸೂರು ರಸ್ತೆ ನಿಲ್ದಾಣದ ಕಡೆಗೆ ಸಂಜೆ 4.40ರ ಬದಲು ಸಂಜೆ 4.20ರಿಂದ ಪ್ರತಿ ಐದು ನಿಮಿಷಕ್ಕೆ ಒಂದು ರೈಲು ಇರಲಿದೆ. ಹಸಿರು ಮಾರ್ಗದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಮಧು ಬಂಗಾರಪ್ಪಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮನವಿ

'ಶಾಲೆಗಳಿಗೆ ಸೌಕರ್ಯ ಒದಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಿಗೆ ಅಗತ್ಯ ಮೂಲಸೌಕರ್ಯ ಒದಗಿಸುವಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಮನವಿ ಮಾಡಿದೆ.

ಈ ಬಗ್ಗೆ ಪ್ರಾಧಿಕಾರವು ಸಚಿವರಿಗೆ ಪತ್ರ ಬರೆದಿದೆ. 'ರಾಜ್ಯದಲ್ಲಿರುವ ಹಲವು ಸರ್ಕಾರಿ ಶಾಲೆಗಳ ತರಗತಿ ಕೊಠಡಿಗಳು ಶಿಥಿಲಾವಸ್ಥೆಯಲ್ಲಿವೆ. ಮಳೆಗಾಲದ ಈ ಹೊತ್ತಿನಲ್ಲಿ ಕೆಲ ಶಾಲೆಗಳ ಕೊಠಡಿಗಳಲ್ಲಿ ಮಳೆ ನೀರು ಸೋರುತ್ತಿರುವುದರಿಂದ ಪಾಠ ಮಾಡುವುದು ಕಷ್ಟವಾಗಿದೆ. ಆದ್ದರಿಂದ ಇಂತಹ ಶಾಲೆಗಳನ್ನು ಶಿಕ್ಷಣ ಇಲಾಖೆ ಕೂಡಲೇ ಗುರುತಿಸಿ, ಅವುಗಳ ದುರಸ್ತಿ ಕಾರ್ಯವನ್ನು ಕೈಗೊಳ್ಳಲು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ (ಎಸ್‌ಡಿಎಂಸಿ) ಅಗತ್ಯ ಹಣವನ್ನು ಆದಷ್ಟು ಶೀಘ್ರ ಬಿಡುಗಡೆಗೊಳಿಸಬೇಕು' ಎಂದು ಕೋರಿಕೊಂಡಿದೆ.

'ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮಕ್ಕೆ ಅನುಮತಿ ನೀಡಿರುವುದರಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸುವ ಶಿಕ್ಷಕರಿಗೆ ವಿಶೇಷವಾದ ತರಬೇತಿ ನೀಡಬೇಕಿದೆ. ವಿದ್ಯಾರ್ಥಿಗಳಿಗೆ ನೀಡಬೇಕಾದ ಶೂ ಮತ್ತು ಸಾಕ್ಸ್‌ಗಳಿಗೆ ಇಲ್ಲಿಯವರೆಗೂ ಅನುದಾನ ಬಿಡುಗಡೆಯಾಗಿಲ್ಲ. ಇಲ್ಲಿಯವರೆಗೆ ಎಸ್.ಡಿ.ಎಂ.ಸಿ ನೇತೃತ್ವದಲ್ಲಿ ಇದರ ನಿರ್ವಹಣೆ ಆಗುತ್ತಿತ್ತು. ಐ.ಎಸ್.ಓ ಬ್ರ್ಯಾಂಡ್‌ನ ಕಂಪನಿಯಿಂದಲೇ ಶೂ ಖರೀದಿಸುವಂತೆ ಶಿಕ್ಷಣ ಇಲಾಖೆ ಸೂಚಿಸಿದೆ. ಆದರೆ, ಇದಕ್ಕೆ ಅಗತ್ಯವಿರುಷ್ಟ ಹಣ ಬಿಡುಗಡೆಯಾಗಿಲ್ಲ' ಎಂದು ತಿಳಿಸಿದೆ.

'ಶಿಕ್ಷಣ ಹಕ್ಕು ಕಾಯ್ದೆಯಲ್ಲಿ ನಿಗದಿಗೊಳಿಸಿರುವಂತೆ 200ರಿಂದ 220 ದಿನಗಳ ಬದಲು, ಕನಿಷ್ಠ 100 ದಿನಗಳು ಪೂರ್ಣವಾಗಿ ಪಾಠ ಮಾಡಲು ಕೂಡ ಅಧ್ಯಾಪಕರಿಗೆ ಕಷ್ಟವಾಗುತ್ತದೆ. ಶಿಕ್ಷಕರು ಸಂಪೂರ್ಣ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಆಗುತ್ತಿಲ್ಲ. ಈ ಎಲ್ಲ ಸಮಸ್ಯೆಗಳನ್ನು ಕೂಡಲೇ ಪರಿಹರಿಸಿ, ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಮುಂದಾಗಬೇಕು' ಎಂದು ಪತ್ರದಲ್ಲಿ ಮನವಿ ಮಾಡಿದೆ.



ಸಮವಸ್ತ್ರ ಹೊಲಿಸಿಲ್ಲ

'ಸರ್ಕಾರವು ಸಿದ್ಧ ಸಮವಸ್ತ್ರ ನೀಡುತ್ತಿದ್ದನ್ನು ನಿಲ್ಲಿಸಿದ್ದರಿಂದ ಸಾಕಷ್ಟು ತೊಂದರೆಯಾಗಿದೆ. ಸಮವಸ್ತ್ರ ನೀಡುವ ಬದಲು ಕೇವಲ ಬಟ್ಟೆ ನೀಡಲಾಗುತ್ತಿದೆ. ಆರ್ಥಿಕ ಸಮಸ್ಯೆಯಿಂದಾಗಿ ಹಲವು ವಿದ್ಯಾರ್ಥಿಗಳು ಇನ್ನೂ ಸಮವಸ್ತ್ರ ಹೊಲಿಸಿಲ್ಲ. ಹೀಗಾಗಿ, ಮಕ್ಕಳು ಸಮವಸ್ತ್ರವಿಲ್ಲದೆ ಶಾಲೆಗೆ ಬರುವಂತಾಗಿದೆ. ಆದ್ದರಿಂದ ವಿದ್ಯಾರ್ಥಿಗಳ ಖಾತೆಗೆ ಸರ್ಕಾರ ಹೊಲಿಗೆ ವೆಚ್ಚದ ಹಣ ಪಾವತಿಸಬೇಕು' ಎಂದು ಪ್ರಾಧಿಕಾರವು ಸಚಿವರಿಗೆ ಮನವಿ ಮಾಡಿದೆ.

155 ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಂಗಿ ಪತ್ತೆ ಸಂಬಂಧ ಶುಕ್ರವಾರ 899 ಮಂದಿಗೆ ಪರೀಕ್ಷೆ ಮಾಡಲಾಗಿದ್ದು, ಬೆಂಗಳೂರಿನಲ್ಲಿ 107 ಸೇರಿ ರಾಜ್ಯದಲ್ಲಿ 155 ಮಂದಿಗೆ ಡೆಂಗಿ ದೃಢಪಟ್ಟಿದೆ.

ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ, ಈ ಪ್ರಕರಣಗಳಲ್ಲಿ ನಾಲ್ಕು ಮಂದಿ ಒಂದು ವರ್ಷದೊಳಗಿನವರಾದರೆ, 44 ಮಂದಿ ಒಂದರಿಂದ 18 ವರ್ಷದೊಳಗಿನರಾಗಿದ್ದಾರೆ. 107 ಮಂದಿ 18 ವರ್ಷ ಮೇಲ್ಪಟ್ಟವರಾಗಿದ್ದಾರೆ. ಸದ್ಯ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 343 ಡೆಂಗಿ ಪೀಡಿತರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಗುರುವಾರ 1,502 ಪರೀಕ್ಷೆ ನಡೆಸಲಾಗಿತ್ತು. ಇದರಿಂದಾಗಿ 286 ಪ್ರಕರಣ ಖಚಿತಪಟ್ಟಿದ್ದವು. ಶುಕ್ರವಾರ ಪರೀಕ್ಷೆಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ.

ಬೆಂಗಳೂರಿನಲ್ಲಿ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 1,793ಕ್ಕೆ ಏರಿಕೆಯಾಗಿದೆ. ಚಿಕ್ಕಮಗಳೂರು (521), ಮೈಸೂರು (496) ಹಾಗೂ ಹಾವೇರಿ (481) ಜಿಲ್ಲೆಯಲ್ಲಿ ಅಧಿಕ ಡೆಂಗಿ ಪ್ರಕರಣಗಳು ದೃಢಪಟ್ಟಿವೆ.

'ಎಚ್.ಎಂ.ಟಿ ಗೆ ಜೀವ ತುಂಬುವೆ'

ಮಂಡ್ಯ: 'ಎಚ್.ಎಂ.ಟಿ. ಕಾರ್ಖಾನೆ, ಭದ್ರಾವತಿಯ ವಿ.ಐ.ಎಸ್.ಎಲ್. ಕಾರ್ಖಾನೆ ಮತ್ತು ಆಂಧ್ರಪ್ರದೇಶದ ವೈಜಾಗ್‌ನ ಆರ್.ಐ.ಎನ್.ಎಲ್. ಸ್ಟೀಲ್ ಪ್ಲಾಂಟ್ ಸೇರಿದಂತೆ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳಿಗೆ ಜೀವ ತುಂಬುವ ಕೆಲಸ ಮಾಡುತ್ತೇನೆ' ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ನಗರದಲ್ಲಿ ಶುಕ್ರವಾರ ಜನತಾದರ್ಶನ ಕಾರ್ಯಕ್ರಮದಲ್ಲಿ ಭರವಸೆ ನೀಡಿದರು.

ಪ್ರಜಾವಾಣಿ ಶನಿವಾರ, 6 ಜುಲೈ 2024

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



ಸೆಕ್ಸ್‌ಟಿಂಗ್ ಅಂಕೆಯಲ್ಲಿದ್ದರೆ ಆತಂಕವಿರದು

ರೂಪಾ ಕೆ.ಎಂ.

ಇಡೀ ಜಗತ್ತನ್ನೆ ಹಿಡಿಯಷ್ಟು ಮಾಡಿಕೊಂಡ ಮೊಬೈಲ್ ಎಂಬ ಮಾಯಾವಿಯ ಅಂಗಳದಲ್ಲಿ ಆಡುವ ಹದಿಹರೆಯದ ಮಕ್ಕಳನ್ನು ಕಂಡಾಗಲೆಲ್ಲ ಪೋಷಕರ ಎದೆಯಲ್ಲಿ ಸಣ್ಣ ಅನುಮಾನ. ಮೊಬೈಲ್ ಹಿಡಿದುಕೊಂಡು ಮೆಸೇಜ್ ನೋಡುತ್ತಿರುವ ಮಗನೋ, ಮಗಳೋ ತುಟಿಯಂಚಿನಲ್ಲಿ ನಗು ತುಳುಕಿಸಿದರೆ, ಬೆರಳುಗಳ ನಡುವೆ ಸರಾಗವಾಗಿ ಹರಿಯುವ ಭಾವನೆಗಳು ಜಿಗಿಯುವ ರೀತಿಗೆ, ಮೊಬೈಲ್ ಪರದೆ ನೋಡುತ್ತ ನಸುನಾಚುವ ಮಕ್ಕಳ ಕಂಡು ಪೋಷಕರ ಮನಸ್ಸಿನಲ್ಲಿ ಹೊಯ್ದಾಟದ ಅಲೆ ಏಳುತ್ತದೆ. ಈ ವಯಸ್ಸೆ ಅಂಥದ್ದು; ಏನಿರಬಹುದು ಆ ಮೆಸೇಜ್‌ನಲ್ಲಿ ಎಂಬ ಆತಂಕ ಶುರುವಾಗುತ್ತದೆ. ಓದುವ ವಯಸ್ಸಿನಲ್ಲಿ ಸೆಕ್ಸ್‌ಟಿಂಗ್ ಜಾಡಿಗೆ ಬಿದ್ದಿರಬಹುದಾ ಎಂಬ ಪ್ರಶ್ನೆಯೂ ಏಳುತ್ತದೆ.

ಕಾನೂನು ಹೀಗೆ ಹೇಳುತ್ತೆ...




ಈಗಾಗಲೇ ಆಗಿ ಹೋದ ಚಾಟ್, ವಿಡಿಯೊ, ಆಡಿಯೊ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುವವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 32ಕಲಂನಡಿ ಕೇಸು ದಾಖಲಿಸಬಹುದು. ಇದು ಸೈಬರ್ ಅಪರಾಧವಾಗುವುದರ ಜತೆಗೆ ಮಾಹಿತಿ ತಂತ್ರಜ್ಞಾನ-2000 ಕಾನೂನು ಕಾಯ್ದೆಯಡಿಯೂ ಬರುತ್ತದೆ.

ನೊಂದಿರುವ ವ್ಯಕ್ತಿ ಯಾವುದೇ ಸ್ಥಳದಿಂದಲಾದರೂ ಜಿರೋ ಎಫ್‌ಐಆರ್ ದಾಖಲಿಸಬಹುದು. ಈ ಕಾನೂನಿಗೆ ಗಡಿ ಇರುವುದಿಲ್ಲ. ವಕೀಲರ ಮುಖಾಂತರ ನೊಂದಿರುವ ವ್ಯಕ್ತಿ ಕೇಸು ದಾಖಲಿಸಲು ಅವಕಾಶವಿದೆ. ಆರೋಪ ಸಾಬೀತಾದರೆ ಅಪರಾಧಿಗೆ 78ರ ಕಲಂನಡಿ ಮೂರು ವರ್ಷಗಳ ಜೈಲು ಹಾಗೂ ದಂಡ ವಿಧಿಸುವ ಅವಕಾಶವಿದೆ.

ಮಂಜುಳಾ ಮುನವಳ್ಳಿ, ಹೈಕೋರ್ಟ್ ವಕೀಲೆ

ಸೆಕ್ಸ್‌ಟಿಂಗ್ ಎನ್ನುವುದು ಕೇವಲ ಹರೆಯಕ್ಕೆ ಸೀಮಿತವೇನಲ್ಲ. ಒಟ್ಟಿಗೆ ಒಂದೇ ಮನೆಯಲ್ಲಿ ಇದ್ದು ದ್ವೀಪಗಳಾಗಿ ಬದುಕುತ್ತಿರುವ ಸಂಗಾತಿಗಳು ತಾವು ಇಚ್ಛಿಸಿದ ಸಂಬಂಧದಲ್ಲಿ ಸೆಕ್ಸ್‌ಟಿಂಗ್‌ಗೆ ಅವಕಾಶ ಕೊಟ್ಟು, ಆಮೇಲೆ ಪೇಚಾಡುವ ಸಂಗತಿಗಳು ಸರ್ವೇ ಸಾಮಾನ್ಯವಾಗಿವೆ. ಹೀಗೆ ಯಾವುದೇ ವಯಸ್ಸಿನಲ್ಲಿರುವವರೂ ಸೆಕ್ಸ್‌ಟಿಂಗ್ ಮೂಲಕ ತೃಪ್ತರಾಗಬಹುದು. ಮನಸ್ಸಿಗೆ ಕಚಗುಳಿಯಿಡುವ ಪ್ರೇಮ–ಕಾಮದ ಬಿಸುಪಿರುವ ಮೆಸೇಜ್‌ಗಳನ್ನು ಪರಸ್ಪರ ಒಪ್ಪಿಗೆಯ ಮೇರೆಗೆ ಕಳಿಸಬಹುದು. ಆತ್ಮಾಭಿಮಾನಕ್ಕೆ ಧಕ್ಕೆಯಾಗದ ರೀತಿಯಲ್ಲಿ, ಪರಸ್ಪರ ಗೌರವ ನೀಡುವ ಸಂಬಂಧದ ಚೌಕಟ್ಟಿನಲ್ಲಿ ಇದ್ದಷ್ಟು ಹೊತ್ತು ಈ ಸೆಕ್ಸ್‌ಟಿಂಗ್ ನಿರುಪದ್ರವಿ.



ಏನಿದು ಸೆಕ್ಸ್‌ಟಿಂಗ್?

ಸೆಕ್ಸ್‌ಟಿಂಗ್ ಎನ್ನುವುದು ಲೈಂಗಿಕ ಅಭೀಪ್ಸೆಗಳನ್ನು ವ್ಯಕ್ತಪಡಿಸುವ ಮೆಸೇಜ್. ಕಾಮೋದ್ರೇಕ ಮಾತುಗಳಿರುವ ಮೆಸೇಜ್‌ಗಳನ್ನು, ಕಾಮಪ್ರಚೋದಿತ ಬರಹ, ಬೆತ್ತಲೆ, ಅರೆಬೆತ್ತಲೆ ಪೊಟೋಗಳನ್ನು ಪರಸ್ಪರ ಒಪ್ಪಿಗೆ ಆಧಾರದ ಮೇಲೆ ಮೊಬೈಲ್‌ನಲ್ಲಿ ಅಥವಾ ಅಂತರ್ಜಾಲ ಬಳಸಿ ಕಳಿಸುವುದು ಇದರ ಪರಧಿಯೊಳಗೆ ಬರುತ್ತದೆ. ಕಾಮಾಸಕ್ತಿಯೆಂಬುದು ಸಹಜವಾಗಿರುವುದರಿಂದ ಅದಕ್ಕೊಂದು ಚೌಕಟ್ಟು ಇರಬೇಕು.

ಮೊಬೈಲ್‌ನಲ್ಲಿ ನೇರವಾಗಿಯೋ, ಆ್ಯಪ್‌ಗಳ ಮೂಲಕ ಅಥವಾ ಸಾಮಾಜಿಕ ಜಾಲತಾಣಗಳ ಮೂಲಕ ಸೆಕ್ಸ್‌ಟಿಂಗ್ ಮಾಡಲು ಅವಕಾಶವಿದೆ. ಒಂದು ಅಧ್ಯಯನದ ಪ್ರಕಾರ ತಂತ್ರಜ್ಞಾನನುರಿತ ಈ ಕಾಲದ ಪೀಳಿಗೆಯು ಇಂಥ ಕಾಮವನ್ನು ಉದ್ರೇಕಿಸುವಂಥ ಮೆಸೇಜ್‌ಗಳ ಬಗ್ಗೆ ಒಲವು ಬೆಳೆಸಿಕೊಂಡಿರುತ್ತಾರೆ. ಶೇ 15ರಷ್ಟು ಮಂದಿ ಇಂಥ ಮೆಸೇಜ್‌ಗಳನ್ನು ಸರಾಗವಾಗಿ ಕಳಿಸಬಲ್ಲರು. ಶೇ 27ರಷ್ಟು ಮಂದಿ ತಮಗೆ ಬಂದ ಇಂಥ ಮೆಸೇಜ್‌ಗಳನ್ನು ಇಷ್ಟಪಟ್ಟು ಓದಿ ಸುಮ್ಮನಾಗುತ್ತಾರಂತೆ.

ಪ್ರೇಮಸಂಬಂಧದಲ್ಲಿ ಸೆಕ್ಸ್‌ಟಿಂಗ್ ಎನ್ನುವುದು ಸಹಜವಾದ ಆಕರ್ಷಣೆ. ಪ್ರೇಮಿಗಳು ಪರಸ್ಪರ ದೈಹಿಕವಾಗಿ ಸಮೀಪವಿರಲು ಸಾಧ್ಯವಿಲ್ಲದೇ ಇದ್ದಾಗಲ್ಲೆಲ್ಲ ಬೆಚ್ಚಗಿನ ಭಾವ ಸ್ಫುರಿಸುವ ಮಾತುಗಳೆಲ್ಲ ಸಾಮಾನ್ಯವಾಗಿರುತ್ತದೆ. ಪರಸ್ಪರ ಒಬ್ಬೊರನ್ನೊಬ್ಬರು ಅರಿಯಲು, ಬಂಧ ಗಟ್ಟಿಯಾಗಲು ಕಾಮದ ಬಿಸುಪಿರುವ ಮೆಸೇಜ್‌ಗಳ ಮೊರೆ ಹೋಗುತ್ತಾರೆ. ಎರಡೂ ಜೀವಗಳು ದೂರವಿದ್ದಾಗ ಸೆಕ್ಸ್‌ಟಿಂಗ್ ಅವರ ನಡುವೆ ಗಟ್ಟಿಯಾದ ಬಂಧವನ್ನು ಬೆಸೆಯುತ್ತದೆ. ಲೈಂಗಿಕ ಆರೋಗ್ಯಕ್ಕೆ ನೆರವಾಗುವುದಲ್ಲದೇ, ಉತ್ತಮ ಬಾಂಧವ್ಯ ಬೆಸೆಯುತ್ತದೆ. ಫ್ಲರ್ಟ್ ಮಾಡುವುದು, ದೈಹಿಕ ಹಾಗೂ ಭಾವನಾತ್ಮಕವಾಗಿ ಸೆಳೆಯುವ ಮೆಸೇಜ್‌ಗಳು ಸೇರಿದಂತೆ ಸೆಕ್ಸ್‌ಟಿಂಗ್‌ಗೆ ಹಲವು ರೂಪಗಳಿವೆ. ಆ ಕ್ಷಣದ ಖುಷಿ, ಒಂಟಿತನದ ನಿವಾರಣೆಗಾಗಿ ಹೀಗೆ ಹಲವು ಕಾರಣಗಳಿಗೆ ಸೆಕ್ಸ್‌ಟಿಂಗ್‌ನಲ್ಲಿ ತೊಡಗುತ್ತಾರೆ.

ಆರೋಗ್ಯಕರ ಸೆಕ್ಸ್‌ಟಿಂಗ್ ಸಹಜ ಆಕಾಂಕ್ಷೆಯ ರೂಪ. ಹರೆಯದಲ್ಲಿ ಹಾರ್ಮೋನಿನಲ್ಲಾಗುವ ವ್ಯತ್ಯಾಸಗಳಿಂದಾಗಿ ಸೆಕ್ಸ್ ಬಗ್ಗೆ ವಿಪರೀತ ಕುತೂಹಲ ಇಟ್ಟುಕೊಳ್ಳುವುದು, ಸಂಗಾತಿಯನ್ನು ಬಯಸುವುದೆಲ್ಲ ಸಹಜವಾಗಿರುತ್ತದೆ. ಸಣ್ಣ ಫ್ಲರ್ಟ್‌ನಿಂದ ಆರಂಭವಾಗುವ ಈ ಸೆಕ್ಸ್‌ಟಿಂಗ್ ಮೊಬೈಲ್ ಕ್ಯಾಮೆರಾದ ಮುಂದೆ ಯಾವುದೇ ಭಿಡೆ ಇಲ್ಲದೇ ಬೆತ್ತಲಾಗುವವರೆಗೂ ಬಂದು ನಿಲ್ಲಬಹುದು. ಭಾವಾನಾತ್ಮಕವಾಗಿ ಅಭದ್ರರಾಗಿರುವವರು, ಪ್ರೀತಿಯಿಂದ ವಂಚಿತಗೊಂಡವರು ಸೆಕ್ಸ್‌ಟಿಂಗ್‌ಗೆ ಬಹುಬೇಗ ಆಕರ್ಷಿತರಾಗುವ ಸಾಧ್ಯತೆ ಹೆಚ್ಚು. ಪದೇ ಪದೇ ಪ್ರೀತಿಪಾತ್ರರಿಂದ ಮೂದಲಿಕೆ ಹಾಗೂ ನಿರ್ಲಕ್ಷ್ಯಕ್ಕೆ ಒಳಗಾಗುವ ಮನಸ್ಥಿತಿಗೆ ಸೆಕ್ಸ್‌ಟಿಂಗ್ ಒಂದು ಬಿಡುಗಡೆಯ ಭಾವವನ್ನೂ ಒದಗಿಸಬಲ್ಲದು. ಜತೆಗೆ ತಾನೂ ಬೆಚ್ಚಗಿನ ಸಂಬಂಧದಲ್ಲಿ ಭದ್ರವಾಗಿದ್ದೇನೆ ಎಂಬ ಖುಷಿಯೂ ಸಿಗಬಹುದು.

ಯಾವಾಗ ತೊಡಕು?

ಪರಸ್ಪರ ಒಪ್ಪಿಗೆಯಿದ್ದಾಗ ಸೆಕ್ಸ್‌ಟಿಂಗ್ ಉಪದ್ರವಿಯಲ್ಲ. ಹೀಗೆ ಲೈಂಗಿಕಾಸಕ್ತಿಗಳನ್ನು ಮುಂದಿಟ್ಟುಕೊಂಡು ಅಂತರ್ಜಾಲದಲ್ಲಿ ಮೆಸೇಜ್ ಮಾಡುವುದು, ಲೈಂಗಿಕವಾಗಿ ಪ್ರಚೋದಿಸುವ ಚಿತ್ರಗಳನ್ನು ಕಳಿಸುವುದು, ಲೈಂಗಿಕ ಮೆಸೇಜ್‌ಗಳನ್ನು ಹರಿಯಬಿಡುವುದು ಇನ್ನೊಬ್ಬರ ಆತ್ಮಗೌರವವನ್ನು ಕುಂದಿಸುವಂಥ ಅಶ್ಲೀಲಭಾಷೆಯನ್ನು ಬಳಸುವುದೆಲ್ಲವೂ ಸೈಬರ್ ಅಪರಾಧ ಎನಿಸಿಕೊಳ್ಳುತ್ತದೆ.

ಕೆಲವೊಮ್ಮೆ ಆರಂಭದಲ್ಲಿ ಪರಸ್ಪರ ಒಪ್ಪಿಗೆಯ ಮೇಲೆ ಸೆಕ್ಸ್‌ಟಿಂಗ್ ನಡೆದಿರುತ್ತದೆ. ನಂತರ ಸಂಬಂಧ ಹಳಸಿದಾಗ ಸಂಬಂಧಪಟ್ಟ ವಿಡಿಯೊ, ಆಡಿಯೊ ರೆಕಾರ್ಡಿಂಗ್ ಮತ್ತು ಸ್ಕ್ರೀನ್ ಶಾಟ್‌ಗಳನ್ನು ಸಾಧನಗಳಾಗಿ ಬಳಸಿಕೊಂಡು ಬ್ಲ್ಯಾಕ್‌ಮೇಲ್ ಮಾಡುವ ತಂತ್ರವಾಗಿ ಬಳಕೆಯಾಗುತ್ತದೆ. ಸಂಬಂಧದಲ್ಲಿ ವಿನಿಮಯವಾಗುವ ಯಾವುದೇ ಮೆಸೇಜ್‌ಗಳನ್ನು ಮೂರನೇ ವ್ಯಕ್ತಿಗೆ ಹರಿಬಿಡುವ ಮುಂಚೆ ಮೂರು ಬಾರಿ ಯೋಚಿಸಿ.

ಯಾರಾನ್ನಾದರೂ ಹೀಗಳೆಯಲು, ಆತ್ಮಸ್ಥೈರ್ಯವನ್ನು ಕುಂದಿಸಲು ಅಶ್ಲೀಲ ಭಾಷೆ, ಚಿತ್ರ ಹಾಗೂ ಸನ್ನೆ ಬಳಸುವುದೆಲ್ಲ ಅಪಾಯಕಾರಿ ವರ್ತನೆ. ಸಾಮಾಜಿಕ ಜಾಲತಾಣಗಳನ್ನು, ಅಂತರ್ಜಾಲಗಳನ್ನು ಬಳಸುವಾಗ ಈ ಬಗ್ಗೆ ಸಮರ್ಪಕವಾಗಿ ಜ್ಞಾನ ಇಟ್ಟುಕೊಳ್ಳುವುದು ಒಳಿತು. ಯಾವುದೋ ಪಂಥ ಅಥವಾ ವ್ಯಕ್ತಿಯನ್ನು ಆರಾಧಿಸುವ ಭರಾಟೆಯಲ್ಲಿ ಮತ್ತೊಬ್ಬರಿಗೆ ಇಂಥ ಮೆಸೇಜ್‌ಗಳನ್ನು ಕಳಿಸಿ, ಆತ್ಮಸ್ಥೈರ್ಯ ಕುಗ್ಗಿಸುವ ಚಾಳಿಯಿದ್ದರೆ ಅದಕ್ಕೆ ತಕ್ಕ ಬೆಲೆ ತೆರಬೇಕಾಗುತ್ತದೆ. ಪದೇ ಪದೇ ಲೈಂಗಿಕ ಭಾವನೆಗಳನ್ನು ವ್ಯಕ್ತಪಡಿಸುವ ಮೆಸೇಜ್‌ಗಳನ್ನು ಕಳಿಸಿ ಇನ್ನೊಬ್ಬರಿಗೆ ಹಿಂಸೆ ನೀಡುವುದೂ ಅಪರಾಧ ಎನಿಸಿಕೊಳ್ಳುತ್ತದೆ.

ಗೀಳಾದರೆ ಏನು ಮಾಡಬಹುದು?

ಸದಾ ಒಂಟಿಯಾಗಿ, ಎಲ್ಲರ ನಡುವೆ ಇದ್ದು ದ್ವೀಪದಂತೆ ಬದುಕುತ್ತಿರುವವರು ಸದಾ ಒಂದಲ್ಲ ಒಂದು ಸಂಬಂಧದಲ್ಲಿ ಇರಲು ಇಚ್ಛಿಸುತ್ತಾರೆ. ಇಂಥವರಿಗೆ ಸೆಕ್ಸ್‌ಟಿಂಗ್ ಎನ್ನುವುದು ಗೀಳಾಗುವ ಸಾಧ್ಯತೆ ಇರುತ್ತದೆ. ಇಚ್ಛಿಸುವ ಜೀವದಿಂದ ತುಂಬು ಪ್ರೀತಿ ದೊರಕಿಬಿಟ್ಟರೆ ಅದನ್ನು ಬೇರೆ ಎಲ್ಲೂ ಅರಸುವ ಸಾಧ್ಯತೆ ಕಡಿಮೆ ಇರುತ್ತದೆ.

ಯಾವುದೇ ಸಂಬಂಧವಿರಲಿ ಅದಕ್ಕೆ ನಂಬಿಕೆ, ಪರಸ್ಪರ ಗೌರವ, ಪ್ರೀತಿ, ವಿಶ್ವಾಸಗಳೇ ಆಧಾರ ಸ್ತಂಭಗಳು. ಸಂಬಂಧಗಳಲ್ಲಿಯೂ ಏರಿಳಿತಗಳೆಲ್ಲ ಇರುವುದು ಸಹಜ. ಆದರೆ, ಅದು ಮುಕ್ಕಾಗದಂತೆ ನೋಡಿಕೊಳ್ಳಬೇಕು. ಸಂಬಂಧಗಳಲ್ಲಿ ಮುಕ್ತವಾಗಿ ಮಾತನಾಡುವ ವಾತಾವರಣವೊಂದನ್ನು ರೂಪಿಸಿಕೊಳ್ಳಲು ಸಾಧ್ಯವಾಗಿಬಿಟ್ಟರೆ ಎಂಥ ಸಮಸ್ಯೆಯನ್ನಾದರೂ ನೀಗಿಕೊಳ್ಳಬಹುದು.

ಮನೋಚಿಕಿತ್ಸಕರು ಏನು ಹೇಳ್ತಾರೆ?



ಕಾಮೋದ್ರೇಕ ಮಾತುಗಳಿಂದ ಗಮನ ಸೆಳೆಯುವ ಮನಸ್ಥಿತಿಯವರಿಗೆ ಸೆಕ್ಸ್‌ಟಿಂಗ್ ಬಹುದೊಡ್ಡ ಗೀಳಾಗಬಹುದು. ಲೈಂಗಿಕ ಮಾತುಗಳಿಂದಲೇ ಮತ್ತೊಬ್ಬರ ಮನಸ್ಸನ್ನು ಸೆಳೆಯುತ್ತೇನೆ, ಗೆಲ್ಲುತ್ತೇನೆ ಎಂಬ ಧಾಟಿಯಲ್ಲಿಯೇ ಇವರ ವರ್ತನೆ ಇರುತ್ತದೆ. ಖಾಸಗಿ ಅಂಗಗಳನ್ನು ಪ್ರದರ್ಶಿಸಿ, ಅಹಂ ತಣಿಸಿಕೊಳ್ಳುವ ಹಂತಕ್ಕೆ ಹೋಗುತ್ತದೆ. ನಿರಾಕರಣೆ ಅಥವಾ ಬೈಗುಳ ಸಿಕ್ಕಾಗ ಮನಸ್ಸು ಮತ್ತಷ್ಟು ವ್ಯಗ್ರಗೊಳ್ಳುವ ಸಾಧ್ಯತೆ ಇರುತ್ತದೆ. ಗೀಳು ವ್ಯಕ್ತಿತ್ವ ಹೊಂದಿರುವವರಲ್ಲಿ ಹೆಚ್ಚಾಗಿ ಇದನ್ನು ನೋಡಬಹುದು. ಹೀಗೆಲ್ಲ ಕಳಿಸುವ ಮೂಲಕ ಖುಷಿ ಹೊಂದುವ ಮನಸ್ಥಿತಿಯವರಾಗಿರುತ್ತಾರೆ. ಗುಪ್ತವಾದ ವರ್ತನೆಯನ್ನು ಅಳವಡಿಸಿಕೊಂಡಿರುವ ಇವರಿಗೆ ಸಾಮಾಜಿಕ ಜಾಲತಾಣಗಳಲ್ಲಿರುವ ಅನಾಮಿಕತೆ ಹೆಚ್ಚು ಇಷ್ಟವಾಗುತ್ತದೆ. ಹಾಗಾಗಿ ಅನಾಮಿಕವಾಗಿ ಪ್ರೊಫೈಲ್‌ಗಳನ್ನು ರಚಿಸಿ ಇಂಥ ಮೆಸೇಜ್ ಕಳಿಸಬಹುದು. ಆತ್ಮವಿಶ್ವಾಸ ಇಲ್ಲದವರು, ಆ್ಯಂಕ್ಸಿಯಸ್ ಅಟ್ಯಾಚ್‌ಮೆಂಟ್ ಇರುವವರು ತಮ್ಮ ಸಂಗಾತಿ ತಮಗೆ ವಿಧೇಯರಾಗಿದ್ದಾರೋ ಇಲ್ಲವೊ ಎಂದು ಖಾತ್ರಿ ಪಡಿಸಿಕೊಳ್ಳಲು ಇಂಥ ಗೀಳಿಗೆ ಬೀಳಬಹುದು. ಇಂಥ ಮೆಸೇಜ್ ಸ್ವೀಕರಿಸಿದವರು ಧೈರ್ಯಗುಂದದೆ ಆತ್ಮೀಯರ ಬಳಿ ಹಂಚಿಕೊಂಡು ಹಗುರಾಗಿ.ಇಂಥ ಪ್ರೊಫೈಲ್‌ಗಳನ್ನು ಬ್ಲಾಕ್ ಮಾಡಿ, ದೂರವಿರುವ ಸಾಧ್ಯತೆಯನ್ನು ಕಂಡುಕೊಳ್ಳಿ. ತೀರಾ ಕಿರಿಕಿರಿಯಾಗುತ್ತಿದ್ದರೆ ಆಪ್ತಸಲಹೆಗಾರರನ್ನು ಭೇಟಿಯಾಗಬಹುದು ಜತೆಗೆ ಕಾನೂನಿನ ಸಲಹೆ ಪಡೆಯಬಹುದು.

ಅರ್ಪಿತಾ ಮಿರ್ಚಾಂದಿನಿ, ಮನಃಶಾಸ್ತ್ರಜ್ಞೆ

ಬೇಡದ ಸೆಕ್ಸ್‌ಟಿಂಗ್‌ಗೆ ನಿರ್ಬಂಧ ಹೇಗೆ?

ಎರಡು ಮನಸ್ಸುಗಳ ನಡುವೆ ಆರೋಗ್ಯಕರ ಸೆಕ್ಸ್‌ಟಿಂಗ್ ಇದ್ದರೆ ಅದು ಖುಷಿ ತರಬಲ್ಲದು. ಇಲ್ಲವಾದರೆ ವಿನಾಕಾರಣ ಇಂಥ ಮೆಸೇಜ್‌ಗಳಿಂದ ಕಿರಿಕಿರಿಯಾಗಬಹುದು. ಆಗ ಅದರಿಂದ ಹೊರಬರುವುದು ಹೇಗೆ ಎಂಬ ದಾರಿ ಗೊತ್ತಿರಬೇಕು.

ಪದೇ ಪದೇ ಸೆಕ್ಸ್‌ಟಿಂಗ್ ಮೂಲಕ ಅಭೀಪ್ಸೆಯನ್ನು ವ್ಯಕ್ತಪಡಿಸುವ ಮನಸ್ಸಿನ ಬಗ್ಗೆ ಒಂದು ಬಂಧ ಇದ್ದರೆ, ತಿಳಿ ಹೇಳಲು ಪ್ರಯತ್ನಿಸಿ. ಇಲ್ಲವಾದರೆ ಮೂಲಾಜಿಲ್ಲದೇ ಅದನ್ನು ನಿರ್ಬಂಧಿಸಲು ಕಲಿಯಿರಿ. ಹರೆಯದ ಮಕ್ಕಳು ಸಮರ್ಪಕವಾಗಿ ಇದನ್ನು ನಿರ್ವಹಿಸಲು ಸಾಧ್ಯವಾಗದೇ ಹೋದರೆ ಪೋಷಕರು ಬೈಯುವ ಧಾಟಿಯಲ್ಲಿ ಬುದ್ಧಿ ಹೇಳದೆ, ಅವರ ಮನಸ್ಸನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ. ಕಳಿಸುವವರ ಸ್ಥಾನದಲ್ಲಿ ನಿಮ್ಮ ಮಗು ಇದ್ದರೆ, ಯಾಕೆ ಹೀಗಾಗುತ್ತದೆ ಎಂಬುದಕ್ಕೆ ಉತ್ತರ ಕಂಡುಕೊಳ್ಳಿ. ಅಂತರ್ಜಾಲವಿರಲಿ; ಅದರಲ್ಲಿರುವ ಆ್ಯಪ್‌ಗಳಿರಲಿ, ಮೊಬೈಲ್‌ಗಳೇ ಇರಲಿ ಯಾವುದನ್ನಾದರೂ ಸರಿಯಾಗಿ ಬಳಸುವುದನ್ನು ಕಲಿಯಿರಿ. ಒಂದೊಮ್ಮೆ ಇಂಥ ಬೇಡದ ಮೆಸೇಜ್ ಬರುತ್ತಿದ್ದರೆ ಬ್ಲಾಕ್ ಮಾಡುವ, ರಿಪೋರ್ಟ್ ಮಾಡುವ ದಾರಿಗಳನ್ನು ಕಲಿತಿರುವುದು ಒಳ್ಳೆಯದು. ಉಗುರಲ್ಲಿ ಹೋಗುವುದಕ್ಕೆ ಕೊಡಲಿ ಹಿಡಿದುಕೊಳ್ಳಬಾರದು ಎನ್ನುವ ಮಾತನ್ನು ಈ ವಿಚಾರದಲ್ಲಿ ಅಳವಡಿಸಿಕೊಳ್ಳುವುದು ಒಳ್ಳೆಯದು. ಅಂತರ್ಜಾಲದಲ್ಲಿ ಒಳ್ಳೆಯ ಸಂಗತಿಗಳಿದ್ದರೂ ಅಲ್ಲೊಂದು ಹಿಂಸಾತ್ಮಕ ಜಗತ್ತು ಮನೆಮಾಡಿಕೊಂಡಿದೆ. ವಿನಾಕಾರಣ ಆ ಜಗತ್ತಿನೊಳಗೆ ಪ್ರವೇಶ ಪಡೆದು, ಮನಸ್ಸು ಹಾಳು ಮಾಡಿಕೊಳ್ಳುವುದಕ್ಕಿಂತ ಮನಸ್ಸನ್ನು ತಿಳಿಯಾಗಿ ಇಟ್ಟುಕೊಳ್ಳಲು ಬಳಸಿ.

ಅಂತರಂಗ



ಅಕ್ಷರ ದಾಮ್ಲೆ

ಮರೆಯಲಾರೆ ಮನೆಯ

- **ಪದವಿ ಓದಲು ಮನೆಯಿಂದ ಹಾಸ್ಟೆಲ್‌ಗೆ ಬಂದಿರುವೆ. ಆದರೆ ಮನೆಯ ನೆನಪು ಹೆಚ್ಚು ಬರುತ್ತದೆ. ಓದಲು ಆಗುತ್ತಿಲ್ಲ. ಏನು ಮಾಡುವುದು?**

ಈ ಪ್ರಶ್ನೆಯನ್ನು ನೋಡಿದಾಗ ನನಗೆ ನನ್ನ ಕಾಲೇಜಿನ ದಿನಗಳ ನೆನಪಾಯಿತು. 12ನೇ ತರಗತಿಯವರೆಗೆ ಮನೆಯಿಂದಲೇ ಹೋಗುತ್ತಿದ್ದ ನನಗೆ ಪದವಿ ಓದಲು ದೂರದ ಊರಿಗೆ ಹೋದಾಗ ಮನೆಯ ನೆನಪಾದದ್ದು ಸುಳ್ಳಲ್ಲ. ಕೆಲವೊಂದು ಬಾರಿ ಕರೆ ಮಾಡಿ ಅತ್ತಿದ್ದೂ ಇದೆ. ಅಥವಾ ಕರೆಯಾಗುವಷ್ಟು ಹೊತ್ತು ಧ್ವನಿಯನ್ನು ದೃಢವಾಗಿಟ್ಟುಕೊಂಡು ಆಮೇಲೆ ಗದ್ಗದಿತನಾದದ್ದೂ ಇದೆ. ನನ್ನ ಜೊತೆಗಿದ್ದ ನನ್ನ ಸೀನಿಯರ್ ಇದನ್ನು ಗಮನಿಸಿದರೂ ಅದನ್ನು ಕೆದಕದೆ ಇನ್ನೇನೋ ಮಾತಿಗೆ ಎಳೆಯುತ್ತಿದ್ದ. ಬಹುಷಃ ಅದು ನನಗೆ ಈ ನೆನಪಿನಿಂದ ಹೊರಬರುವುದಕ್ಕೆ ಒಂದಷ್ಟು ಸಹಾಯ ಮಾಡಿತು. ಜೊತೆಗೆ ಇನ್ನೊಂದು ವಿಚಾರ ನನಗೆ ಅರ್ಥವಾದದ್ದು ಏನೆಂದರೆ, ಉತ್ತಮ ಶಿಕ್ಷಣ ಬೇಕೋ, ಮನೆಯಿಂದ ದೂರ ಹೋಗಲೇ ಬೇಕು ಎಂಬ ಸತ್ಯ. ಆದರೆ ಸಮಸ್ಯೆ ಆಗುವುದೆಲ್ಲಿ ಅಂದರೆ, ಈ ಸತ್ಯವನ್ನು ಅರಿತಿದ್ದರೂ ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ನಾವು ಮನೆಯಲ್ಲೇ ಸಿಕ್ಕಿ ಹಾಕಿಕೊಂಡಿರುತ್ತೇವೆ. ಇದಕ್ಕೆ ಒಂದು ನಮ್ಮ ಮನೆಯವರೊಂದಿಗಿನ ಭಾವನಾತ್ಮಕ ಬೆಸುಗೆ. ಇನ್ನೊಂದು ನಮಗೆ ಮನೆಯಲ್ಲಿ ಸಿಗುವ ಅನುಕೂಲಗಳು. ಮನೆಯಲ್ಲಿದ್ದಾಗ ತಂದೆ- ತಾಯಿಯರು ಮಾಡುವ ಅನೇಕ ಕೆಲಸಗಳು ನಮ್ಮ ಗಮನಕ್ಕೂ ಬಂದಿರುವುದಿಲ್ಲ. ಅಥವಾ ಅವನ್ನು ನಾವು ಅಸಡ್ಡೆಯಿಂದ ಸ್ವೀಕರಿಸಿರುತ್ತೇವೆ. ಅಥವಾ ಹೆತ್ತವರನ್ನು ‘taken for granted’ ಆಗಿ ಪರಿಗಣಿಸಿರುತ್ತೇವೆ. ಆದರೆ ಹಾಸ್ಟೆಲ್ ಗೆ ಹೋದ ಮೇಲೆ ಎಲ್ಲಾ ಕೆಲಸಗಳೂ ನಮ್ಮ ಹೊಣೆಯೇ ಆಗುತ್ತದೆ. ನಮ್ಮ ಜೀವನದ ಜವಾಬ್ದಾರಿ ನಮ್ಮ ಕೈಯಲ್ಲೇ ಇರುತ್ತದೆ. ಅಚಾನಕ್ಕಾಗಿ ಹಾಗಾದಾಗ ಒಂದು ರೀತಿಯ ಅಸಹಾಯಕತೆ ನಮ್ಮಲ್ಲಿ ಮೂಡುತ್ತದೆ. ಕಾರಣವೇನೆಂದರೆ, ಅಲ್ಲಿಯವರೆಗೆ ಇದ್ದಂತಹ support structure ಈಗಿರುವುದಿಲ್ಲ.

ಇದನ್ನು ನಾವು ಯಾವಾಗ ಅರಿಯುತ್ತೇವೆಯೋ ಮತ್ತು ಮನಸ್ಸನ್ನು ನಮ್ಮ ಜೀವನದ ಗುರಿಯತ್ತ ನೆಟ್ಟು ದೃಢಪಡಿಸುತ್ತೇವೆಯೋ, ಆವಾಗ ನಮಗೆ ಮನೆಯ ನೆನಪು ಮತ್ತು ಅದರಿಂದ ಅಧ್ಯಯನಕ್ಕೆ ಆಗುವ ತೊಂದರೆಯನ್ನು ಮೆಟ್ಟಿ ನಿಲ್ಲಲು ಸಾಧ್ಯವಾಗುತ್ತದೆ. ಒಂದಷ್ಟು ದಿನ ನೆನಪುಗಳು ಕಾಡಬಹುದು. ಅಂತಹ ಸಂದರ್ಭಗಳಲ್ಲಿ ಯಾವುದಾದರೂ ಆಸಕ್ತಿಕರ ಚಟುವಟಿಕೆಗಳಲ್ಲಿ ಭಾಗವಹಿಸಿ ಅಥವಾ ತೊಡಗಿಸಿಕೊಳ್ಳಿ. ಉದಾಹರಣೆಗೆ, ಕೊಠಡಿಯನ್ನು ಸ್ವಚ್ಛಗೊಳಿಸುವುದೋ ಅಥವಾ ಬಟ್ಟೆ ಒಗೆಯುವುದೋ ಅಥವಾ ಪುಸ್ತಕಗಳನ್ನು ಜೋಡಿಸುವುದೋ ಅಥವಾ ಬ್ಯಾಂಡ್ ಹಾಕಿಕೊಳ್ಳುವುದೋ ಅಥವಾ ರೆಕಾರ್ಡ್ ಬರೆಯುವುದೋ... ಹೀಗೆ ನಿಮ್ಮ ಮನಸ್ಸನ್ನು ಸೆಳೆಯಬಲ್ಲಂತಹ ಚಟುವಟಿಕೆಗಳನ್ನು ನೀವು ಆಯ್ಕೆ ಮಾಡಿಕೊಂಡಾಗ ನಿಮಗೆ ನಿಮ್ಮ comfort zone ನಿಂದ ಹೊರಗೆ ಬರುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಜೀವನದ ಸವಾಲುಗಳನ್ನು ಮೆಟ್ಟಿ ನಿಲ್ಲಲು ಬಲ ಬರುತ್ತದೆ.

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳುಹಿಸಬಹುದು.

ಗರಿ ಗರಿ ಪಕೋಡ

ರಸಾಸ್ವಾದ

ಕೆ.ವಿ.ರಾಜಲಕ್ಷ್ಮಿ

ಸಬಸ್ಸಿಗೆ ಪಕೋಡ



ಬೇಕಾಗುವ ಸಾಮಗ್ರಿ: ಸಣ್ಣಗೆ ಕತ್ತರಿಸಿದ ಎಳೆ ಸಬ್ಬಸಿಗೆ ಸೊಪ್ಪು 1 ಕಪ್, ಈರುಳ್ಳಿ 1/2 ಕಪ್, ಕಡಲೆ ಹಿಟ್ಟು 1 ಕಪ್, ಅಕ್ಕಿ ಹಿಟ್ಟು ಎರಡು ಚಮಚ, ರುಚಿಗೆ ತಕ್ಕಂತೆ ಅಚ್ಚಮೆಣಸಿನ ಪುಡಿ,ಉಪ್ಪು, ಚಿಟಿಕೆ ಇಂಗು.

ಮಾಡುವ ವಿಧಾನ: ಅಕ್ಕಿಹಿಟ್ಟು, ಕಡಲೆಹಿಟ್ಟು, ಅಚ್ಚ ಮೆಣಸಿನಪುಡಿ,ಉಪ್ಪು,ಇಂಗು ಇವೆಲ್ಲವನ್ನೂ ಸ್ವಲ್ಪ ನೀರು ಹಾಕಿ ಕಲೆಸಿಕೊಂಡು ನಂತರ ಸಬ್ಬಸಿಗೆ ಸೊಪ್ಪು ,ಈರುಳ್ಳಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ.ಅಣಿಯಾದ ಹಿಟ್ಟನ್ನು ಚಿಕ್ಕಚಿಕ್ಕ ಗಾತ್ರದಲ್ಲಿ ಎಣ್ಣೆಯಲ್ಲಿ ಮಧ್ಯಮ ಉರಿಯಲ್ಲಿ ಕರಿಯಿರಿ.

ಸಿಹಿ ಗೆಣಸಿನ ಫ್ರೈ



ಬೇಕಾಗುವ ಸಾಮಗ್ರಿ: ಸಿಪ್ಪೆ ಸುಲಿದು ಮಧ್ಯಮ ಸೈಜಿಗೆ ತುಂಡರಿಸಿದ ಗೆಣಸು 10-15, ಸಣ್ಣಗೆ ಕತ್ತರಿಸಿದ ಸ್ಪ್ರಿಂಗ್ ಆನಿಯನ್ (ಈರುಳ್ಳಿ ಸೊಪ್ಪು) ಎಸಳುಗಳು ಒಂದು ಹಿಡಿ, ರುಚಿಗೆ ತಕ್ಕಷ್ಟು ಚಾಟ್ ಮಸಾಲ, ಉಪ್ಪು.

ಮಾಡುವ ವಿಧಾನ: ಬಾಣಲಿಯಲ್ಲಿ ಎಣ್ಣೆ ಹಾಕಿ ಬಿಸಿಯಾಗುತ್ತಲೇ ಗೆಣಸು, ಈರುಳ್ಳಿ ಎಸಳುಗಳನ್ನು ಹಾಕಿ ಎರಡು ನಿಮಿಷ ಬಾಡಿಸಿ ನಂತರ ಚಾಟ್ ಮಸಾಲಾ ಉಪ್ಪು ಸೇರಿಸಿ, ತುಸು ನೀರು ಚಿಮುಕಿಸಿ ಮುಚ್ಚಳ ಮುಚ್ಚಿ ಐದು ನಿಮಿಷ ಬೇಯಿಸಿ.

ಕೊತ್ತಂಬರಿ ವಡೆ



ಬೇಕಾಗುವ ಸಾಮಗ್ರಿ: ಹೆಸರುಬೇಳೆ 1/2 ಕಪ್, ಕಡಲೆಬೇಳೆ 1/4ಕಪ್,ಸಣ್ಣಗೆ ಕತ್ತರಿಸಿದ ಎಳೆ ಕೊತ್ತಂಬರಿ ಸೊಪ್ಪು 1 ಕಪ್, ಒಣಮೆಣಸಿನಕಾಯಿ 6-8, ಹಸಿಶುಂಠಿ ಸಣ್ಣ ತುಂಡು,ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಹೆಸರುಬೇಳೆ,ಕಡಲೇಬೇಳೆಗಳನ್ನು ಎರಡು ಗಂಟೆ ನೆನೆಸಿ. ನಂತರ ನೀರು ಬಸಿದು ಒಣಮೆಣಸಿನಕಾಯಿ,ಶುಂಠಿ,ಉಪ್ಪು , ಸೇರಿಸಿ ತರಿತರಿಯಾಗಿ ರುಬ್ಬಿಕೊಂಡು,ಕೊತ್ತಂಬರಿ ಸೊಪ್ಪಿನೊಂದಿಗೆ ಚೆನ್ನಾಗಿ ಕಲೆಸಿ. ನಂತರ ವಡೆಯಾಕಾರದಲ್ಲಿ ತಟ್ಟಿ ಎಣ್ಣೆಯಲ್ಲಿ ಕರಿಯಿರಿ.

ಮಳೆಯಲ್ಲಿ ಹೀಗಿರಲಿ ಕೇಶರಕ್ಷಣೆ



ಗೌರಮ್ಮ ಕಟ್ಟಿಮನಿ

ಮಳೆ ಅಂದ್ರೆ ಯಾರಿಗ ತಾನೇ ಇಷ್ಟ ಆಗಲ್ಲ, ಜಿಟಿ ಜಿಟಿ ಮಳೆಯಲ್ಲಿ ಕೂದಲು ಬಿಚ್ಚಿ,ಆಗಸದತ್ತ ಮುಖ ಮಾಡಿ, ಗಿರಗಿರನೇ ತಿರುಗಿ, ಒಂದೆರೆಡು ಹನಿಗೆ ಬಾಯ್ತೆರೆದರೆ ಸಿಗುವ ಖುಷಿಗೆ ಪಾರವೇ ಇಲ್ಲ... ಆದರೆ ಮಳೆಯಲ್ಲಿ ನೆನೆದರೆ ಕೂದಲು ಹಾಳಾಗುತ್ತೆ, ಫಂಗಲ್ ಇನ್ನಿತರ ಸೋಂಕುಗಳು ಕಾಡುತ್ತವೆ ಎನ್ನುವುದು ಬಹುತೇಕರ ಚಿಂತೆ. ಮಳೆ ನೀರಿನಲ್ಲಿ ಆ್ಯಸಿಡಿಕ್ ಹಾಗೂ ದೂಳಿನ ಅಂಶ ಇರುವುದರಿಂದ ಕೂದಲು ಉದರುವಿಕೆ ಹೆಚ್ಚಾಗುತ್ತದೆ. ಹಾಗಾಗಿ ಮಳೆಯಲ್ಲಿ ನೆನೆದು, ಕೂದಲು ಒದ್ದೆಯಾಗಿದ್ದರೆ ಮೆಡಿಕೆಟೆಡ್ ಶಾಂಪೂ, ಕಂಡಿಷನರ್ ಹಾಕಿ ತಲೆಸ್ನಾನ ಮಾಡುವುದು ಉತ್ತಮ. ಅಥವಾ ಕೂಡಲೇ ಕೂದಲನ್ನು ಕಾಟನ್ ಬಟ್ಟೆ ಅಥವಾ ಟವೆಲ್‌ನಿಂದ ಮೃದುವಾಗಿ ಒರೆಸಿ, ಒಣಗಿಸಬೇಕು. ಶಾಂಪೂ ಬಳಸುವುದರಿಂದ ಕೂದಲು ಉದರುತ್ತದೆ ಎಂಬ ನಂಬಿಕೆ ಹಲವರಲ್ಲಿದೆ. ಹಾಳಾಗಿರೊ ಕೂದಲನ್ನು ತೆಗಿಯುವುದೇ ಶಾಂಪೂ ಕೆಲಸ. ಕೂದಲು ನಿರಂತರವಾಗಿ ಬೆಳೆಯುವ ಪ್ರಕ್ರಿಯೆ. ಶಾಂಪೂ ಪೊಳ್ಳು ಕೂದಲನ್ನು ತೆಗೆದು ಹೊಸ ಕೂದಲು ಬೆಳೆಯಲು ಅನುಕೂಲ ಮಾಡಿಕೊಡುತ್ತದೆ. ಸಲ್ಫೇಟ್ ಮುಕ್ತ, ಪ್ಯಾರಾಬನ್ ಮುಕ್ತ ಮತ್ತು ಎಸ್‌ಎಲ್‌ಎಸ್ ಮುಕ್ತ ಶಾಂಪೂ ಮತ್ತು ಕಂಡಿಷನರ್ ಬಳಸಬೇಕು. ಇದರಿಂದ ಕೂದಲು ತುಂಡಾಗುವುದು ಕಡಿಮೆ ಆಗುತ್ತದೆ. ಮಹಿಳೆಯರು ಮಳೆಗಾಲದಲ್ಲಿ ಕೂದಲು ಬಿಡುವುದರಿಂದ ಉದರುವ, ಹಾಳಾಗುವ ಸಾಧ್ಯತೆ ಜಾಸ್ತಿ. ಹಾಗಾಗಿ ಸಾಧ್ಯವಾದಷ್ಟು ಕಟ್ಟಿರಬೇಕು.

ಉಗುರು ಬೆಚ್ಚಗಿನ ನೀರಿನಿಂದ ತಲೆಸ್ನಾನ ಮಾಡಬೇಕು. ಹೆಚ್ಚು ಬಿಸಿ ನೀರಿನಿಂದ ಸ್ನಾನ ಮಾಡುವುದರಿಂದ ಕೂದಲು ಸುಲಭವಾಗಿ ಉದುರುತ್ತವೆ. ಬೋರ್‌ವೆಲ್ ನೀರಿನಿಂದ ತಲೆಸ್ನಾನ ಮಾಡಬಾರದು, ಸಿಹಿನೀರೆ ತಲೆಸ್ನಾನಕ್ಕೆ ಉತ್ತಮ.

- **ವಾರಕ್ಕೊಮ್ಮೆ ಎಣ್ಣೆ ಬಳಸಿ:** ಹೆಚ್ಚು ಕೊಬ್ಬರಿ ಎಣ್ಣೆ ಬಳಸುವುದರಿಂದ ಕೂದಲು ಚೆನ್ನಾಗಿ ಬೆಳೆಯುತ್ತದೆ ಎಂಬ ನಂಬಿಕೆ ಮೊದಲಿನಂದಲೂ ಇದೆ. ಆದರೆ ವಾರಕ್ಕೊಮ್ಮೆ ಎಣ್ಣೆ ಹಚ್ಚಿ ಒಂದು ಅಥವಾ ಅರ್ಧ ಗಂಟೆ ಬಿಟ್ಟು ಉಗುರು ಬೆಚ್ಚಗಿನ ನೀರಿಂದ ತಲೆಸ್ನಾನ ಮಾಡುವುದರಿಂದ ಕೂದಲು ಬೆಳೆಯಲು ಸಹಾಯವಾಗುತ್ತದೆ ಎನ್ನುತ್ತಾರೆ ಹುಬ್ಬಳ್ಳಿಯ ಚರ್ಮರೋಗ ತಜ್ಞ ಡಾ.ಗಿರೀಶಕುಮಾರ ಎಂ.
  ತಲೆಸ್ನಾನ ಆದ ನಂತರ ಟವೆಲ್ ಅಥವಾ ಬಟ್ಟೆ ಸುತ್ತಬಾರದು, ಹೆಚ್ಚು ಜೋರಾಗಿ ತಿಕ್ಕಬಾರದು, ಸಾಧ್ಯವಾದಷ್ಟು ಮೆಲ್ಲಗೆ ಒರೆಸಬೇಕು, ಮತ್ತು ಕೂದಲು ತಕ್ಷಣಕ್ಕೆ ಕಟ್ಟದೇ ಒಣಗಲು ಬಿಡಬೇಕು. ಹೇರ್‌ಡ್ರೈಯರ್ ಬಳಸಬಹುದು ಆದರೆ ಉಷ್ಣಾಂಶ (ಟೆಂಪರೆಚರ್) ಪ್ರಮಾಣ ಕಡಿಮೆ ಇರಬೇಕು. ಹಸಿಯಿದ್ದಾಗ ಜೋರಾಗಿ ತಿಕ್ಕುವುದರಿಂದಲೇ ಹೆಚ್ಚು ಶೇ 10ರಿಂದ 20ರಷ್ಟು ಕೂದಲು ತುಂಡಾಗುತ್ತವೆ ಎನ್ನುತ್ತಾರೆ ಅವರು.
- **ಜೆಲ್ ಬಳಕೆ ಬೇಡ:** ಹುಡುಗುರು ಸ್ಟೈಲಿಶ್ ಆಗಿ ಕಾಣಲು ಜೆಲ್ ಬಳಸುತ್ತಾರೆ, ಇದರಿಂದ ಬಿಳಿಕೂದಲು ಹೆಚ್ಚಾಗುತ್ತವೆ. ಕೆಲವರು ಜೆಲ್ ಬಳಸಿ, ಮೂರ್ನಾಲ್ಕು ದಿನ ಹಾಗೇ ಬಿಡುತ್ತಾರೆ. ಇದರಿಂದ ಕೂದಲು ಹಾಳಾಗುತ್ತವೆ. ಮಲಗುವ ಮುನ್ನ ಶಾಂಪೂ ಬಳಸಿ ತಲೆಸ್ನಾನ ಮಾಡಬೇಕು. ಇಲ್ಲದಿದ್ದರೆ ಕೂದಲು ಗಂಟಾಗುತ್ತದೆ, ದಿನ ಕಳೆದಂತೆ ಉದರಲು ಆರಂಭವಾಗುತ್ತದೆ. ಇದರಿಂದ ಮುಖದ ಮೇಲೆ ಮೊಡವೆಗಳಾಗುತ್ತದೆ. ಹುಡುಗುರ ಸಹ ವಾರಕ್ಕೊಮ್ಮೆ ಎಣ್ಣೆ ಬಳಸುವುದು ಉತ್ತಮ.
- **ಕಟ್ಟಿಗೆ ಬಾಚಣಿಕೆ ಬಳಸಿ:** ಪ್ಲಾಸ್ಟಿಕ್ ಬಾಚಣಿಕೆ ಬದಲು, ಕಟ್ಟಿಗೆ ಬಾಚಣಿಕೆ ಬಳಸಬೇಕು. ಇದನ್ನು ಸುದೀರ್ಘ ಕಾಲ ಬಳಸಬಹುದು. ವಾರಕ್ಕೊಮ್ಮೆ ತಲೆದಿಂಬಿನ ಕವರ್ ಬದಲಾಯಿಸಬೇಕು ಇಲ್ಲವೇ ತೊಳೆದುಹಾಕಬೇಕು. ಇಲ್ಲದಿದ್ದರೆ ನೆತ್ತಿ ಮೇಲೆ ಜಿಡ್ಡು ಉಂಟಾಗಿ, ಕೂದಲು ಹಾಳಾಗುವ ಸಾಧ್ಯತೆ ಇರುತ್ತದೆ.
- **ಪೌಷ್ಟಿಕ ಆಹಾರ ಸೇವಿಸಿ:** ಈಗಿನ ಮಕ್ಕಳು ಹೆಚ್ಚು ಜಂಕ್ ಫುಡ್ ಸೇವಿಸುವುದರಿಂದ ಅವರಲ್ಲಿ ಪೌಷ್ಟಿಕಾಂಶದ ಕೊರತೆ ಉಂಟಾಗುತ್ತದೆ. ವಿಟಮಿನ್ ಡಿ, ಹಿಮೊಗ್ಲೋಬಿನ್ ಕೊರತೆಯಿಂದ ಕೂದಲು ಬೆಳವಣಿಗೆ ಕುಂಠಿತವಾಗುತ್ತದೆ. ಸಾಧ್ಯವಾದಷ್ಟು ಹಸಿ ತರಕಾರಿ, ಸೊಪ್ಪು, ಮೊಳಕೆ ಕಾಳು, ಒಣಹಣ್ಣು, ಹಣ್ಣು, ಶೇಂಗಾ, ಬೆಲ್ಲ ಸೇವಿಸುವುದರಿಂದ ಕೂದಲು ಉತ್ತಮವಾಗಿ ಬೆಳೆಯುತ್ತದೆ. ಮಾಂಸಹಾರಿಗಳಾಗಿದ್ದರೆ ದಿನಕ್ಕೆರೆಡು ಬಾರಿ ಮೊಟ್ಟೆಯ ಬಿಳಿಭಾಗ ಸೇವಿಸಬೇಕು ಎನ್ನುತ್ತಾರೆ ಹುಬ್ಬಳ್ಳಿಯ ಚರ್ಮರೋಗ ತಜ್ಞ ಡಾ.ಗಿರೀಶಕುಮಾರ್ ಎಂ.
- **ಡಬ್ಬಿಯಲ್ಲಿರಲಿ ಹಣ್ಣು, ತರಕಾರಿ:** ಒತ್ತಡ ಮತ್ತು ಪೌಷ್ಟಿಕಾಂಶದ ಕೊರತೆ ಕೂದಲು ಉದರಲು ಮುಖ್ಯ ಕಾರಣ. ಕಚೇರಿಯಲ್ಲಿ ಕೆಲಸ ಮಾಡುವ ಮಹಿಳೆಯರು ಡಬ್ಬಿಯಲ್ಲಿ ಹಣ್ಣು, ನೆನೆಸಿಟ್ಟ ಕಾಳು, ತರಕಾರಿ, ಡ್ರೈ ಫ್ರೂಟ್ ಇಟ್ಟುಕೊಳ್ಳುವುದು ಉತ್ತಮ. ಕೆಲಸದ ಮಧ್ಯೆ ಆಗಾಗ ಬಿಡುವು ಮಾಡಿಕೊಂಡು ಇವುಗಳನ್ನು ಸೇವಿಸಬೇಕು.
  ಸಂಜೆ ಸ್ನ್ಯಾಕ್ಸ್ ತಿನ್ನುವ ಬದಲು ಇವುಗಳನ್ನು ಸೇವಿಸಬಹುದು. ದಾಳಿಂಬೆ, ದ್ರಾಕ್ಷಿ, ಅವಕಾಡೊ (ಬಟರ್ ಫ್ರೂಟ್), ಕಿವಿ, ಪಪ್ಪಾಯ ಹೆಚ್ಚು ಉಪಯುಕ್ತ. ಮೂರು ದಿನಕ್ಕೊಮ್ಮೆ ತಲೆಸ್ನಾನ ಮಾಡವುದು ಉತ್ತಮ. ವರ್ಕೌಟ್ ಮಾಡುವವರು, ಹೆಚ್ಚು ಬೆವರುವವರು ಎರಡು ದಿನಕ್ಕೊಮ್ಮೆ ತಲೆಸ್ನಾನ ಮಾಡಬಹುದು ಎನ್ನುತ್ತಾರೆ ಅವರು.
- **ರೀಲ್ಸ್ ಫಾಲೊ ಮಾಡಬೇಡಿ:** ಇತ್ತೀಚಿನ ದಿನಗಳಲ್ಲಿ ರೀಲ್ಸ್ ನೋಡಿ ಅನೇಕರು ಮನೆಯಲ್ಲೆ ಎಣ್ಣೆ ತಯಾರಿಸುವ ಪ್ರಯೋಗಕ್ಕೆ ಮುಂದಾಗುತ್ತಿದ್ದಾರೆ. ಆದರೆ ಇದಕ್ಕೆ ನಿರ್ದಿಷ್ಟ ಮಾರ್ಗದರ್ಶನ ಇರದೇ ಇರುವುದರಿಂದ ಕೆಲವರಿಗೆ ಅಲರ್ಜಿ ಉಂಟಾಗಿ ಕೂದಲು ಕಳೆದುಕೊಂಡು, ಚಿಕಿತ್ಸೆ ಪಡೆಯುತ್ತಿದ್ದಾರೆ. ಮೊದಲಿನಂದಲೂ ಬಳಸಿ ರೂಢಿಯಿದ್ದರೆ ಸಮಸ್ಯೆಯಿಲ್ಲ. ಆದರೆ ರೀಲ್ಸ್ ನೋಡಿ ಒಮ್ಮೆ ಬಳಸಿದರೆ, ರಿಯಾಕ್ಷನ್ ಆಗಿ ಕೂದಲು ಹಾಳಾಗಬಹುದು. ಹಾಗಾಗಿ ಎಚ್ಚರಿಕೆ ಅಗತ್ಯ ಎನ್ನುತ್ತಾರೆ ಡಾ.ಗಿರೀಶಕುಮಾರ್.

ಹಾರಂಗಿಗೆ ಒಳಹರಿವು ಏರಿಕೆ • ಕದ್ರಾ ಜಲಾಶಯದಿಂದ 30 ಸಾವಿರ ಕ್ಯುಸೆಕ್ ನೀರು ಹೊರಹರಿವು

ವಿವಿಧೆಡೆ ಮಳೆ: ನದಿಗಳಿಗೆ ಜೀವಕಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಉಡುಪಿ/ಕಲಬುರಗಿ: ರಾಜ್ಯದ ವಿವಿಧೆಡೆ ಶುಕ್ರವಾರವೂ ವರ್ಷಧಾರೆ ಮುಂದುವರಿದಿದೆ. ಕರಾವಳಿ ಜಿಲ್ಲೆಗಳಲ್ಲಿನ ನದಿಗಳಲ್ಲಿ ನೀರಿನ ಹರಿವು ಇನ್ನಷ್ಟು ಹೆಚ್ಚಿದೆ.

ಉಡುಪಿ ಜಿಲ್ಲೆಯಲ್ಲಿ ಎರಡು ಮನೆಗಳು ಭಾಗಶಃ ಹಾನಿಯಾಗಿವೆ. ಕೊಡಗು ಜಿಲ್ಲೆಯಲ್ಲಿ ಮನೆಯೊಂದು ಕುಸಿದಿದೆ.

ಉಳಿದಂತೆ, ಕೊಡಗು ಜಿಲ್ಲೆಯ ಹಾರಂಗಿ ಜಲಾಶಯಕ್ಕೆ ಒಳಹರಿವಿನ ಪ್ರಮಾಣದಲ್ಲಿ ಏರಿಕೆಯಾಗಿದೆ. ನೀರಿನ ಹರಿವು ಏರಿಕೆ ಹಿನ್ನೆಲೆಯಲ್ಲಿ ಕದ್ರಾ ಜಲಾಶಯದಿಂದ 30 ಸಾವಿರ ಕ್ಯುಸೆಕ್ ನೀರು ಹೊರಗೆ ಬಿಡಲಾಗುತ್ತಿದೆ.

ಮಡಿಕೇರಿ ವರದಿ: ಕೊಡಗು ಜಿಲ್ಲೆಯಲ್ಲಿ ಶುಕ್ರವಾರ ಹಲವೆಡೆ ಮಳೆಯ ಬಿರುಸು ಕಡಿಮೆಯಾಗಿದ್ದರೂ, ಮಡಿಕೇರಿ ನಗರದಲ್ಲಿ ಬಿರುಸಿನಿಂದ ಸುರಿಯಿತು.

ಭಾರಿ ಮಳೆ ಹಿನ್ನೆಲೆಯಲ್ಲಿ ಜನ ಜೀವನ ಅಸ್ತವ್ಯಸ್ತಗೊಂಡಿತ್ತು.

ಸಂಪಾಜೆ ಹೋಬಳಿಯ ಚಂಬು ಗ್ರಾಮದಲ್ಲಿ ಮನೆಯೊಂದು ಸಂಪೂರ್ಣ ಕುಸಿದಿದೆ. ಮನೆಯಲ್ಲಿದ್ದ ವಸ್ತುಗಳೆಲ್ಲವೂ ನಾಶವಾಗಿವೆ. ಹಾರಂಗಿ ಜಲಾಶಯಕ್ಕೆ ಒಳಹರಿವಿನ ಪ್ರಮಾಣವು 5,048 ಕ್ಯುಸೆಕ್‌ಗೆ ಏರಿದೆ.

ಉಡುಪಿಯಲ್ಲಿ ಧಾರಾಕಾರ ಮಳೆ–ಉಡುಪಿ ವರದಿ: ಜಿಲ್ಲೆಯಾದ್ಯಂತ ಶುಕ್ರವಾರ ಧಾರಾಕಾರ ಮಳೆ ಮುಂದುವರಿದಿದ್ದು, ಕೆಲವೆಡೆ ತಗ್ಗು ಪ್ರದೇಶಗಳು ಜಲಾವೃತವಾಗಿವೆ.

ನದಿಗಳಲ್ಲಿ ನೀರಿನ ಹರಿವು ಹೆಚ್ಚಿದೆ. ಹಿರಿಯಡ್ಕ ಪರಿಸರದಲ್ಲಿ ನದಿ ಪಾತ್ರದ ಕೃಷಿ ಭೂಮಿಗಳು ಜಲಾವೃತವಾಗುವ ಭೀತಿ ಉಂಟಾಗಿದೆ. ಕುಂದಾಪುರದಲ್ಲೂ ಮಳೆ ಬಿರುಸುಗೊಂಡಿದೆ.

ಬೈಂದೂರು ತಾಲ್ಲೂಕಿನ ಸಾಲ್ಬುಡ, ಮರವಂತೆ, ಪಡುಕೋಣೆ, ನಾವುಂದ, ಅರೆಹೊಳೆ, ಕುದ್ರು, ಚಿಕ್ಕಳ್ಳಿ ಮೊದಲಾದೆಡೆ ನೆರೆ ಕೊಂಚ ಮಟ್ಟಿಗೆ ಇಳಿಕೆಯಾದರೂ ಕೃಷಿ ಪ್ರದೇಶಗಳು ಮುಳುಗಡೆಯಾಗಿವೆ.


ಕಾರ್ಕಳ ತಾಲ್ಲೂಕಿನ ನೀರೆಯಲ್ಲಿ ಕಾಲು ಸಂಕಕ್ಕೆ ಹಾನಿಯಾಗಿದೆ. ಬೋಳ ಗ್ರಾಮದ ತಿಳಿಯೂರು ಪದವಿನಲ್ಲಿ ನಾರಾಯಣ ಎಂಬುವವರ ಮನೆಯ ಚಾವಣಿ ಕುಸಿದಿದೆ. ಕಣಜಾರು ಗ್ರಾಮದಲ್ಲಿ ಕಲ್ಯಾಣಿ ಎಂಬುವವರ ಮನೆ ಮೇಲೆ ಮರ ಬಿದ್ದು ಮನೆ ಭಾಗಶಃ ಹಾನಿಗೊಂಡಿದೆ.

ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ. ಚಿಕ್ಕಮಗಳೂರು ನಗರ ಹಾಗೂ ಜಿಲ್ಲೆಯ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ಭಾಗದಲ್ಲಿ ಮಳೆ ಸುರಿಯಿತು.

ಕಲ್ಯಾಣ ಕರ್ನಾಟಕದ ವಿವಿಧೆಡೆ ಮಳೆ–ಕಲಬುರಗಿ ವರದಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದೆ.

ಕಲಬುರಗಿ ನಗರ, ಜಿಲ್ಲೆಯ ಚಿತ್ತಾಪುರ, ಮುಡಬೂಳ, ಮರಗೋಳ, ದಂಡೋತಿ, ಇವಣಿ, ಮೊಗಲಾ, ಇಟಗಾ ಗ್ರಾಮಗಳಲ್ಲಿ ಮಳೆಯಾಗಿದೆ. ಅಫಜಲಪುರ ತಾಲ್ಲೂಕಿನ ರೇವೂರ್ (ಬಿ), ಸೇಡಂ ಹಾಗೂ ಕಾಳಗಿ ತಾಲ್ಲೂಕಿನಲ್ಲಿ ಮಳೆಯಾಗಿದೆ.

ಬೀದರ್ ನಗರದಲ್ಲಿ ಅರ್ಧಗಂಟೆ ಬಿರುಸಿನ ಮಳೆಯಾಯಿತು. ಬಸವಕಲ್ಯಾಣ, ಹುಲಸೂರ, ಹುಮನಾಬಾದ್, ಭಾಲ್ಕಿ ತಾಲ್ಲೂಕಿ ನಲ್ಲಿಯೂ ವರ್ಷಧಾರೆಯಾಗಿದೆ. ರಾಯಚೂರು, ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಯ ಕೆಲವೆಡೆ ಮಳೆಯಾಗಿದೆ.



ಮಡಿಕೇರಿ–ಚೆಟ್ಟಳ್ಳಿ ರಸ್ತೆ ಬದಿಯ ಅಬ್ಯಾಲ ಜಲಪಾತ ಶುಕ್ರವಾರ ಹಾಲ್ನೊರೆಯಂತೆ ಧುಮ್ಮಿಕ್ಕಿತು

ಪ್ರಜಾವಾಣಿ ಚಿತ್ರ: ರಂಜಿತ್ ಕುಮಾರ್ ಗುಹ್ಯ

ಸಾವೆಹಕ್ಲು: 34 ಸೆಂ.ಮೀ. ಮಳೆ

ಶಿವಮೊಗ್ಗ: ಮಲೆನಾಡಿನಲ್ಲಿ ಶುಕ್ರವಾರ ಮಳೆ ಬಿರುಸು ತುಸು ತಗ್ಗಿದ್ದು, ತುಂಗಾ, ಲಿಂಗನಮಕ್ಕಿ ಜಲಾಶಯಗಳಿಗೆ ಒಳಹರಿವು ಕಡಿಮೆ ಆಗಿದೆ. ಆದರೆ ಲಕ್ಕವಳ್ಳಿ ಬಳಿ ಇರುವ ಭದ್ರಾ ಜಲಾಶಯಕ್ಕೆ ಒಳಹರಿವು ಏರಿಕೆಯಾಗಿದೆ.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ಗಂಟೆಗಳಲ್ಲಿ ಹೊಸನಗರ ತಾಲ್ಲೂಕಿನ ಸಾವೆಹಕ್ಲುನಲ್ಲಿ ದಾಖಲೆ ಪ್ರಮಾಣದ 34 ಸೆಂ.ಮೀ ಮಳೆ ಸುರಿದಿದೆ. ಚಕ್ರಾ 30 ಸೆಂ.ಮೀ, ಹುಲಿಕಲ್ 29, ಮಾಸ್ತಿಕಟ್ಟೆ 28, ಮಾಣಿ 22 ಹಾಗೂ ಯಡೂರಿನಲ್ಲಿ 17 ಸೆಂ.ಮೀ ಮಳೆ ಆಗಿದೆ.

ನದಿಗೆ ಹರಿದ 500 ಕ್ಯುಸೆಕ್‌ನಷ್ಟು ನೀರು: ಭದ್ರಾ ಜಲಾಶಯದ ರಿವರ್ ಸ್ಲುಯಿಸ್ ಗೇಟ್‌ನ ಕನೆಕ್ಟಿಂಗ್ ಬೀಮ್ ಮುರಿದಿದೆ. ಹೀಗಾಗಿ ಕಳೆದ ಮೂರು ದಿನಗಳಿಂದ ಜಲಾಶಯದಿಂದ 500 ಕ್ಯುಸೆಕ್‌ನಷ್ಟು ನೀರು ಸೋರಿಕೆ ಆಗಿ ಭದ್ರಾ ನದಿಗೆ ಹರಿಯುತ್ತಿದೆ.

'ಮೂರು ತಿಂಗಳ ಹಿಂದೆಯೇ ಎರಡು ಗೇಟ್‌ಗಳ ಪೈಕಿ ಒಂದರಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಅದನ್ನು ದುರಸ್ತಿ ಮಾಡಿದ್ದೆವು. ಮಳೆ ಹೆಚ್ಚಾಗಿ ಮೂರು ದಿನಗಳ ಹಿಂದೆ ಸ್ಲುಯಿಸ್ ಗೇಟ್‌ನ ಸಂಪರ್ಕದ ಕೊಂಡಿ (ಬೀಮ್) ಮುರಿದು ಜಾಮ್ ಆಗಿದೆ. ಇದರಿಂದ ನೀರು ಸೋರಿಕೆ ಆಗುತ್ತಿದೆ' ಎಂದು ಭದ್ರಾ ಜಲಾಶಯ ವಿಭಾಗದ ಕಾರ್ಯ ನಿರ್ವಾಹಕ ಎಂಜಿನಿಯರ್ ರವಿಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸಮಸ್ಯೆ ಗಮನಕ್ಕೆ ಬರುತ್ತಲೇ ದುರಸ್ತಿ ಕಾರ್ಯ ಆರಂಭಿಸಿದ್ದೇವೆ. ಶನಿವಾರ ಮಧ್ಯಾಹ್ನದ ವೇಳೆಗೆ ದುರಸ್ತಿ ಕಾರ್ಯ ಪೂರ್ಣಗೊಳ್ಳಬಹುದು. ಸಹಾಯಕ ಸಿಬ್ಬಂದಿ ಜೊತೆ ಇಲ್ಲಿಯೇ ಬೀಡು ಬಿಟ್ಟಿದ್ದೇವೆ. ಇದರಿಂದ ಅಣೆಕಟ್ಟೆಯ ಸುರಕ್ಷತೆಗೆ ಯಾವುದೇ ತೊಂದರೆ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಭದ್ರಾ ಜಲಾಶಯದ ಸ್ಲುಯಿಸ್ ಗೇಟ್‌ನಲ್ಲಿ ಬಿರುಕು ದೊಡ್ಡ ಮಟ್ಟದಲ್ಲಿ ಆಗಿದೆ. 1.5 ಸಾವಿರ ಕ್ಯುಸೆಕ್‌ಗೂ ಹೆಚ್ಚು ನೀರು ನದಿಗೆ ಹರಿಯುತ್ತಿದೆ' ಎಂಬ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಆದರೆ ಅದನ್ನು ಜಲಾಶಯದ ನಿರ್ವಹಣಾ ವಿಭಾಗದ ಖಚಿತಪಡಿಸಿಲ್ಲ.

ದಾವಣಗೆರೆ ವರದಿ: ನಗರ ಸೇರಿ ಜಿಲ್ಲೆಯ ನ್ಯಾಮತಿ, ಸಂತೇಬೆನ್ನೂರು, ಹರಿಹರ, ಮಲೇಬೆನ್ನೂರು, ಹೊನ್ನಾಳಿಯಲ್ಲಿ ಉತ್ತಮ ಮಳೆಯಾಗಿದ್ದರೆ ಚನ್ನಗಿರಿ, ಜಗಳೂರು, ಮಾಯಕೊಂಡದಲ್ಲಿ ಸಾಧಾರಣ ಮಳೆಯಾಗಿದೆ. ಕೆರೆ–ಕಟ್ಟೆಗಳು ತುಂಬಿವೆ. ಹರಿಹರ ತಾಲ್ಲೂಕಿನ ಉಕ್ಕಡಗಾತ್ರಿಯ ಗುರು ಕರಿಬಸವೇಶ್ವರ ಅಜ್ಜಯ್ಯನ ದೇವಸ್ಥಾನದ ಪಕ್ಕದಲ್ಲಿ ತುಂಗಭದ್ರಾ ನದಿ ತುಂಬಿ ಹರಿಯುತ್ತಿದ್ದು, ಧಾರಾಕಾರ ಮಳೆಗೆ ದೇವಸ್ಥಾನದ ಸ್ನಾನ ಘಟ್ಟ ಮತ್ತು ಅಂಗಡಿಗಳು ಜಲಾವೃತಗೊಂಡಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	100.30	9,686	546
ಹಾರಂಗಿ	2,859	2,845.87	5,048	200
ಕಬಿನಿ	2,284.00	2,281.12	8,321	2,917
ಹೇಮಾವತಿ	2,922	2,894.40	8,447	250
ಲಿಂಗನಮಕ್ಕಿ	1,819	1,763.40	44,024	1340,84
ಸೂಪಾ (ಮೀ)	564	529.05	25,679	13,369
ಮಾಣಿ	595	575.20	2,669	000
ತುಂಗಭದ್ರಾ	1,633	1,590.80	18,500	295
ಮಲಪ್ರಭಾ	2,079.5	2,046.40	12,173	194
ಘಟಪ್ರಭಾ	2,175	2,112.40	19,992	154
ಭದ್ರಾ	186	129.6	16,171	350
ಆಲಮಟ್ಟಿ (ಮೀ)	519.6	513.22	53,901	430
ನಾರಾಯಣಪುರ (ಮೀ)	492.25	489.20	217.57	95.50

* ನೆಲಮಟ್ಟದಿಂದ

ಅಘನಾಶಿನಿ, ಗಂಗಾವಳಿ ನದಿಗಳಲ್ಲಿ ತಗ್ಗಿದ ಪ್ರವಾಹ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆ ಅಬ್ಬರ ಮುಂದುವರಿದಿದೆ. ಅಘನಾಶಿನಿ, ಗಂಗಾವಳಿ ನದಿಗಳಲ್ಲಿ ಪ್ರವಾಹ ಇಳಿಕೆಯಾಗಿದೆ. ಆದರೆ, ಕಾಳಿ ನದಿಯಲ್ಲಿ ನೀರಿನ ಹರಿವು ಹೆಚ್ಚಿದ್ದು, ಕಾರವಾರ ತಾಲ್ಲೂಕಿನ ಕದ್ರಾ ಜಲಾಶಯದಿಂದ ಅಧಿಕ ನೀರು ಹೊರಕ್ಕೆ ಬಿಡಲಾಗಿದೆ.

34.50 ಮೀಟರ್ ಗರಿಷ್ಠ ಸಾಮರ್ಥ್ಯದ ಅಣೆಕಟ್ಟೆಯಲ್ಲಿ ಸದ್ಯ 30.33 ಮೀ. ಎತ್ತರದವರೆಗೆ ನೀರು ಸಂಗ್ರಹವಾಗಿದೆ. ಜೊಯಿಡಾ, ಕೈಗಾ, ಯಲ್ಲಾಪುರ ಭಾಗದಲ್ಲಿ ನಿರಂತರ ಮಳೆ ಆಗುತ್ತಿದ್ದು, ಜಲಾಶಯಕ್ಕೆ ನೀರಿನ ಹರಿವು ಏರುತ್ತಿದೆ.

'ಜಲಾಶಯಕ್ಕೆ ನೀರಿನ ಒಳಹರಿವಿನ ಪ್ರಮಾಣ 19,676 ಕ್ಯುಸೆಕ್ ಇದ್ದು, ನೀರಿನ ಮಟ್ಟ ಏರಿಕೆಯಾಗುತ್ತಿದೆ. ಮುಂಜಾಗ್ರತೆಯಾಗಿ ಪ್ರತಿ ಗೇಟ್ ಮೂಲಕ ತಲಾ 7 ಸಾವಿರ ಕ್ಯುಸೆಕ್ ನೀರು ಹೊರಬಿಡಲಾಗುತ್ತಿದೆ' ಎಂದು ಕೆಪಿಸಿ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ಹೊಸಪೇಟೆ/ಬಳ್ಳಾರಿ ವರದಿ: ಬಳ್ಳಾರಿ, ವಿಜಯನಗರ ಜಿಲ್ಲೆಗಳಲ್ಲಿ 15 ದಿನ ವಿರಾಮದ ಬಳಿಕ ಶುಕ್ರವಾರ ಮಳೆಯಾಗಿದೆ. ಬಳ್ಳಾರಿ ನಗರ, ತೋರಣಗಲ್, ಕಂಪ್ಲಿ, ಹೊಸಪೇಟೆ ನಗರ, ಕಮಲಾ ಪುರ, ಮರಿಯಮ್ಮನಹಳ್ಳಿ, ಹಗರಿ ಬೊಮ್ಮನ ಹಳ್ಳಿ, ಕೂಡ್ಲಿಗಿಯಲ್ಲಿ ಮಳೆಯಾಗಿದೆ.

ತುಂಗಭದ್ರಾ ಜಲಾಶಯದ ಒಳಹರಿವು 18,500 ಕ್ಯುಸೆಕ್‌ಗೆ ಏರಿಕೆ ಆಗಿದೆ. ಸದ್ಯ ಜಲಾಶಯದಲ್ಲಿ 11.71 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಕರಾವಳಿಗೆ 'ರೆಡ್ ಅಲರ್ಟ್'

ಬೆಂಗಳೂರು: ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಶನಿವಾರವೂ ಗುಡುಗು ಸಹಿತ ಭಾರಿ ಮಳೆ ಮುಂದುವರಿಯುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಕರಾವಳಿಯ ಮೂರು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ 'ರೆಡ್ ಅಲರ್ಟ್' ನೀಡಲಾಗಿದ್ದು, ಈ ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಭಾರಿ ಮಳೆಯಾಗುವ ಸಂಭವವಿದೆ.

ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೊಡಗು, ಹಾಸನ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಹಾಗೂ ವಿಜಯನಗರ ಜಿಲ್ಲೆಯ ಕೆಲವು ಸ್ಥಳಗಳಲ್ಲಿ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ.

ಬಾಗಲಕೋಟೆ: ಎಸ್‌ಎಸ್‌ಎಲ್‌ಸಿ ಪಾಸಾದವರೂ ವೈದ್ಯರು!

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಎಸ್‌ಎಸ್‌ಎಲ್‌ಸಿ, ಪಿಯುಸಿ, ಬಿಎ, ಬಿಕಾಂ, ಟಿಸಿಎಚ್, ಐಟಿಐ ಸೇರಿ ವಿವಿಧ ಕೋರ್ಸ್ ಓದಿದ 300ಕ್ಕೂ ಹೆಚ್ಚು ಜನರು ಬಾಗಲಕೋಟೆ ಜಿಲ್ಲೆಯ ವಿವಿಧೆಡೆ ಕ್ಲಿನಿಕ್ ತೆರೆದು, ಸಾರ್ವಜನಿಕರಿಗೆ ಚಿಕಿತ್ಸೆ ನೀಡುತ್ತಿದ್ದಾರೆ.

ಜಿಲ್ಲೆಯಲ್ಲಿ ಭ್ರೂಣಹತ್ಯೆ, ಗರ್ಭಿಣಿ ಮತ್ತು ಬಾಣಂತಿ ಸಾವುಗಳ ಪ್ರಕರಣಗಳ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯು ಜಿಲ್ಲೆಯ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸಿ, ಮಾಹಿತಿ ಸಂಗ್ರಹಿಸಿದಾಗ ನಕಲಿ ವೈದ್ಯರಿರುವುದು ಬೆಳಕಿಗೆ ಬಂದಿದೆ.

ಗ್ರಾಮೀಣ ಪ್ರದೇಶದಲ್ಲಿ ಅಲ್ಲದೇ ಜಿಲ್ಲಾ ಕೇಂದ್ರ, ನಗರ, ಪಟ್ಟಣಗಳಲ್ಲಿ ನಕಲಿ ವೈದ್ಯರಿದ್ದಾರೆ. ಅವರ ಹೆಸರು, ಕ್ಲಿನಿಕ್ ಹೆಸರು ಮತ್ತು ವಿಳಾಸ, ದೂರವಾಣಿ ಸಂಖ್ಯೆ ಸೇರಿದಂತೆ ಪ್ರತಿಯೊಂದು ಮಾಹಿತಿ ಒಳಗೊಂಡ ವಿವರವಾದ ವರದಿಯನ್ನು ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿಗೆ ಸಲ್ಲಿಸಿದ್ದಾರೆ.

ಜಿಲ್ಲೆಯ ಸಾವಳಗಿ ಠಾಣಾ ವ್ಯಾಪ್ತಿಯಲ್ಲಿ 60 ಮಂದಿ ವೈದ್ಯಕೀಯ ಪದವಿ ಇಲ್ಲದೇ ಚಿಕಿತ್ಸೆ ನೀಡುತ್ತಿದ್ದಾರೆ. ಬೀಳಗಿ ಠಾಣಾ ವ್ಯಾಪ್ತಿಯಲ್ಲಿ 39, ಮುಧೋಳ ಠಾಣಾ ವ್ಯಾಪ್ತಿಯಲ್ಲಿ 37, ಕಲಾದಗಿ ಠಾಣಾ ವ್ಯಾಪ್ತಿಯಲ್ಲಿ 29 ಮಂದಿ ಅಂಥವರು ಇದ್ದಾರೆ. ಉಳಿದ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿಯೂ ನಕಲಿ ವೈದ್ಯರು ಕಂಡು ಬಂದಿದ್ದಾರೆ.

> **ಭ್ರೂಣ ಹತ್ಯೆ ಪ್ರಕರಣ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, ನೂರಾರು ಸಂಖ್ಯೆಯಲ್ಲಿ ನಕಲಿ ವೈದ್ಯರು ಇರುವುದು ಗೊತ್ತಾಯಿತು**
> **ಅಮರನಾಥ ರೆಡ್ಡಿ**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬಾಗಲಕೋಟೆ

50ಕ್ಕೂ ಹೆಚ್ಚು ಬಿಎಎಂಎಸ್ ಪದವೀಧರರು ಆಯುರ್ವೇದ ಪದ್ಧತಿ ಬದಲು ಅಲೋಪಥಿ ಚಿಕಿತ್ಸೆ ನೀಡುತ್ತಿದ್ದಾರೆ. ಅವರನ್ನು ಹೊರತುಪಡಿಸಿದರೆ ಉಳಿದವರೆಲ್ಲ ವೈದ್ಯಕೀಯ ಬಿಟ್ಟು ಬೇರೆ, ಬೇರೆ ವಿಷಯ ಓದಿದವರಾಗಿದ್ದಾರೆ.

ಮೂರು ತಿಂಗಳಿಂದ ಹಿಡಿದು 20 ವರ್ಷಗಳಿಂದ ವೈದ್ಯರ ಹೆಸರಿನಲ್ಲಿ ಚಿಕಿತ್ಸೆ ನೀಡುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿರುವ ವೈದ್ಯರ ಕೊರತೆಯಿಂದಾಗಿ ಜನರೂ ಇವರ ಬಳಿಗೆ ಹೋಗುತ್ತಾರೆ.

'ಅರ್ಹತೆ ಇಲ್ಲದವರೂ ವೈದ್ಯರಾಗಿ ಕೆಲಸ ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದೆ. ಪೊಲೀಸ್ ಇಲಾಖೆ ನೀಡಿದ ವರದಿಯನ್ವಯ ಪರಿಶೀಲಿಸಿ ಕ್ರಮಕೈಗೊಳ್ಳಲು ತಾಲ್ಲೂಕು ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಜಯಶ್ರೀ ಎಮ್ಮಿ ತಿಳಿಸಿದರು.

ಸಣ್ಣತನದ ರಾಜಕಾರಣ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಮುಖ್ಯಮಂತ್ರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ನಡೆಸುವ ಜನಸಂಪರ್ಕ ಸಭೆಗಳಿಗೆ ಮಾತ್ರ ಅಧಿಕಾರಿಗಳು ಹೋಗಬೇಕು ಎಂದು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿ ಸಣ್ಣತನದ ರಾಜಕಾರಣ ಪ್ರದರ್ಶಿಸುತ್ತಿದೆ' ಎಂದು ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದರು.

ಸಚಿವರಾದ ನಂತರ ಮೊದಲ ಬಾರಿಗೆ ನಗರದ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ಏರ್ಪಡಿಸಿದ್ದ 'ಜನತಾ ದರ್ಶನ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. 'ಇಂದಿನ ಜನತಾದರ್ಶನ ಕಾರ್ಯಕ್ರಮಕ್ಕೆ ಅಧಿಕಾರಿಗಳು ಬರದಂತೆ ರಾಜ್ಯ ಸರ್ಕಾರ ತಡೆಹಿಡಿದಿದೆ' ಎಂದು ಕಿಡಿಕಾರಿದರು.

ಜನರ ಸಮಸ್ಯೆ ಆಲಿಸಬೇಕು ಮತ್ತು ಪರಿಹಾರ ಕಲ್ಪಿಸಬೇಕು ಎಂಬ ಉದ್ದೇಶದಿಂದ ಜನತಾದರ್ಶನ ಮಾಡಬೇಕು ಎಂದು ತೀರ್ಮಾನಿಸಿ, ಮಂಡ್ಯ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದೆ. ಆದರೆ, ಸರ್ಕಾರವು ಸಚಿವ ಸಂಪುಟದಲ್ಲಿ ಗುರುವಾರ ಸುತ್ತೋಲೆ ಹೊರಡಿಸಿ, ಮುಖ್ಯಮಂತ್ರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಗೆ ಮಾತ್ರ ಜನತಾದರ್ಶನಕ್ಕೆ ಅವಕಾಶವಿದೆ. ಬೇರೆಯವರ ಜನತಾದರ್ಶನಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಹೇಳಿದೆ' ಎಂದು ಕಿಡಿಕಾರಿದರು. 'ನಾನು ಜನತಾ ದರ್ಶನ ನಡೆಸದಂತೆ ರಾಜ್ಯ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ' ಎಂದು ಆರೋಪಿಸಿದರು.

> **ಸುತ್ತೋಲೆ ಹೊರಡಿಸಿರುವುದು ನಾನಲ್ಲ. ಅಧಿಕಾರಿಗಳು ಶಿಷ್ಟಾಚಾರದಂತೆ ಸುತ್ತೋಲೆ ಹೊರಡಿಸಿದ್ದಾರೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಜನರನ್ನು ಇಟ್ಟುಕೊಂಡು ಜನತಾ ದರ್ಶನ ಮಾಡಲಿ. ಹಳ್ಳಿ, ಹಳ್ಳಿಯನ್ನೂ ತಿರುಗಲಿ. ಯಾರು ಬೇಡ ಅಂದವರು?**
> **ಡಿ.ಕೆ.ಶಿವಕುಮಾರ್,** ಡಿಸಿಎಂ

ತಿರುಗುಬಾಣವಾದ ಸುತ್ತೋಲೆ

ಎಚ್‌.ಡಿ.ಕುಮಾರಸ್ವಾಮಿ ಅವರು 2019ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ, 'ಸಿಎಂ ಮತ್ತು ಸಚಿವರಿಗಷ್ಟೇ ಅಧಿಕಾರಿಗಳ ಸಭೆ ಮತ್ತು ಜನತಾದರ್ಶನ ನಡೆಸಲು ಅವಕಾಶವಿದೆ. ಅಧಿಕಾರಿಗಳ ಸಭೆ ನಡೆಸುವ ಅಧಿಕಾರ ವಿರೋಧ ಪಕ್ಷದ ನಾಯಕರಿಗೂ ಇಲ್ಲ' ಎಂದು ಸುತ್ತೋಲೆ ಹೊರಡಿಸಿದ್ದರು.

'ಇದೇ ಸುತ್ತೋಲೆಯ ಅಸ್ತ್ರವನ್ನು ಬಳಸಿ, ಕಾಂಗ್ರೆಸ್ ಸರ್ಕಾರ ಕುಮಾರಸ್ವಾಮಿಯವರ ಜನತಾದರ್ಶನಕ್ಕೆ ಅಧಿಕಾರಿಗಳನ್ನು ಕಳುಹಿಸದೇ ತಿರುಗೇಟು ನೀಡಿದೆ' ಎಂದು ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದರು.

ಯಕ್ಷಗಾನ ಕಲಾವಿದ ಕುಂಬಳೆ ಶ್ರೀಧರ ರಾವ್ ನಿಧನ

ಮಂಗಳೂರು: ಯಕ್ಷಗಾನ ಕಲಾವಿದ ಕುಂಬಳೆ ಶ್ರೀಧರ ರಾವ್ (76) ಹೃದಯಾಘಾತದಿಂದ ಶುಕ್ರವಾರ ನಿಧನರಾದರು.

ಪುತ್ತೂರು ತಾಲ್ಲೂಕಿನ 34 ನೆಕ್ಕಿಲಾಡಿ ಗ್ರಾಮದ ಶಾಂತಿನಗರ ಸಮೀಪದ ಬೇರಿಕೆ ನಿವಾಸಿ ಶ್ರೀಧರ ರಾವ್ ಅವರಿಗೆ ಪತ್ನಿ, ಮೂವರು ಪುತ್ರರು ಇದ್ದಾರೆ.



ಕುಂಬಳೆ ಶ್ರೀಧರ ರಾವ್

ಕಾಸರಗೋಡು ಜಿಲ್ಲೆ ಕುಂಬಳೆಯ ಮಹಾಲಿಂಗ ಮತ್ತು ಕಾವೇರಿ ದಂಪತಿಯ ಪುತ್ರ ಶ್ರೀಧರ ರಾವ್, ಬಾಲ್ಯದಲ್ಲಿ ಕುಂಬಳೆ ಕಮಲಾಕ್ಷ ನಾಯಕ್ ಮತ್ತು ಚಂದು ಅವರಲ್ಲಿ ನಾಟ್ಯಾಭ್ಯಾಸ, ಉಡುಪಿ ಕಲಾ ಕೇಂದ್ರದಲ್ಲಿ ಬಡಗು ನೃತ್ಯಾಭ್ಯಾಸ ಮಾಡಿದವರು. ಕೂಡ್ಲು, ಮೂಲ್ಕಿ, ಇರಾ, ಕರ್ನಾಟಕ, ಧರ್ಮಸ್ಥಳ ಮೊದಲಾದ ಮೇಳಗಳಲ್ಲಿ ಆರು ದಶಕಗಳಿಗೂ ಹೆಚ್ಚು ಕಾಲ ಕಲಾ ಸೇವೆ ಮಾಡಿದ್ದಾರೆ. ಧರ್ಮಸ್ಥಳ ಮೇಳದಲ್ಲಿ ನಿರಂತರ ನಾಲ್ಕು ದಶಕ ಯಕ್ಷಸೇವೆ ನೀಡಿದ್ದಾರೆ.

ಸ್ತ್ರೀ ಪಾತ್ರಧಾರಿಯಾಗಿದ್ದ ಅವರು ಪುರುಷ ಪಾತ್ರದಲ್ಲೂ ಸೈ ಎನಿಸಿಕೊಂಡಿದ್ದರು. ಎಲ್ಲ ಪಾತ್ರಗಳಿಗೂ ನ್ಯಾಯ ಕೊಡುವ ಸಾಮರ್ಥ್ಯ ಅವರಲ್ಲಿತ್ತು. ತಾಳಮದ್ದಲೆ ಅರ್ಥಧಾರಿಯೂ ಆಗಿದ್ದರು.

ಬಾಲಕಿಗೆ ಲೈಂಗಿಕ ಕಿರುಕುಳ: ಶಿಕ್ಷಕನ ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ವಸತಿಶಾಲೆಯ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ 72 ವರ್ಷ ವಯಸ್ಸಿನ ದೈಹಿಕ ಶಿಕ್ಷಣ ಶಿಕ್ಷಕರನ್ನು ಎನ್.ಆರ್. ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಿವೃತ್ತಿ ನಂತರವೂ ಗುತ್ತಿಗೆ ಆಧಾರದಲ್ಲಿ ಅವರು ಕಾರ್ಯ ನಿರ್ವಹಿಸುತ್ತಿದ್ದರು. ಆಟದ ವಸ್ತುಗಳನ್ನು ಬೇರೆಡೆಗೆ ಇಡಲು ಸ್ಪೋರ್ಟ್ಸ್ ಕೊಠಡಿಗೆ ಕರೆದು ಲೈಂಗಿಕ ಕಿರುಕುಳ ನೀಡಿದ್ದಾಗಿ ಬಾಲಕಿ ಪೋಷಕರಿಗೆ ತಿಳಿಸಿದ್ದಳು. ಪೋಷಕರು ಠಾಣೆಗೆ ದೂರು ನೀಡಿದ ಬಳಿಕ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ನಾನೇ ಅಭ್ಯರ್ಥಿ' ಯೋಗೇಶ್ವರ್

ಚನ್ನಪಟ್ಟಣ: 'ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಗೆ ನಾನೇ ಮೈತ್ರಿ ಪಕ್ಷದ ಅಭ್ಯರ್ಥಿ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ತಿಳಿಸಿದರು.

ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಕಳೆದ ವಾರ ಕೇಂದ್ರ ಸಚಿವ ಎಚ್‌.ಡಿ.ಕುಮಾರ ಸ್ವಾಮಿ ಅವರನ್ನು ಭೇಟಿ ಮಾಡಿ ಚರ್ಚೆ ಮಾಡಿದ್ದೆ. ಶೀಘ್ರ ಅಭ್ಯರ್ಥಿ ಹೆಸರು ಸೂಚಿಸುವಂತೆ ಕೇಳಿದ್ದೇನೆ. ಕುಮಾರಸ್ವಾಮಿ ನನಗೆ ಸ್ಪರ್ಧಿಸುವಂತೆ ತಿಳಿಸಿದ್ದಾರೆ. ಅದಕ್ಕೆ ಅಧಿಕೃತ ಅನುಮೋದನೆಯನ್ನು ಅವರೇ ಕೊಡಬೇಕು. ಪತ್ರಿಕಾಗೋಷ್ಠಿ ಕರೆದು ಹೆಸರು ಘೋಷಣೆ ಮಾಡುವಂತೆ ಅವರಲ್ಲಿ ಮನವಿ ಮಾಡಿದ್ದೇನೆ' ಎಂದರು.

'ಸೋಮವಾರದಿಂದ ಚುನಾವಣೆ ಪ್ರಕ್ರಿಯೆ ಆರಂಭಿಸುತ್ತೇನೆ. ನನ್ನ ಹೆಸರು ಅಧಿಕೃತ ಅನುಮೋದನೆಗಾಗಿ ನಾನು ಕಾಯುತ್ತಿದ್ದೇನೆ' ಎಂದರು.

‘ನೀಟ್’ ರದ್ದು ತರ್ಕಬದ್ಧವಲ್ಲ: ಕೇಂದ್ರದ ವಾದ

‘ಸುಪ್ರೀಂ’ಗೆ ಕೇಂದ್ರ, ಎನ್‌ಟಿಎ ಅಫಿಡವಿಟ್ • ಪ್ರಾಮಾಣಿಕವಾಗಿ ಪರೀಕ್ಷೆ ಬರೆದವರ ಹಿತಾಸಕ್ತಿಯನ್ನೂ ಕಾಯಬೇಕಿದೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಮೇ 5ರಂದು ನಡೆದಿದ್ದ ‘ನೀಟ್–ಯುಜಿ’ ಪರೀಕ್ಷೆಯನ್ನು ರದ್ದುಪಡಿಸಿ, ಮರು ಪರೀಕ್ಷೆ ನಡೆಸುವುದು ತರ್ಕಬದ್ಧ ಕ್ರಮವಲ್ಲ. ಒಂದು ವೇಳೆ ಹಾಗೆ ಮಾಡಿದರೆ, ಪ್ರಾಮಾಣಿಕವಾಗಿ ಪರೀಕ್ಷೆ ಬರೆದಿರುವ ಲಕ್ಷಾಂತರ ಅಭ್ಯರ್ಥಿಗಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದು ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಸುಪ್ರೀಂ ಕೋರ್ಟ್‌ಗೆ ಶುಕ್ರವಾರ ತಿಳಿಸಿವೆ.

ಕೆಲ ಅಭ್ಯರ್ಥಿಗಳು, ಕೋಚಿಂಗ್ ಸಂಸ್ಥೆಗಳು ಮತ್ತು ನೀಟ್–ಯುಜಿ ಆಕಾಂಕ್ಷಿಗಳ ಕೆಲ ಪೋಷಕರು ಸಲ್ಲಿಸಿರುವ ಅರ್ಜಿಗಳಿಗೆ ಪ್ರತಿಕ್ರಿಯೆಯಾಗಿ ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ಎನ್‌ಟಿಎ ಪ್ರತ್ಯೇಕವಾಗಿ ಅಫಿಡವಿಟ್ ಸಲ್ಲಿಸಿವೆ. ನೀಟ್ ಪರೀಕ್ಷೆಯನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಕೆಯಾಗಿರುವ ಮನವಿಗಳಿಗೆ ಸಚಿವಾಲಯ ಮತ್ತು ಎನ್‌ಟಿಎ ವಿರೋಧ ದಾಖಲಿಸಿವೆ.

‘ಅಖಿಲ ಭಾರತ ಮಟ್ಟದ ಪರೀಕ್ಷೆಯಲ್ಲಿ ದೊಡ್ಡ ಪ್ರಮಾಣದ ಗೋಪ್ಯತೆ ಉಲ್ಲಂಘನೆ ಆಗಿರುವ ಕುರಿತು ಯಾವುದೇ ಪುರಾವೆಗಳಿಲ್ಲದೆ, ಸಂಪೂರ್ಣ ಪರೀಕ್ಷೆಯನ್ನು ಮತ್ತು ಈಗಾಗಲೇ ಘೋಷಿಸಲಾದ ಫಲಿತಾಂಶಗಳನ್ನು ರದ್ದುಗೊಳಿಸುವುದು ತರ್ಕಬದ್ಧವಲ್ಲ’ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ.

ಮುಖ್ಯಾಂಶಗಳು

- ನೀಟ್ ಪರೀಕ್ಷೆ ರದ್ದುಗೊಳಿಸಲು ಕೇಂದ್ರ, ಎನ್‌ಟಿಎ ವಿರೋಧ
- ದೊಡ್ಡ ಪ್ರಮಾಣದಲ್ಲಿ ಗೋಪ್ಯತೆ ಉಲ್ಲಂಘನೆ–ಬಲವಾದ ಪುರಾವೆಗಳಿಲ್ಲ
- ಪರೀಕ್ಷೆ ಅಕ್ರಮ ತಡೆ ಕಾಯ್ದೆ–2024 ಜಾರಿಗೆ ಬಂದಿದೆ



ಪ್ರಾಮಾಣಿಕ ಅಭ್ಯರ್ಥಿಗಳ ಹಿತಕಾಯಬೇಕಿದೆ: ಪರೀಕ್ಷೆಯಲ್ಲಿ ಯಾವುದೇ ಅನ್ಯಾಯದ ವಿಧಾನಗಳನ್ನು ಅನುಸರಿಸದೆ, ಪ್ರಾಮಾಣಿಕವಾಗಿ ಪರೀಕ್ಷೆ ಬರೆದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳ ಹಿತಾಸಕ್ತಿ ಕಾಯಬೇಕಿದ್ದು, ಅವರ ಹಕ್ಕುಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕಿದೆ. ಅಂತಹ ಲಕ್ಷಾಂತರ ಅಭ್ಯರ್ಥಿಗಳ ಹಿತಾಸಕ್ತಿಯನ್ನು ರಕ್ಷಿಸಲು ಸರ್ಕಾರ ಬದ್ಧವಾಗಿದೆ ಎಂದು ಅಫಿಡವಿಟ್‌ನಲ್ಲಿ ಹೇಳಲಾಗಿದೆ.

ಯಾವುದೇ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಗೋಪ್ಯತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಕೆಲ ಅಪರಾಧಗಳಿಂದ ಗೋಪ್ಯತೆ ಉಲ್ಲಂಘನೆಯಾಗಿದ್ದರೆ, ಅಂತಹ ವ್ಯಕ್ತಿಯನ್ನು ಕಾನೂನಿನ ಪ್ರಕಾರ ಕಠಿಣ ಶಿಕ್ಷೆಗೆ ಗುರಿಪಡಿಸಬೇಕಿದೆ ಎಂದು ಅದು ತಿಳಿಸಿದೆ.

ಯಾವುದೇ ಬಲವಾದ ಆಧಾರವಿಲ್ಲದೆ, ಕೇವಲ ಊಹೆಗಳ ಆಧಾರದ ಮೇಲೆ ಸಲ್ಲಿಕೆಯಾಗಿರುವ ಮನವಿಗಳನ್ನು ತಿರಸ್ಕರಿಸಬೇಕು. ಈ ಮೂಲಕ ಪ್ರಾಮಾಣಿಕ ಪರೀಕ್ಷಾರ್ಥಿಗಳು ಮತ್ತು ಅವರ ಕುಟುಂಬದವರಿಗೆ ಅನಗತ್ಯ ನೋವು ಮತ್ತು ಸಂಕಟ ಆಗದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ.

ಸಿಬಿಐ ತನಿಖೆ ಪ್ರಗತಿಯಲ್ಲಿದೆ: ‘ನೀಟ್–ಯುಜಿ’ಯಲ್ಲಿನ ಪರೀಕ್ಷಾ ಅಕ್ರಮ, ವಂಚನೆ, ನಕಲಿ ಅಭ್ಯರ್ಥಿ... ಸೇರಿದಂತೆ ವಿವಿಧ ಆರೋಪಗಳ ಕುರಿತು ಸಮಗ್ರ ತನಿಖೆ ನಡೆಸುವಂತೆ ಕೇಂದ್ರ ಸರ್ಕಾರ ಪ್ರಕರಣವನ್ನು ಸಿಬಿಐಗೆ ವಹಿಸಿದೆ. ಅದು 2024ರ ಜೂನ್ 23ರಂದು ಪ್ರಕರಣ ದಾಖಲಿಸಿದ್ದು, ಪಿತೂರಿ, ವಂಚನೆ, ಕರ್ತವ್ಯ ಲೋಪ, ಸಾಕ್ಷ್ಯನಾಶ ಸೇರಿದಂತೆ ಕೆಲ ಆರೋಪಗಳಿಗೆ ಸಂಬಂಧಿಸಿದಂತೆ ಕೆಲವು ಅಭ್ಯರ್ಥಿಗಳು, ಸಂಸ್ಥೆಗಳ ಮುಖ್ಯಸ್ಥರು ಮತ್ತು ಮಧ್ಯವರ್ತಿಗಳನ್ನು ಬಂಧಿಸಿದ್ದು, ತನಿಖೆ ನಡೆಸುತ್ತಿದೆ ಎಂದು ಅದು ಹೇಳಿದೆ.

ನೀಟ್–ಯುಜಿ 2024ರಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಸೇರಿದಂತೆ ಹಲವು ಬಗೆಯ ಅಕ್ರಮಗಳ ಆರೋಪಗಳು ವ್ಯಕ್ತವಾದ ಬೆನ್ನಲ್ಲೇ, ದೇಶದ ವಿವಿಧ ನಗರಗಳಲ್ಲಿ ವಿದ್ಯಾರ್ಥಿಗಳು, ಪೋಷಕರು ಮತ್ತು ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆಗಳನ್ನು ನಡೆಸಿದ್ದವು. ಈ ವಿಷಯವಾಗಿ ವಿರೋಧ ಪಕ್ಷಗಳು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದವು. ಎನ್‌ಟಿಎ ಸಮರ್ಪಕವಾಗಿ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಿಲ್ಲ ಎಂಬ ಕೂಗು ಕೇಳಿಬಂದಿತ್ತು. ಇದರ ಬೆನ್ನಲ್ಲೇ ಕೇಂದ್ರ ಶಿಕ್ಷಣ ಸಚಿವಾಲಯ, ಎನ್‌ಟಿಎ ಪರೀಕ್ಷಾ ಪ್ರಕ್ರಿಯೆಯನ್ನು ಸುಧಾರಿಸಲು ಇಸ್ರೊ ಮಾಜಿ ಅಧ್ಯಕ್ಷ ಡಾ. ಕೆ. ರಾಧಾಕೃಷ್ಣನ್ ಅವರ ನೇತೃತ್ವದ ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಚಿಸಿದೆ.

ಸಾರ್ವಜನಿಕ ಪರೀಕ್ಷೆಯಲ್ಲಿ ಪಾರದರ್ಶಕತೆ, ವಿಶ್ವಾಸಾರ್ಹತೆಯನ್ನು ಖಚಿತಪಡಿಸಿಕೊಳ್ಳಲು ಸಂಸತ್ತು 2024ರ ಫೆಬ್ರುವರಿ 12ರಂದು ಸಾರ್ವಜನಿಕ ಪರೀಕ್ಷೆ (ಅಕ್ರಮ ತಡೆ) ಕಾಯ್ದೆ 2024 ಅನ್ನು ತಂದಿದೆ. ಅದು 2024 ಜೂನ್ 21ರಿಂದ ಜಾರಿಗೆ ಬಂದಿದ್ದು, ಅಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ಈ ಕಾಯ್ದೆ ಸೂಚಿಸುತ್ತದೆ. ಈ ಸಂಬಂಧ ನಿಯಮಗಳನ್ನು 2024ರ ಜೂನ್ 23ರಂದು ಹೊರಡಿಸಲಾಗಿದೆ ಎಂದು ಕೇಂದ್ರ ತಿಳಿಸಿದೆ.

ಇದೇ 8ಕ್ಕೆ ವಿಚಾರಣೆ: ದೇಶದಾದ್ಯಂತ ಮೇ 5ರಂದು ನಡೆದ ‘ನೀಟ್–ಯುಜಿ’ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಮತ್ತು ಹೊಸದಾಗಿ ಪರೀಕ್ಷೆ ನಡೆಸಲು ನಿರ್ದೇಶಿಸುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಇದೇ 8ರಂದು ನಡೆಸಲಿದೆ.

ಆಗಸ್ಟ್ 11ಕ್ಕೆ ‘ನೀಟ್–ಪಿಜಿ’

ನವದೆಹಲಿ (ಪಿಟಿಐ): ಮುನ್ನೆಚ್ಚರಿಕೆ ಕ್ರಮಗಳ ಭಾಗವಾಗಿ ಮುಂದೂಡಲಾಗಿದ್ದ ‘ನೀಟ್–ಪಿಜಿ’ ಪರೀಕ್ಷೆಯನ್ನು ಆಗಸ್ಟ್ 11ರಂದು ಎರಡು ಪಾಳಿಯಲ್ಲಿ ನಡೆಸಲಾಗುವುದು ಎಂದು ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್‌ಬಿಇಎಂಎಸ್) ಶುಕ್ರವಾರ ಪ್ರಕಟಿಸಿದೆ.

ಈ ಹಿಂದೆ ಜೂನ್ 23ರಂದು ಪರೀಕ್ಷೆ ನಿಗದಿಯಾಗಿತ್ತು. ಆದರೆ ಕೆಲ ಸ್ಪರ್ಧಾತ್ಮಕ ಪರೀಕ್ಷಾ ಅಕ್ರಮಗಳ ಕುರಿತು ಆರೋಪಗಳು ವ್ಯಕ್ತವಾದ ಕಾರಣ ಪರೀಕ್ಷಾ ವಿಶ್ವಾಸಾರ್ಹತೆ ಬಗ್ಗೆ ಪ್ರಶ್ನೆಗಳು ಎದ್ದಿದ್ದವು. ಈ ಕಾರಣದಿಂದ ಮುನ್ನೆಚ್ಚರಿಕೆ ಕ್ರಮವಾಗಿ ಜೂನ್ 22ರಂದು ‘ನೀಟ್–ಪಿಜಿ’ ಅನ್ನು ಕೇಂದ್ರ ಆರೋಗ್ಯ ಸಚಿವಾಲಯ ಮುಂದೂಡಿತ್ತು.

ಪರೀಕ್ಷೆಯನ್ನು ಸಮರ್ಪಕವಾಗಿ ನಿರ್ವಹಿಸುವ ಉದ್ದೇಶದಿಂದ ಆರೋಗ್ಯ ಸಚಿವಾಲಯವು ಎನ್‌ಬಿಇಎಂಎಸ್, ತಾಂತ್ರಿಕ ಪಾಲುದಾರ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್), ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ), ಸೈಬರ್ ಸೆಲ್ ಅಧಿಕಾರಿಗಳ ಜತೆ ಹಲವು ಸಭೆಗಳನ್ನು ನಡೆಸಿ ಪರಿಶೀಲಿಸಿದೆ ಎಂದು ಮೂಲಗಳು ತಿಳಿಸಿವೆ.

> **ಬಿಹಾರದಲ್ಲಿ ನಡೆಯುವ ಯಾವುದೇ ಪ್ರಶ್ನೆ ಪತ್ರಿಕೆ ಸೋರಿಕೆ, ಸೇತುವೆ ಕುಸಿತ, ಕೊಲೆಗಳಿಗೆ ನನ್ನನ್ನು ದೂಷಿಸಲಾಗುತ್ತದೆ. ಸರ್ಕಾರದ ಬಳಿ ನನ್ನ ವಿರುದ್ಧ ಯಾವುದೇ ಸಾಕ್ಷ್ಯ ಆಧಾರಗಳಿದ್ದರೆ, ಆರೋಪ ಮಾಡುವ ಬದಲು ಬಂಧಿಸಲಿ**
> **ತೇಜಸ್ವಿ ಯಾದವ್,** ಆರ್‌ಜೆಡಿ ನಾಯಕ

ಸುದ್ದಿ 2 ನಿಮಿಷ

ಕರ್ನಾಟಕ ಬಿಜೆಪಿ ಉಸ್ತುವಾರಿಯಾಗಿ ಅಗರವಾಲ್

ನವದೆಹಲಿ: ಕರ್ನಾಟಕ ರಾಜ್ಯ ಘಟಕದ ಉಸ್ತುವಾರಿಯಾಗಿ ಸಂಸದ ರಾಧಾಮೋಹನ್‌ದಾಸ್ ಅಗರವಾಲ್ ಮತ್ತು ಸಹ ಉಸ್ತುವಾರಿಯಾಗಿ ಸುಧಾಕರ್ ರೆಡ್ಡಿ ಅವರನ್ನು ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಶುಕ್ರವಾರ ನೇಮಿಸಿದ್ದಾರೆ.

ಈವರೆಗೆ ಅರುಣ್ ಸಿಂಗ್ ಅವರು ರಾಜ್ಯ ಉಸ್ತುವಾರಿಯಾಗಿದ್ದರು. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಅಗರವಾಲ್ ಅವರು ರಾಜ್ಯದಲ್ಲಿ ಚುನಾವಣಾ ಉಸ್ತುವಾರಿ ಆಗಿದ್ದರು.

23 ರಾಜ್ಯಗಳು ಹಾಗೂ ಈಶಾನ್ಯ ರಾಜ್ಯಗಳಿಗೆ ಉಸ್ತುವಾರಿಗಳು ಹಾಗೂ ಸಹ ಉಸ್ತುವಾರಿಗಳನ್ನು ನೇಮಿಸಲಾಗಿದೆ. ಪುದುಚೇರಿಯ ಉಸ್ತುವಾರಿ ಹೊಣೆಯನ್ನು ಕರ್ನಾಟಕದ ನಿರ್ಮಲ್ ಕುಮಾರ್ ಸುರಾನಾ ಅವರಿಗೆ ವಹಿಸಲಾಗಿದೆ.



ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾದ ಬೆನ್ನಲ್ಲೇ ರಾಜ್ಯ ಉಸ್ತುವಾರಿಗಳನ್ನು ಬದಲಾಯಿಸಲಾಗಿದೆ. ರಾಧಾಮೋಹನ್‌ದಾಸ್ ಮಾರ್ಗದರ್ಶನದಲ್ಲಿ ಪಕ್ಷವು ರಾಜ್ಯದಲ್ಲಿ 17 ಲೋಕಸಭಾ ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಅವರ ಮಾರ್ಗದರ್ಶನವು ಕರ್ನಾಟಕದಲ್ಲಿ ಪಕ್ಷದ ಸಂಘಟನೆಯಲ್ಲಿ ಧನಾತ್ಮಕ ಬದಲಾವಣೆಗಳಿಗೆ ಕಾರಣವಾಗಲಿದೆ ಮತ್ತು ಮುಂದಿನ ಉಪ ಚುನಾವಣೆಗಳು, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಗೆಲುವನ್ನು ತಂದು ಕೊಡಲಿದೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪೋಶೆ ಕಾರು ಪ್ರಕರಣ: ಪ್ರಬಂಧ ಬರೆದು ಸಲ್ಲಿಸಿದ ಬಾಲಕ

ಪುಣೆ (ಪಿಟಿಐ): ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಜಾಮೀನು ನೀಡುವ ವೇಳೆ ಬಾಲನ್ಯಾಯಮಂಡಳಿ ವಿಧಿಸಿದ್ದ ಷರತ್ತನ್ನು ಅಪಘಾತ ಎಸಗಿದ್ದ ಬಾಲಕ ಪೂರ್ಣಗೊಳಿಸಿದ್ದು, ರಸ್ತೆ ಸುರಕ್ಷತೆ ಬಗ್ಗೆ 300 ಪದಗಳ ಪ್ರಬಂಧವನ್ನು ಬರೆದು ಮಂಡಳಿಗೆ ಸಲ್ಲಿಸಿದ್ದಾನೆ.

ಪ್ರಬಂಧವನ್ನು ಬಾಲಕನು ನ್ಯಾಯಮಂಡಳಿಗೆ ಬುಧವಾರ ಸಲ್ಲಿಸಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೇ 19ರಂದು ಬಾಲಕನು ಚಲಾಯಿಸುತ್ತಿದ್ದ ಪೋಶೆ ಕಾರು ಡಿಕ್ಕಿಹೊಡೆದು ಇಬ್ಬರು ಮೃತಪಟ್ಟಿದ್ದರು. ಆಗ ಬಾಲಕ ಪಾನಮತ್ತನಾಗಿದ್ದ ಎಂದು ಪೊಲೀಸರು ಶಂಕಿಸಿದ್ದಾರೆ. ಪ್ರಕರಣದಲ್ಲಿ ಬಾಲಕನಿಗೆ ಜಾಮೀನು ನೀಡಿದ್ದ ಬಾಲನ್ಯಾಯ ಮಂಡಳಿಯು 15 ದಿನಗಳ ಒಳಗಾಗಿ ಪ್ರಬಂಧ ಬರೆದು ಸಲ್ಲಿಸುವಂತೆ ಸೂಚಿಸಿತ್ತು. ಬಾಲಕನಿಗೆ ನೀಡಿರುವ ಕಠಿಣವಲ್ಲದ ಶಿಕ್ಷೆಯ ಬಗ್ಗೆ ರಾಷ್ಟ್ರವ್ಯಾಪಿ ಟೀಕೆ ವ್ಯಕ್ತವಾಗಿತ್ತು.

ಕೇಜ್ರಿವಾಲ್ ಜಾಮೀನು ಅರ್ಜಿ: ಸಿಬಿಐಗೆ ಹೈಕೋರ್ಟ್ ನೋಟಿಸ್

ನವದೆಹಲಿ(ಪಿಟಿಐ): ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಬಂಧನದಲ್ಲಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಲ್ಲಿಸಿರುವ ಜಾಮೀನು ಅರ್ಜಿಗೆ ಪ್ರತಿಕ್ರಿಯಿಸುವಂತೆ ದೆಹಲಿ ಹೈಕೋರ್ಟ್ ಶುಕ್ರವಾರ ಸಿಬಿಐಗೆ ಸೂಚಿಸಿದೆ.

ನ್ಯಾಯಮೂರ್ತಿ ನೀನಾ ಬನ್ಸಾಲ್ ಕೃಷ್ಣ ಅವರು ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಸಿಬಿಐಗೆ ನೋಟಿಸ್ ಜಾರಿ ಮಾಡಿದ್ದು, ಜುಲೈ 17ರಂದು ವಿಚಾರಣೆಗೆ ಪಟ್ಟಿ ಮಾಡಿದ್ದಾರೆ.

‘ಎಎಪಿ ನಾಯಕ ಅಪಾಯಕಾರಿಯೂ ಅಲ್ಲ, ಉಗ್ರಗಾಮಿ ಅಲ್ಲ. ಜಾರಿ ನಿರ್ದೇಶನಾಲಯವು (ಇ.ಡಿ) ದಾಖಲಿಸಿದ್ದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾಮೀನು ಮಂಜೂರಾದ ನಂತರ, ಸಿಬಿಐ ಬಂಧಿಸಿದೆ’ ಎಂದು ಕೇಜ್ರಿವಾಲ್ ಪರ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ವಾದ ಮಂಡಿಸಿದರು.

‘ಕೇಜ್ರಿವಾಲ್ ಅವರು ವಿಚಾರಣಾ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸದೆ, ಹೈಕೋರ್ಟ್‌ಗೆ ಸಲ್ಲಿಸಿದ್ದಾರೆ’ ಎಂದು ಸಿಬಿಐ ಪರ ವಕೀಲ ಡಿ.ಪಿ. ಸಿಂಗ್ ಅವರು ಆಕ್ಷೇಪ ವ್ಯಕ್ತಪಡಿಸಿದರು.

ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕರೂ ಆದ ಅರವಿಂದ ಕೇಜ್ರಿವಾಲ್ ಅವರನ್ನು ಸಿಬಿಐ ಜೂನ್ 26ರಂದು ತಿಹಾರ್ ಜೈಲಿನಲ್ಲಿ ಬಂಧಿಸಿತ್ತು. ಇ.ಡಿ ದಾಖಲಿಸಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಜ್ರಿವಾಲ್ ಇನ್ನೂ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಜಾರಿ ನಿರ್ದೇಶನಾಲಯವು ಮಾರ್ಚ್ 21ರಂದು ಬಂಧಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ, ವಿಚಾರಣಾ ನ್ಯಾಯಾಲಯವು ಜೂನ್ 20ರಂದು ಜಾಮೀನು ಮಂಜೂರು ಮಾಡಿತ್ತು. ಈ ಆದೇಶಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಕೇಂದ್ರ ಪಠ್ಯಕ್ರಮದ ಆರನೇ ತರಗತಿ ಪಠ್ಯಪುಸ್ತಕ ಪ್ರಕಟಿಸುವಲ್ಲಿ ವಿಳಂಬ

ಕೇಂದ್ರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

ನವದೆಹಲಿ(ಪಿಟಿಐ): ಕೇಂದ್ರ ಪಠ್ಯಕ್ರಮದ 6ನೇ ತರಗತಿಗೆ ಹೊಸ ಪಠ್ಯಪುಸ್ತಕಗಳನ್ನು ಪ್ರಕಟಿಸುವಲ್ಲಿ ಆಗುತ್ತಿರುವ ವಿಳಂಬಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಶುಕ್ರವಾರ ವಾಗ್ದಾಳಿ ಮಾಡಿದೆ.



ಜೈರಾಮ್ ರಮೇಶ್

ಪರೀಕ್ಷಾ ಪ್ರಕ್ರಿಯೆಗಳನ್ನು ಸಮರ್ಪಕವಾಗಿ ನಿರ್ವಹಿಸದ ಕೇಂದ್ರ ಶಿಕ್ಷಣ ಸಚಿವಾಲಯವು, ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಒದಗಿಸುವಲ್ಲಿಯೂ ಅಸಮರ್ಥತೆ ಪ್ರದರ್ಶಿಸುತ್ತಿದೆ. ಅಲ್ಲದೆ ಈ ಅಸಮರ್ಥತೆಯು ದಿನೇ ದಿನೇ ಹೆಚ್ಚುತ್ತಿದೆ ಎಂದು ಅದು ಆರೋಪಿಸಿದೆ.

‘ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮೂಲಕ ಪರೀಕ್ಷಾ ಪ್ರಕ್ರಿಯೆಗಳನ್ನು ಹಾಳುಮಾಡಿದ ಬಳಿಕ, ಶಿಕ್ಷಣ ಸಚಿವಾಲಯವು ಮಕ್ಕಳ ಶಿಕ್ಷಣವನ್ನೂ ನಾಶಮಾಡುತ್ತಿದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘ಶೈಕ್ಷಣಿಕ ವರ್ಷ ಪ್ರಾರಂಭವಾಗಿದ್ದರೂ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ 6ನೇ ತರಗತಿ ವಿದ್ಯಾರ್ಥಿಗಳಿಗೆ ವಿಜ್ಞಾನ, ಗಣಿತ, ಸಮಾಜ ವಿಜ್ಞಾನಗಳ ವಿಷಯಗಳ ಹೊಸ ಪಠ್ಯಪುಸ್ತಕಗಳನ್ನು ಇಲ್ಲಿಯವರೆಗೂ ಪ್ರಕಟಿಸಿಲ್ಲ. ಪಠ್ಯಗಳು ಮುದ್ರಣವಾಗಲು ಇನ್ನೂ 10ರಿಂದ 15 ದಿನಗಳು ಬೇಕಾಗುತ್ತವೆಯಂತೆ’ ಎಂದು ಅವರು ತಿಳಿಸಿದ್ದಾರೆ.

‘ಅಲ್ಲದೆ ಪಠ್ಯಪುಸ್ತಕಗಳನ್ನು ರಾಷ್ಟ್ರೀಯ ಪಠ್ಯಕ್ರಮ ಮತ್ತು ಬೋಧನಾ ಕಲಿಕಾ ಸಾಮಗ್ರಿ ಸಮಿತಿ (ಎನ್‌ಎಸ್‌ಟಿಸಿ) ಅಂತಿಮಗೊಳಿಸಿಲ್ಲ’ ಎಂದೂ ಅವರು ಹೇಳಿದ್ದಾರೆ. ಹೊಸ ಪುಸ್ತಕಗಳು ವಿದ್ಯಾರ್ಥಿಗಳಿಗೆ ದೊರೆಯುವುದು ಎರಡು ತಿಂಗಳು ವಿಳಂಬವಾಗಬಹುದು ಎಂದು ಅಧಿಕಾರಿಗಳು ಲೆಕ್ಕಹಾಕಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಪ್ರಧಾನಿ ಅವರ ‘ಪರೀಕ್ಷಾ ಪೆ ಚರ್ಚಾ’ ಅನ್ನು ವೆಬ್ ವೇದಿಕೆಗಾಗಿ ಮರುರೂಪಿಸುವ ಎನ್‌ಸಿಇಆರ್‌ಟಿ ಕ್ರಮವನ್ನು ಟೀಕಿಸಿರುವ ಅವರು, ‘ಪ್ರಶ್ನೆ ಪತ್ರಿಕೆ ಸೋರಿಕೆ ರಹಿತ ಪರೀಕ್ಷೆಗಳನ್ನು ಖಚಿತಪಡಿಸಿಕೊಳ್ಳಲಾಗದ, ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸಲಾಗದವರು ಇಂತಹ ಕಾರ್ಯಗಳಲ್ಲಿಯೇ ಸಮಯ ವ್ಯಯ ಮಾಡುತ್ತಿದ್ದಾರೆ’ ಎಂದು ದೂರಿದ್ದಾರೆ.

ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು, ಹೊಸ ಪಠ್ಯಕ್ರಮ ಚೌಕಟ್ಟಿಗೆ (ಎನ್‌ಸಿಎಫ್) ಅನುಗುಣವಾಗಿ ಶಾಲಾ ಪಠ್ಯಪುಸ್ತಕಗಳನ್ನು ರೂಪಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿದ ಮರುದಿನ ಜೈರಾಮ್ ರಮೇಶ್ ಅವರ ಪ್ರತಿಕ್ರಿಯೆ ಬಂದಿದೆ. 6ನೇ ತರಗತಿ ಪಠ್ಯ ಪುಸ್ತಕಗಳು ಮಾರುಕಟ್ಟೆಗೆ ಬರುವಲ್ಲಿ ವಿಳಂಬವಾಗಿರುವ ಹಿನ್ನೆಲೆಯಲ್ಲಿ ಈ ಸಭೆ ನಡೆದಿತ್ತು.

2024–25ನೇ ಶೈಕ್ಷಣಿಕ ಸಾಲಿನಲ್ಲಿ 3 ಮತ್ತು 6ನೇ ತರಗತಿಗಳಿಗೆ ಹೊಸ ಪಠ್ಯಪುಸ್ತಕಗಳನ್ನು ಪರಿಚಯಿಸಲಾಗುವುದು ಎಂದು ಎನ್‌ಸಿಇಆರ್‌ಟಿ ಘೋಷಿಸಿತ್ತು. ಪಠ್ಯಪುಸ್ತಕಗಳ ಕಾರ್ಯ ಪ್ರಗತಿಯಲ್ಲಿದ್ದು, 3 ಮತ್ತು 6ನೇ ತರಗತಿಗಳಿಗೆ ಸಂಬಂಧಿಸಿದ 9 ಪಠ್ಯಪುಸ್ತಕಗಳು ಈಗಾಗಲೇ ಲಭ್ಯವಿವೆ. ಉಳಿದ ಎಂಟು ಪಠ್ಯಪುಸ್ತಕಗಳು ಶೀಘ್ರದಲ್ಲಿಯೇ ಲಭ್ಯವಾಗಲಿವೆ ಎಂದು ಶಿಕ್ಷಣ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.




ಉತ್ಸವಕ್ಕೆ ಸಿದ್ಧತೆ ‘ಆಷಾಢ ಬೋನಾಲು’ ಉತ್ಸವ ಪ್ರಯುಕ್ತ ಹೈದರಾಬಾದ್‌ನ ಗೋಲ್ಕೊಂಡಾ ಕೋಟೆಯ ಮೆಟ್ಟಿಲುಗಳಿಗೆ ಭಕ್ತರು ಶುಕ್ರವಾರ ಕುಂಕುಮ ಮತ್ತು ಅರಿಸಿನ ಹಚ್ಚಿದರು –ಪಿಟಿಐ ಚಿತ್ರ

ರಾಜ್ಯಪಾಲರಿಂದ ರಾಷ್ಟ್ರಪತಿಗೆ ದೂರು

ಪ್ರಮಾಣವಚನ ಬೋಧಿಸಿ ಸಂವಿಧಾನ ಉಲ್ಲಂಘಿಸಿದ ಸ್ಪೀಕರ್

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್ ಪಕ್ಷದ ಇಬ್ಬರು ಶಾಸಕರಿಗೆ ಸ್ಪೀಕರ್ ಪ್ರಮಾಣವಚನ ಬೋಧಿಸುವ ಮೂಲಕ ‘ಸಂವಿಧಾನದ ಉಲ್ಲಂಘನೆಯಾಗಿದೆ’ ಎಂದು ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ. ಆನಂದ್ ಬೋಸ್ ಅವರು ಶುಕ್ರವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದ್ದಾರೆ ಎಂದು ರಾಜ್ಯಭವನದ ಮೂಲಗಳು ತಿಳಿಸಿವೆ.

ಈ ಕೆಲಸ ನಿರ್ವಹಿಸುವಂತೆ ರಾಜ್ಯಪಾಲ ಬೋಸ್ ಅವರು ಡೆಪ್ಯುಟಿ ಸ್ಪೀಕರ್‌ಗೆ ತಿಳಿಸಿದ್ದರು. ಇದರ ಹೊರತಾಗಿಯೂ, ಸ್ಪೀಕರ್ ಬಿಮನ್ ಬ್ಯಾನರ್ಜಿ ಅವರು ಇಬ್ಬರು ಶಾಸಕರಿಗೆ ಪ್ರಮಾಣವಚನ ಬೋಧಿಸಿದ ಬಳಿಕ ರಾಜ್ಯಪಾಲರು ಈ ಪತ್ರ ಬರೆದಿದ್ದಾರೆ.



ಸಿ.ವಿ.ಆನಂದ್ ಬೋಸ್

‘ಸಂವಿಧಾನ ಗೌರವಿಸುವಲ್ಲಿ ಸ್ಪೀಕರ್ ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ’ ಎಂದು ರಾಷ್ಟ್ರಪತಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ವಿಧಾನಸಭೆಯ ಇಬ್ಬರು ಶಾಸಕರಿಗೆ ಪ್ರಮಾಣವಚನ ಬೋಧಿಸುವ ಮೂಲಕ ಸಂವಿಧಾನವನ್ನು ಉಲ್ಲಂಘಿಸಿದ್ದಾರೆ’ ಎಂದು ರಾಜ್ಯಭವನದ ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯಭವನ– ವಿಧಾನಸಭೆ ನಡುವಿನ ಒಂದು ತಿಂಗಳ ಕಾಲ ಬಿಕ್ಕಟ್ಟಿನ ನಂತರ, ಮುರ್ಷಿದಾಬಾದ್ ಜಿಲ್ಲೆಯ ಭಾಗಬಂಗೋಲಾ ಶಾಸಕ ರಾಯತ್ ಹೊಸೈನ್ ಸರ್ಕಾರ್, ಕೋಲ್ಕತ್ತ ಹೊರವಲಯದ ಬಾರಾನಗರ ಕ್ಷೇತ್ರದ ಶಾಸಕಿ ಸಯಾಂತಿಕಾ ಬ್ಯಾನರ್ಜಿ ಅವರು ಶುಕ್ರವಾರ ನಡೆದ ವಿಶೇಷ ಅಧಿವೇಶನದಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ರಾಜಭವನಕ್ಕೆ ಬಂದು ಪ್ರಮಾಣ ವಚನ ಸ್ವೀಕರಿಸುವಂತೆ ಇಬ್ಬರು ಶಾಸಕರಿಗೆ ಆಹ್ವಾನ ನೀಡಿದ್ದರು. ಇದನ್ನು ಇಬ್ಬರು ಶಾಸಕರು ತಿರಸ್ಕರಿಸಿ, ಪ್ರತಿಭಟನೆ ನಡೆಸಿದ್ದರು. ಇದಾದ ಬಳಿಕ ಈ ಜವಾಬ್ದಾರಿಯನ್ನು ರಾಜ್ಯಪಾಲರು ಡೆಪ್ಯುಟಿ ಸ್ಪೀಕರ್‌ಗೆ ವಹಿಸಿದ್ದರು.

ತೆಲಂಗಾಣ ಕಾಂಗ್ರೆಸ್ ಸೇರಿದ ಬಿಆರ್‌ಎಸ್‌ನ 6 ಎಂಎಲ್‌ಸಿಗಳು

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ವಿರೋಧ ಪಕ್ಷವಾದ ಬಿಆರ್‌ಎಸ್‌ನ ಆರು ಮಂದಿ ವಿಧಾನ ಪರಿಷತ್ ಸದಸ್ಯರು (ಎಂಎಲ್‌ಸಿ) ಗುರುವಾರ ಮಧ್ಯರಾತ್ರಿ ಕಾಂಗ್ರೆಸ್ ಸೇರಿದ್ದಾರೆ. ಇದರಿಂದಾಗಿ ಬಿಆರ್‌ಎಸ್‌ಗೆ ಮತ್ತೊಮ್ಮೆ ಹಿನ್ನಡೆಯಾಗಿದೆ.

ವಿಧಾನ ಪರಿಷತ್ ಸದಸ್ಯರಾದ ದಂಡೆ ವಿಠಲ್, ಭಾನುಪ್ರಸಾದ್ ರಾವ್, ಎಂ.ಎಸ್. ಪ್ರಭಾಕರ್, ಬೊಗ್ಗರಪು ದಯಾನಂದ್, ಯೆಗ್ಗೆ ಮಲ್ಲೇಶಂ ಮತ್ತು ಬಸ್ವರಾಜು ಸಾರಯ್ಯ ಅವರು ಮೊದಲಿಗೆ ಹೈದರಾಬಾದ್‌ನ ಹೋಟೆಲ್ ಒಂದರಲ್ಲಿ ಭೇಟಿಯಾದರು. ಆ ಬಳಿಕ, ರಾತ್ರಿ ಸುಮಾರು 1 ಗಂಟೆಗೆ ರಾಜ್ಯದ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರ ನಿವಾಸಕ್ಕೆ ತೆರಳಿ, ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಕಾಂಗ್ರೆಸ್‌ನ ತೆಲಂಗಾಣ ಉಸ್ತುವಾರಿ ದೀಪಾ ದಾಸ್‌ಮುನ್ಷಿ ಮತ್ತು ಇತರ ನಾಯಕರು ಈ ವೇಳೆ ಉಪಸ್ಥಿತರಿದ್ದರು ಎಂದು ಮೂಲಗಳು ತಿಳಿಸಿವೆ.

40 ಸದಸ್ಯಬಲದ ತೆಲಂಗಾಣ ವಿಧಾನ ಪರಿಷತ್‌ನಲ್ಲಿ ಈಗ ಕಾಂಗ್ರೆಸ್ ಸದಸ್ಯರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

ಕಳೆದ ತೆಲಂಗಾಣ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ಸರ್ಕಾರ ರಚಿಸುತ್ತಿದ್ದಂತೆ, ಬಿಆರ್‌ಎಸ್‌ನ ಆರು ಶಾಸಕರು ಇಬ್ಬರು ಎಂಎಲ್‌ಸಿಗಳು ಕಾಂಗ್ರೆಸ್ ಸೇರ್ಪಡೆ ಆಗಿದ್ದರು.

ಮುರುಗೇಶ್ ನಿರಾಣಿ ವಿರುದ್ಧದ ತನಿಖೆಗೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಕೈಗಾರಿಕೆ ಇಲಾಖೆಯ ಮಾರ್ಕೆಟಿಂಗ್, ಜಾಹೀರಾತು ಮತ್ತು ಪ್ರಚಾರ ಸಂಸ್ಥೆಯಲ್ಲಿ 2011-15ರಲ್ಲಿ ನಡೆದ ನೇಮಕಾತಿಯಲ್ಲಿ ಅಕ್ರಮ ನಡೆಸಲಾಗಿದೆ’ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಮುರಗೇಶ್ ಆರ್.ನಿರಾಣಿ ವಿರುದ್ಧದ ತನಿಖೆಗೆ ಹೈಕೋರ್ಟ್ ಅಸ್ತು ಎಂದಿದೆ.

ಈ ಸಂಬಂಧ ಮುರುಗೇಶ್ ನಿರಾಣಿ ಸಲ್ಲಿಸಿದ್ ಅರ್ಜಿಯನ್ನು, ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆ ನಡೆಸಬಹುದು. ತನಿಖೆಗೆ ಸಹಕರಿಸಿದರೆ ಅರ್ಜಿದಾರರನ್ನು ಬಂಧಿಸುವಂತಿಲ್ಲ’ ಎಂದು ಮಧ್ಯಂತರ ನಿರ್ದೇಶನ ನೀಡಿದರು. ಪ್ರಕರಣದ ಮೂಲ ದೂರುದಾರ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಮತ್ತು ಹೈಗ್ರೌಂಡ್ಸ್ ಠಾಣಾ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದರು.

9 ಮಂದಿ ಸಾವು– ವಿಷ ಅನಿಲ ಸೇವನೆ ಶಂಕೆ

ಜಂಜ್‌ಗೀರ್–ಚಂಪಾ/ ಕೋರ್ಬ (ಪಿಟಿಐ): ಛತ್ತೀಸಗಢದ ಜಂಜ್‌ಗೀರ್–ಚಂಪಾ ಮತ್ತು ಕೋರ್ಬದಲ್ಲಿ ಶುಕ್ರವಾರ ನಡೆದ ಎರಡು ಪ್ರತ್ಯೇಕ ಘಟನೆಗಳಲ್ಲಿ 9 ಜನರು ಮೃತಪಟ್ಟಿದ್ದು, ವಿಷಕಾರಿ ಅನಿಲ ಸೇವನೆಯ ಶಂಕೆ ವ್ಯಕ್ತವಾಗಿದೆ ಎಂದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಜಂಜ್‌ಗೀರ್– ಚಂಪಾದಲ್ಲಿನ ಬಿರ್ರಾ ಪೊಲೀಸ್ ಠಾಣೆ ವ್ಯಾಪ್ತಿಯ ಕಿಕಿರ್ದಾ ಗ್ರಾಮದಲ್ಲಿ ರಾಮಚಂದ್ರ ಜೈಸ್ವಾಲ್ (60), ರಮೇಶ್ ಪಟೇಲ್ (50), ಅವರ ಇಬ್ಬರು ಮಕ್ಕಳಾದ ರಾಜೇಂದ್ರ (20), ಜಿತೇಂದ್ರ (25) ಮತ್ತು ಟಿಕೇಶ್ವರ ಚಂದ್ರ ಎಂಬುವರು ಅಸುನೀಗಿದ್ದಾರೆ ಎಂದು ಬಿಲಾಸ್‌ಪುರ ವಲಯದ ಐಜಿಪಿ ಸಂಜೀವ್ ಶುಕ್ಲಾ ತಿಳಿಸಿದ್ದಾರೆ.

ಘಟನೆ ವಿವರ: ಜೈಸ್ವಾಲ್ ಅವರು ತಮ್ಮ ಮನೆ ಬಳಿಯ ಬಾವಿಯ ಮೇಲೆ ಹೊದಿಸಿದ್ದ ಮರದ ಪಟ್ಟಿಯನ್ನು ಸರಿಪಡಿಸುತ್ತಿದ್ದಾಗ, 30 ಅಡಿ ಆಳದ ಬಾವಿಗೆ ಬಿದ್ದಿದ್ದಾರೆ. ಇದು ತಿಳಿದ ಕೂಡಲೇ ಅವರ ಪತ್ನಿ ಕೂಗಿ ಸಮೀಪದಲ್ಲಿರುವವರನ್ನು ನೆರವಿಗೆ ಕರೆದಿದ್ದಾರೆ. ಪಕ್ಕದಲ್ಲಿದ್ದ ಪಟೇಲ್ ಕುಟುಂಬದ ಮೂವರು ಬಾವಿಗೆ ಇಳಿದಿದ್ದಾರೆ. ಯಾರೊಬ್ಬರೂ ಮೇಲೆ ಬಾರದಿದ್ದಾಗ ಚಂದ್ರ ಎಂಬುವರೂ ಇಳಿದಿದ್ದಾರೆ. ಅವರೂ ಪ್ರಜ್ಞೆ ತಪ್ಪಿದಾಗ, ಈ ಕುರಿತ ಮಾಹಿತಿಯನ್ನು ಪೊಲೀಸರಿಗೆ ನೀಡಲಾಗಿದೆ ಎಂದು ಶುಕ್ಲಾ ಅವರು ವಿವರಿಸಿದ್ದಾರೆ.

ಮೇಲ್ನೋಟಕ್ಕೆ, ಬಾವಿಯೊಳಗಿನ ಕೆಲ ವಿಷಕಾರಿ ಅನಿಲ ಸೇವನೆಯಿಂದ ಇವರು ಮೃತಪಟ್ಟಿರಬಹುದು ಎಂದು ತೋರುತ್ತಿದೆ. ಮರಣೋತ್ತರ ಪರೀಕ್ಷೆ ವರದಿಗಳು ಬಂದ ನಂತರವಷ್ಟೇ ನಿಖರ ಕಾರಣ ತಿಳಿಯುತ್ತದೆ ಎಂದು ಜಿಲ್ಲಾಡಳಿತದ ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ಮತ್ತೊಂದು ಪ್ರಕರಣ: ಇದೇ ರೀತಿಯ ಮತ್ತೊಂದು ದುರಂತ ಕೋರ್ಬದಲ್ಲಿ ನಡೆದಿದ್ದು, ಜಹ್ರು ಪಟೇಲ್ (60, ಅವರ ಮಗಳು ಸಪಿನಾ (16), ಕುಟುಂಬದ ಸದಸ್ಯರಾದ ಶಿವಚರಣ್ ಪಟೇಲ್ (45), ಮನ್ಬೋಧ್ ಪಟೇಲ್ (57) ಮೃತಪಟ್ಟಿದ್ದಾರೆ ಎಂದು ಕೊರ್ಬ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ್ ತಿವಾರಿ ತಿಳಿಸಿದ್ದಾರೆ.

ಪ್ರಾಥಮಿಕ ಮಾಹಿತಿ ಪ್ರಕಾರ, ಜಹ್ರು ಪಟೇಲ್ ತಮ್ಮ ಜಮೀನಿನ ಪಕ್ಕದ ಬಾವಿಗೆ ಬಿದ್ದಿದ್ದಾರೆ. ಅವರನ್ನು ರಕ್ಷಿಸಲು ಅವರ ಮಗಳು ಸಹ ಇಳಿದಿದ್ದಾರೆ. ಇಬ್ಬರೂ ಮೇಲೆ ಬಾರದಿದ್ದಾಗ ಮತ್ತಿಬ್ಬರು ಬಾವಿಗೆ ಇಳಿದಿದ್ದಾರೆ. ಇವರೆಲ್ಲರೂ ಮೃತಪಟ್ಟಿದ್ದು, ಮೇಲ್ನೋಟಕ್ಕೆ ಬಾವಿಯೊಳಗಿನ ಕೆಲ ವಿಷಕಾರಿ ಅನಿಲ ಸೇವನೆಯಿಂದ ಇವರು ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ ಎಂದು ತಿವಾರಿ ವಿವರಿಸಿದ್ದಾರೆ.

ಅಮೃತ್‌ಪಾಲ್, ರಶೀದ್ ಪ್ರಮಾಣ ವಚನ

ನವದೆಹಲಿ (ಪಿಟಿಐ): ಜೈಲಿನಲ್ಲಿ ಇದ್ದೇ ಜಯಗಳಿಸಿರುವ ಅಮೃತ್‌ಪಾಲ್ ಸಿಂಗ್ ಮತ್ತು ಶೇಖ್ ಅಬ್ದುಲ್ ರಶೀದ್ ಅವರು ಶುಕ್ರವಾರ ಲೋಕಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಚುನಾವಣೆಯಲ್ಲಿ ಗೆದ್ದಿರುವ ಇವರಿಗೆ ಪ್ರಮಾಣ ವಚನ ಸ್ವೀಕರಿಸುವ ಸಲುವಾಗಿ ನ್ಯಾಯಾಲಯ ಪೆರೋಲ್ ನೀಡಿತ್ತು. ಅವರಿಬ್ಬರನ್ನೂ ಭದ್ರತಾ ಸಿಬ್ಬಂದಿಯು ಸಂಸತ್ತಿನ ಆವರಣಕ್ಕೆ ಕರೆತಂದರು. ಅಲ್ಲಿಯೂ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು.

ಶಿಷ್ಟಾಚಾರಗಳನ್ನು ಪೂರೈಸಿದ ಬಳಿಕ ಲೋಕಸಭಾ ಸ್ಪೀಕರ್ ಅವರ ಕೋಣೆಯಲ್ಲಿ ಅವರಿಬ್ಬರು ಪ್ರಮಾಣ ವಚನ ಸ್ವೀಕರಿಸಿದರು ಎಂದು ಮೂಲಗಳು ತಿಳಿಸಿವೆ.

ಇಂಜಿನಿಯರ್ ರಶೀದ್ ಎಂದೇ ಪ್ರಸಿದ್ಧರಾಗಿರುವ ಕಾಶ್ಮೀರಿ ನಾಯಕ ರಶೀದ್ ವಿರುದ್ಧ ಭಯೋತ್ಪಾದನೆಗೆ ಹಣ ಒದಗಿಸಿದ ಆರೋಪದ ಮೇಲೆ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ. ಸದ್ಯ ಅವರು ತಿಹಾರ ಜೈಲಿನಲ್ಲಿದ್ದಾರೆ. ಅವರಿಗೆ 2 ಗಂಟೆಗಳ ಪೆರೋಲ್ ನೀಡಲಾಗಿತ್ತು.

ಖಾಲಿಸ್ತಾನ ಪರ ಒಲವುಳ್ಳ ಸಿಖ್ ನಾಯಕ ಅಮೃತ್‌ಪಾಲ್ ಸಿಂಗ್ ಪೊಲೀಸ್ ಠಾಣೆಯೊಂದರ ಮೇಲೆ ದಾಳಿ ನಡೆಸಿದ್ದರು.

ಅವರನ್ನು ಏಪ್ರಿಲ್ 2023ರಂದು ಬಂಧಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಬಿಹಾರ: 14 ಎಂಜಿನಿಯರ್‌ಗಳ ಅಮಾನತು

ಪಟ್ನಾ(ಪಿಟಿಐ): ರಾಜ್ಯದಲ್ಲಿ ಕೆಲ ದಿನಗಳಿಂದ ಸಾಲುಸಾಲಾಗಿ ಸೇತುವೆಗಳು ಕುಸಿಯುತ್ತಿರುವುದಕ್ಕೆ ಸಂಬಂಧಿಸಿ ಬಿಹಾರ ಸರ್ಕಾರವು 14 ಜನ ಎಂಜಿನಿಯರ್‌ಗಳನ್ನು ಶುಕ್ರವಾರ ಅಮಾನತುಗೊಳಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೇತುವೆಗಳ ಕುಸಿತ ಕುರಿತು ತನಿಖೆ ನಡೆಸಿದ್ದ ಸಮಿತಿಯು ಜಲ ಸಂಪನ್ಮೂಲ ಇಲಾಖೆಗೆ ಸಲ್ಲಿಸಿರುವ ವರದಿಯನ್ನು ಆಧರಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಕಳೆದ 17 ದಿನಗಳ ಅವಧಿಯಲ್ಲಿ 10 ಸೇತುವೆಗಳು ಕುಸಿದಿವೆ.

ಸಂಜಯ್ ಸಿಂಗ್ ಎಎಪಿ ಸಂಸದೀಯ ಪಕ್ಷದ ಅಧ್ಯಕ್ಷ

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷದ ರಾಜ್ಯಸಭೆ ಸದಸ್ಯ ಸಂಜಯ್ ಸಿಂಗ್ ಅವರನ್ನು ಎಎಪಿ ಸಂಸದೀಯ ಪಕ್ಷದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಅಲ್ಲದೆ ರಾಜ್ಯಸಭೆಯಲ್ಲಿ ಪಕ್ಷದ ನಾಯಕರನ್ನಾಗಿ ಅವರನ್ನೇ ಆಯ್ಕೆ ಮಾಡಲಾಗಿದೆ.

‘ರಸ್ತೆಯಿಂದ ಹಿಡಿದು ಸಂಸತ್ತಿನವರೆಗೆ ಧ್ವನಿ ಎತ್ತಲು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ನನಗೆ ಯಾವಾಗಲೂ ಅವಕಾಶ ನೀಡಿದ್ದಾರೆ. ಸಂಸದೀಯ ಪಕ್ಷದ ಮುಖ್ಯಸ್ಥನಾಗಿ ಸಮರ್ಪಣಾ ಭಾವದಿಂದ ನನ್ನ ಕರ್ತವ್ಯಗಳನ್ನು ನಿಭಾಯಿಸುತ್ತೇನೆ. ಕೇಜ್ರಿವಾಲ್ ಹಾಗೂ ಪಕ್ಷಕ್ಕೆ ನಾನು ಕೃತಜ್ಞನಾಗಿದ್ದೇನೆ’ ಎಂದು ಸಂಜಯ್ ಅವರು ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಆರ್‌ಎಸ್‌ಎಸ್: 12ರಿಂದ ಪ್ರಾಂತ್ಯ ಪ್ರಚಾರಕರ ಸಭೆ

ನವದೆಹಲಿ (ಪಿಟಿಐ): ಜಾರ್ಖಂಡ್‌ನ ರಾಂಚಿಯಲ್ಲಿ ಜುಲೈ 12ರಿಂದ 14ರವರೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪ್ರಾಂತ್ಯ ಪ್ರಚಾರಕರ ಸಭೆ ನಡೆಯಲಿದ್ದು, ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಭಾಗವಹಿಸಲಿದ್ದಾರೆ.

‘ಮೇ–ಜೂನ್‌ನಲ್ಲಿ ನಡೆದ ಆರ್‌ಎಸ್‌ಎಸ್ ತರಬೇತಿ ಕಾರ್ಯಕ್ರಮದ ಕುರಿತು ಎಲ್ಲ ಪ್ರಾಂತೀಯ ಪ್ರಚಾರಕರು ವರದಿ ನೀಡಲಿದ್ದು, ಸಭೆಯಲ್ಲಿ ಪರಾಮರ್ಶೆ ನಡೆಸಲಾಗುತ್ತದೆ’ ಎಂದು ಆರ್‌ಎಸ್‌ಎಸ್ ರಾಷ್ಟ್ರೀಯ ಪ್ರಚಾರ ಮುಖ್ಯಸ್ಥ ಸುನೀಲ್ ಅಂಬೇಕರ್ ಅವರು ಶುಕ್ರವಾರ ತಿಳಿಸಿದ್ದಾರೆ.

‘ಮೋಹನ್ ಭಾಗವತ್ ಅವರು 2024–25ರಲ್ಲಿ ಕೈಗೊಳ್ಳುವ ಪ್ರವಾಸದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು. 2025–26ರಲ್ಲಿ ನಡೆಯಲಿರುವ ಆರ್‌ಎಸ್‌ಎಸ್‌ನ ಶತಮಾನೋತ್ಸವ ಸಂಭ್ರಮಾಚರಣೆಯ ಬಗ್ಗೆ ಯೋಜನೆ ರೂಪಿಸಲಾಗುವುದು’ ಎಂದು ಹೇಳಿದರು.

ಆರ್‌ಎಸ್‌ಎಸ್ ಸಂಘಟನೆಯು ದೇಶದಲ್ಲಿ ಒಟ್ಟು 46 ಪ್ರಾಂತ್ಯಗಳನ್ನು ಹೊಂದಿದ್ದು, ಎಲ್ಲ ಪ್ರಾಂತ್ಯಗಳ ಪ್ರಚಾರಕರು ಸಭೆಯಲ್ಲಿ ಭಾಗಿ ಆಗಲಿದ್ದಾರೆ.

ಗುಜರಾತ್‌ಗೆ ರಾಹುಲ್ ಗಾಂಧಿ ಭೇಟಿ ಇಂದು

ಅಹಮದಾಬಾದ್ (ಪಿಟಿಐ): ಕಾಂಗ್ರೆಸ್‌ನ ಹಿರಿಯ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ಅಹಮದಾಬಾದ್ ನಗರಕ್ಕೆ ಭೇಟಿ ನೀಡಲಿದ್ದು, ಈ ವೇಳೆ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಪಕ್ಷದ ನಾಯಕರು ತಿಳಿಸಿದರು.

ಪ್ರವಾಸದ ವೇಳೆ ಗುಜರಾತ್‌ನಲ್ಲಿ ಇತ್ತೀಚೆಗೆ ನಡೆದ ರಾಜ್‌ಕೋಟ್ ಗೇಮ್ ಜೋನ್ ಅಗ್ನಿದುರಂತ, ಮೊರ್ಬಿ ಸೇತುವೆ ಕುಸಿತದ ಸಂತ್ರಸ್ತ ಕುಟುಂಬಸ್ಥರನ್ನು ಭೇಟಿಯಾಗಲಿದ್ದಾರೆ.

ರಕ್ಷಣಾ ಕ್ಷೇತ್ರ: ಗರಿಷ್ಠ ₹1.27 ಲಕ್ಷ ಕೋಟಿ ತಲುಪಿದ್ದ ಉತ್ಪಾದನೆ ಮೌಲ್ಯ

ಕಳೆದ ವರ್ಷ ದಾಖಲೆಯ ಉತ್ಪಾದನೆ

ನವದೆಹಲಿ(ಪಿಟಿಐ): 2023-24ನೇ ಸಾಲಿಗೆ ಸಂಬಂಧಿಸಿ, ರಕ್ಷಣಾ ಕ್ಷೇತ್ರದಲ್ಲಿನ ಉತ್ಪಾದನೆ ಮೌಲ್ಯ ದಾಖಲೆಯ ಗರಿಷ್ಠ ₹1.27 ಲಕ್ಷ ಕೋಟಿಯಷ್ಟು ತಲುಪಿತ್ತು. ಜೊತೆಗೆ, ಮೇಕ್ ಇನ್ ಇಂಡಿಯಾ ಕಾರ್ಯಕ್ರಮದಡಿಯೂ ಉತ್ಪಾದನೆ ಹೊಸ ಮೈಲಿಗಲ್ಲು ದಾಟಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶುಕ್ರವಾರ ಹೇಳಿದ್ದಾರೆ.

‘ರಕ್ಷಣಾ ಕ್ಷೇತ್ರದ ಉತ್ಪಾದನೆಯಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಮುಂಚೂಣಿ ರಾಷ್ಟ್ರವಾಗಿ ಹೊರಹೊಮ್ಮಲು ಅಗತ್ಯವಿರುವ ಎಲ್ಲ ನೆರವನ್ನು ನೀಡಲು ಸರ್ಕಾರ ಬದ್ಧವಾಗಿದೆ’ ಎಂದು ಹೇಳಿದ್ದಾರೆ.

2022–23ನೇ ಸಾಲಿನಲ್ಲಿ ರಕ್ಷಣಾ ಕ್ಷೇತ್ರದ ಉತ್ಪಾದನೆ ₹1,08,684 ಕೋಟಿ ಇತ್ತು.

ಈ ಬೆಳವಣಿಗೆ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ‘ಈ ಸಾಧನೆ ಸಾಕಾರಗೊಳ್ಳುವುದಕ್ಕೆ ಕಾರಣರಾದ ಎಲ್ಲರಿಗೂ ಅಭಿನಂದನೆಗಳು. ರಕ್ಷಣಾ ಕ್ಷೇತ್ರದಲ್ಲಿನ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವುದಕ್ಕೆ ಅಗತ್ಯವಿರುವ ವಾತಾವರಣವನ್ನು ಕಲ್ಪಿಸಲು ಸರ್ಕಾರ ಬದ್ಧವಾಗಿದೆ’ ಎಂದು ಹೇಳಿದ್ದಾರೆ.



> **ರಕ್ಷಣಾ ಕ್ಷೇತ್ರದಲ್ಲಿನ ಈ ಸಾಧನೆಯು ನಮ್ಮ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಜೊತೆಗೆ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಲಿದೆ**
> **ನರೇಂದ್ರ ಮೋದಿ,** ಪ್ರಧಾನಿ

ಪ್ರಮುಖ ಅಂಶಗಳು

- 2023–24ನೇ ಸಾಲಿನ ಒಟ್ಟು ರಕ್ಷಣಾ ಉತ್ಪಾದನಾ ಮೌಲ್ಯದಲ್ಲಿ ಡಿಪಿಎಸ್‌ಯು ಹಾಗೂ ಇತರ ಸಾರ್ವಜನಿಕ ವಲಯದ ಉದ್ದಿಮೆಗಳ ಕೊಡುಗೆ ಶೇ 79.2 ಹಾಗೂ ಖಾಸಗಿ ವಲಯದ ಕೊಡುಗೆ ಶೇ 20.8
- ಸಾರ್ವಜನಿಕ ವಲಯದ ಉದ್ದಿಮೆಗಳು ಹಾಗೂ ಖಾಸಗಿ ವಲಯದ ಉದ್ದಿಮೆಗಳು ಸ್ಥಿರವಾದ ಪ್ರಗತಿ ದಾಖಲಿಸಿವೆ
- 2023–24ನೇ ಸಾಲಿನಲ್ಲಿ ರಕ್ಷಣಾ ರಫ್ತು ಪ್ರಮಾಣ ದಾಖಲೆಯ ₹21,083 ಕೋಟಿ ಮೌಲ್ಯ ತಲುಪಿತ್ತು. 2022–23ನೇ ಸಾಲಿನ ರಫ್ತು ಪ್ರಮಾಣಕ್ಕೆ ಹೋಲಿಸಿದರೆ ಶೇ 32.5ರಷ್ಟು ಹೆಚ್ಚಳ ಕಂಡುಬಂದಿದೆ

‘ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಉತ್ಪಾದನೆಯಲ್ಲಿ ತೊಡಗಿರುವ ಎಲ್ಲ ಸಾರ್ವಜನಿಕ ವಲಯದ ಉದ್ದಿಮೆಗಳು (ಡಿಪಿಎಸ್‌ಯು) ಹಾಗೂ ಇತರ ಸಾರ್ವಜನಿಕ ವಲಯದ ಉದ್ದಿಮೆಗಳಿಂದ ಪಡೆದ ಮಾಹಿತಿ ಪ್ರಕಾರ, 2022–23ನೇ ಸಾಲಿಗೆ ಹೋಲಿಸಿದರೆ 2023–24ನೇ ಸಾಲಿನ ರಕ್ಷಣಾ ಉತ್ಪಾದನೆಯಲ್ಲಿ ಶೇ 16.7ರಷ್ಟು ಪ್ರಗತಿ ಕಂಡುಬಂದಿದೆ’ ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಹಾಥರಸ್‌ನಲ್ಲಿ ಕಾಲ್ತುಳಿತ ಪ್ರಕರಣ: ನೆರೆ ರಾಜ್ಯಗಳಲ್ಲಿ 'ಭೋಲೆ ಬಾಬಾ'ಗಾಗಿ ಹುಡುಕಾಟ

ಮುಖ್ಯ ಆರೋಪಿ ಪೊಲೀಸರಿಗೆ ಶರಣು

ನೋಯ್ಡಾ (ಪಿಟಿಐ): ಹಾಥರಸ್‌ನಲ್ಲಿ ನಡೆದಿದ್ದ ಕಾಲ್ತುಳಿತ ಅವಘಡದ ಮುಖ್ಯ ಆರೋಪಿ ದೇವಪ್ರಕಾಶ್ ಮಧುಕರ್ ಶುಕ್ರವಾರ ರಾತ್ರಿ ದೆಹಲಿಯಲ್ಲಿ ಪೊಲೀಸರಿಗೆ ಶರಣಾಗಿದ್ದಾನೆ.

ಉತ್ತರ ಪ್ರದೇಶದ ಹಾಥರಸ್ ಜಿಲ್ಲೆಯಲ್ಲಿ ಜುಲೈ 2ರಂದು ನಡೆದಿದ್ದ ಅವಘಡದಲ್ಲಿ 121 ಜನರು ಮೃತಪಟ್ಟಿದ್ದರು.

ಮಧುಕರ್ ಆ ದಿನ ಸತ್ಸಂಗ ಕಾರ್ಯಕ್ರಮದ 'ಮುಖ್ಯ ಸೇವಾದಾರ' ನಾಗಿದ್ದನು. ಸಿಕಂದ್ರಾ ರಾವ್ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ದಾಖಲಿಸಿದ್ದ ಎಫ್‌ಐಆರ್‌ನಲ್ಲಿಯೂ ಈತನೊಬ್ಬನ ಹೆಸರನ್ನೇ ಉಲ್ಲೇಖಿಸಲಾಗಿತ್ತು.

ಮಧುಕರ್ ಪರ ವಕೀಲ ಎ.ಪಿ.ಸಿಂಗ್ ಅವರು, 'ನನ್ನ ಕಕ್ಷಿದಾರ ದೆಹಲಿಯಲ್ಲಿ ಪೊಲೀಸರಿಗೆ ಶರಣಾಗಿದ್ದಾರೆ. ಅವರು ಅಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದರು' ಎಂದು ವಿಡಿಯೊ ಸಂದೇಶ ನೀಡಿದ್ದಾರೆ.

'ಮುಖ್ಯ ಸೇವಾದಾರನ ಸುಳಿವು ನೀಡಿದವರಿಗೆ ₹1 ಲಕ್ಷ ನಗದು ಬಹುಮಾನ ನೀಡಲಾಗುವುದು' ಎಂದು ಉತ್ತರ ಪ್ರದೇಶ ಸರ್ಕಾರ ಪ್ರಕಟಿಸಿತ್ತು.

ಕೃತ್ಯದ ಸಂಬಂಧ ಈವರೆಗೆ ಇಬ್ಬರು ಮಹಿಳೆಯರು ಸೇರಿ ಆರು ಜನರನ್ನು ಬಂಧಿಸಲಾಗಿದೆ. ಇವರು, ಸೂರಜ್ ಪಾಲ್ ಅಲಿಯಾಸ್ ನಾರಾಯಣ ಸಾಕರ್ ಹರಿ ಅಲಿಯಾಸ್ ಭೋಲೆ ಬಾಬಾನ ಸತ್ಸಂಗ ಆಯೋಜನೆ ಸಮಿತಿ ಸದಸ್ಯರಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಹಾಥರಸ್ ವರದಿ (ಉತ್ತರ ಪ್ರದೇಶ) (ಪಿಟಿಐ): ಈ ಮಧ್ಯೆ, ಉತ್ತರಪ್ರದೇಶ ರಾಜ್ಯ ಪೊಲೀಸರು ಸೇರಿದಂತೆ ವಿವಿಧ ತನಿಖಾ ಸಂಸ್ಥೆಗಳು, 'ಭೋಲೆ ಬಾಬಾ'ನ ಪತ್ತೆಗಾಗಿಯೂ ಜಾಲ ಬೀಸಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ತನಿಖಾ ತಂಡಗಳು ರಾಜ್ಯದ ಹಲವು ಜಿಲ್ಲೆಗಳಿಗೆ ಭೇಟಿ ನೀಡಿವೆ' ಎಂದು ತಿಳಿಸಿದ್ದಾರೆ.

'ಸತ್ಸಂಗ' ಕಾರ್ಯಕ್ರಮದ 'ಮುಖ್ಯ ಸೇವಾದಾರ' ಮಧುಕರ್ ಜೊತೆಗೆ 'ಹಲವು ಅಪರಿಚಿತ ಸಂಘಟಕರ' ವಿರುದ್ಧವೂ ಸಿಕಂದ್ರಾ ರಾವ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ವರದಿ ಸಲ್ಲಿಕೆ: ಕಾಲ್ತುಳಿತ ಕುರಿತಂತೆ ವಿಶೇಷ ತನಿಖಾ ತಂಡದ (ಎಸ್‌ಐಟಿ) ಪ್ರಾಥಮಿಕ ವರದಿ ಬಗ್ಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಎಡಿಜಿಪಿ (ಆಗ್ರಾ ವಲಯ) ಅನುಪಮ್ ಕುಲಶ್ರೇಷ್ಠ ಸೇರಿದಂತೆ ಹಿರಿಯ ಅಧಿಕಾರಿಗಳಿಗೂ ಈ ವರದಿ ಸಲ್ಲಿಸಲಾಗಿದೆ. ಹಾಥರಸ್ ಜಿಲ್ಲಾಧಿಕಾರಿ ಆಶಿಶ್ ಕುಮಾರ್, ಎಸ್ಪಿ ನಿಪುಣ್ ಅಗರವಾಲ್, ಆರೋಗ್ಯ ಇಲಾಖೆ ಅಧಿಕಾರಿಗಳ ಹೇಳಿಕೆಗಳನ್ನು ಈ ವರದಿ ಒಳಗೊಂಡಿದೆ ಎಂದು ತಿಳಿಸಿದ್ದಾರೆ.

'90ಕ್ಕೂ ಹೆಚ್ಚು ಹೇಳಿಕೆಗಳ ದಾಖಲು': ಕಾಲ್ತುಳಿತ ಘಟನೆಗೆ ಸಂಬಂಧಿಸಿ ವಿಶೇಷ ತನಿಖಾ ತಂಡವು (ಎಸ್‌ಐಟಿ) 90ಕ್ಕೂ ಹೆಚ್ಚು ಹೇಳಿಕೆಗಳನ್ನು ದಾಖಲಿಸಿದೆ ಎಂದು ಎಡಿಜಿಪಿ (ಆಗ್ರಾ ವಲಯ) ಶುಕ್ರವಾರ ತಂಡದ ಮುಖ್ಯಸ್ಥ ಅನುಪಮ್ ಕುಲಶ್ರೇಷ್ಠ ತಿಳಿಸಿದರು.



ಹಾಥರಸ್ ಜಿಲ್ಲೆಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಗಳ ಸದಸ್ಯರನ್ನು ಅಲಿಗಢ ಬಳಿ ಪಿಲ್ಖನಾ ಗ್ರಾಮದಲ್ಲಿ ಭೇಟಿ ಮಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸಾಂತ್ವನ ಹೇಳಿದರು —ಪಿಟಿಐ ಚಿತ್ರ

ಮುಖ್ಯಾಂಶಗಳು

- ರಾಜಕೀಯ ದೃಷ್ಟಿಯಿಂದ ಮಾತನಾಡಲ್ಲ: ರಾಹುಲ್
- ಹೆಚ್ಚಿನ ಪರಿಹಾರ ನೀಡುವಂತೆ ಆಗ್ರಹ

ಸರ್ಕಾರದಿಂದಲೂ ಲೋಪಗಳಾಗಿವೆ: ರಾಹುಲ್

ಹಾಥರಸ್/ಅಲಿಗಢ (ಉತ್ತರ ಪ್ರದೇಶ) (ಪಿಟಿಐ): 'ಹಾಥರಸ್ ಜಿಲ್ಲೆಯಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದಲೂ ಲೋಪಗಳಾಗಿವೆ. ಆದರೆ, ಈ ವಿಷಯವನ್ನು ನಾನು ರಾಜಕೀಯಗೊಳಿಸಲು ಬಯಸುವುದಿಲ್ಲ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ಹೇಳಿದ್ದಾರೆ.

ಈ ದುರ್ಘಟನೆಯಲ್ಲಿ ಸಂತ್ರಸ್ತರಿಗೆ ಆದಷ್ಟು ಶೀಘ್ರವೇ ಗರಿಷ್ಠ ಮೊತ್ತದ ಪರಿಹಾರ ವಿತರಿಸಬೇಕು ಎಂದು ಅವರು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಆಗ್ರಹಿಸಿದ್ದಾರೆ.

ಕಾಲ್ತುಳಿತದಲ್ಲಿ ತಮ್ಮವರನ್ನು ಕಳೆದುಕೊಂಡವರ ಕುಟುಂಬಗಳ ಸದಸ್ಯರು ಹಾಗೂ ಗಾಯಗೊಂಡವರನ್ನು ಭೇಟಿ ಮಾಡಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಈ ಘಟನೆ ಕುರಿತಂತೆ ನಾನು ರಾಜಕೀಯ ದೃಷ್ಟಿಕೋನದಿಂದ ಮಾತನಾಡಲು ಬಯಸುವುದಿಲ್ಲ. ಈ ವಿಷಯದಲ್ಲಿ ಆಡಳಿತಾತ್ಮಕ ಲೋಪಗಳು ಇವೆ. ಹಲವು ಪ್ರಮಾದಗಳೂ ಇದ್ದು, ಅವುಗಳನ್ನು ಗುರುತಿಸಬೇಕಿದೆ' ಎಂದು ಹೇಳಿದರು.

'ಸಂತ್ರಸ್ತರಿಗೆ ಇದು ಕಠಿಣ ಸಮಯ. ಅವರೆಲ್ಲರೂ ಬಡವರು. ಹಾಗಾಗಿ, ಅವರಿಗೆ ಆದಷ್ಟು ಬೇಗನೆ ಪರಿಹಾರ ನೀಡಬೇಕು. ಆರು ತಿಂಗಳು ಇಲ್ಲವೇ ವರ್ಷದ ನಂತರ ಪರಿಹಾರ ನೀಡಿದರೆ ಯಾರಿಗೂ ಪ್ರಯೋಜನವಾಗುವುದಿಲ್ಲ' ಎಂದರು.

ಅಲಿಗಢಕ್ಕೆ ಭೇಟಿ: ಹಾಥರಸ್‌ಗೆ ತೆರಳುವುದಕ್ಕೂ ಮುನ್ನ ರಾಹುಲ್ ಗಾಂಧಿ ಅವರು ಅಲಿಗಢಕ್ಕೆ ಹೋಗಿ, ಜಿಲ್ಲೆಯಲ್ಲಿರುವ ಸಂತ್ರಸ್ತರ ಕುಟುಂಬಸ್ಥರನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು.

ಅವರೊಂದಿಗೆ ಕಾಂಗ್ರೆಸ್‌ನ ಉತ್ತರ ಪ್ರದೇಶ ಘಟಕದ ಅಧ್ಯಕ್ಷ ಅಜಯ್ ರಾಯ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ಅವಿನಾಶ್ ಪಾಂಡೆ, ಪಕ್ಷದ ವಕ್ತಾರೆ ಸುಪ್ರಿಯಾ ಶ್ರೀನೇತ್ ಇದ್ದರು.

'ಹೆಚ್ಚಿನ ಪರಿಹಾರಕ್ಕೆ ಯತ್ನ'

ಹಾಥರಸ್/ಅಲಿಗಢ (ಪಿಟಿಐ): 'ನಮಗೆ ನೀಡಲಾಗುವ ಪರಿಹಾರ ಮೊತ್ತವನ್ನು ಹೆಚ್ಚಳ ಮಾಡುವುದಕ್ಕೆ ಪ್ರಯತ್ನಿಸುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭರವಸೆ ನೀಡಿದ್ದಾರೆ' ಎಂದು ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಸ್ಥರು ಶುಕ್ರವಾರ ಹೇಳಿದ್ದಾರೆ.

ಕಾಲ್ತುಳಿತ ಕುರಿತು ಸಂಸತ್ ಅಧಿವೇಶನದಲ್ಲಿ ಪ್ರಸ್ತಾಪಿಸುವುದಾಗಿ ಹಾಗೂ ಭವಿಷ್ಯದಲ್ಲಿ ಇಂತಹ ಘಟನೆಗಳು ನಡೆಯದಂತೆ ಕ್ರಮ ಕೈಗೊಳ್ಳಲು ಒತ್ತಾಯಿಸುವುದಾಗಿಯೂ ರಾಹುಲ್ ಗಾಂಧಿ ತಿಳಿಸಿದ್ದಾಗಿ ಹೇಳಿದ್ದಾರೆ.

ರಾಹುಲ್ ಗಾಂಧಿ ಅವರು ಅಲಿಗಢ ಬಳಿಯ ಪಿಲ್ಖನಾ ಗ್ರಾಮ ಹಾಗೂ ಹಾಥರಸ್‌ನ ವಿಭವ ನಗರಕ್ಕೆ ಭೇಟಿ ನೀಡಿ, ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಗಳ ಸದಸ್ಯರಿಗೆ ಸಾಂತ್ವನ ಹೇಳಿದರು. 'ರಾಹುಲ್ ಗಾಂಧಿ ನಮ್ಮ ಜೊತೆ ಮಾತನಾಡಿ, ಸಾಂತ್ವನ ಹೇಳಿದರು. ಪರಿಹಾರ ಮೊತ್ತ ಹೆಚ್ಚಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು' ಎಂದು ಕಾಲ್ತುಳಿತದಲ್ಲಿ ತನ್ನ ಸೋದರತ್ತೆಯನ್ನು ಕಳೆದು ಕೊಂಡಿರುವ ಹಾಥರಸ್ ನಿವಾಸಿ ಹರಿಮೋಹನ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ಸಲಿಂಗ ವಿವಾಹ: 10ರಂದು 'ಸುಪ್ರೀಂ'ನಲ್ಲಿ ಅರ್ಜಿಗಳ ಪರಿಶೀಲನೆ

ನವದೆಹಲಿ (ಪಿಟಿಐ): ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಲು ನಿರಾಕರಿಸಿ ನೀಡಿದ್ದ ತೀರ್ಪಿನ ಮರುಪರಿಶೀಲನೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಜುಲೈ 10ರಂದು ಪರಿಶೀಲಿಸಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐದು ಜನ ನ್ಯಾಯಮೂರ್ತಿಗಳಿರುವ ಪೀಠವು ಸಿಜೆಐ ಅವರ ಕೊಠಡಿಯಲ್ಲಿ, ತೀರ್ಪಿನ ಮರುಪರಿಶೀಲನೆ ಕೋರಿರುವ ಅರ್ಜಿಗಳ ಪರಿಶೀಲನೆ ನಡೆಸಲಿದೆ ಎಂದು ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಪೀಠದ ಇತರ ಸದಸ್ಯರಾದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಹಿಮಾ ಕೊಹ್ಲಿ, ಬಿ.ವಿ.ನಾಗರತ್ನಾ ಹಾಗೂ ಪಿ.ಎಸ್.ನರಸಿಂಹ ಅವರೂ ಉಪಸ್ಥಿತರಿರುವರು.

ಸುಪ್ರೀಂ ಕೋರ್ಟ್‌ನ ವಿಧಿವಿಧಾನಗಳ ಪ್ರಕಾರ, ತೀರ್ಪಿನ ಪುನರ್ ಪರಿಶೀಲನಾ ಅರ್ಜಿಯನ್ನು ಸಂಬಂಧಪಟ್ಟ ನ್ಯಾಯಮೂರ್ತಿಗಳು ತಮ್ಮ ಕೊಠಡಿಯಲ್ಲಿಯೇ ಪರಿಶೀಲಿಸುತ್ತಾರೆ. ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಲು ನಿರಾಕರಿಸಿ ಸುಪ್ರೀಂ ಕೋರ್ಟ್ ಕಳೆದ ವರ್ಷ ಅಕ್ಟೋಬರ್ 17ರಂದು ತೀರ್ಪು ನೀಡಿತ್ತು.

ಕವಿತಾ ಬಂಧನ ಅವಧಿ ಮತ್ತೆ ವಿಸ್ತರಣೆ



ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಜುಲೈ 18ರವರೆಗೆ ವಿಸ್ತರಿಸಿ ನ್ಯಾಯಾಲಯವು ಆದೇಶ ಹೊರಡಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಈ ವರ್ಷದ ಮಾರ್ಚ್‌ನಲ್ಲಿ ಕವಿತಾ ಅವರನ್ನು ಜಾರಿ ನಿರ್ದೇಶನಾಲಯವು ಬಂಧಿಸಿತ್ತು. ಬಳಿಕ ಅದೇ ಪ್ರಕರಣದಲ್ಲಿ ಏಪ್ರಿಲ್‌ನಲ್ಲಿ ಸಿಬಿಐ ಕೂಡ ಅವರನ್ನು ಬಂಧಿಸಿತ್ತು.

ಜಾಮಾ ಮಸೀದಿಯಲ್ಲಿ ಸಮೀಕ್ಷೆ: ಪ್ರತಿಕ್ರಿಯೆಗೆ ಸೂಚನೆ

ಪ್ರಯಾಗ್‌ರಾಜ್ (ಪಿಟಿಐ): ಮಥುರಾದ ಕೃಷ್ಣ ಜನ್ಮಭೂಮಿಯಲ್ಲಿದ್ದ ಠಾಕೂರ್ ಕೇಶವದೇವ ಮೂರ್ತಿಯನ್ನು ಆಗ್ರಾದ ಜಾಮಾ ಮಸೀದಿಯಲ್ಲಿ ಹೂಳಲಾಗಿದೆ. ಹೀಗಾಗಿ ಆ ಮಸೀದಿಯಲ್ಲಿ ಸಮೀಕ್ಷೆ ನಡೆಸಬೇಕು ಎಂದು ಕೋರಿ ಅಲಹಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಈ ಕುರಿತು ಪ್ರತಿಕ್ರಿಯೆ ನೀಡುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಹೈಕೋರ್ಟ್ ಸೂಚಿಸಿದೆ.

ಮಥುರಾದ ಕೇಶವದೇವ ದೇವಾಲಯವನ್ನು 1670ರಲ್ಲಿ ಮೊಘಲ್ ದೊರೆ ಔರಂಗಜೇಬ್ ನೆಲಸಮ ಮಾಡಿದ್ದ ಮತ್ತು ಮೂರ್ತಿಯ ಅವಶೇಷಗಳನ್ನು ಜಾಮಾ ಮಸೀದಿಯಲ್ಲಿ ಹೂಳಿದ್ದ ಎಂದು ಅರ್ಜಿದಾರರು ಆರೋಪಿಸಿದ್ದಾರೆ. ಜೊತೆಗೆ, ಸಮೀಕ್ಷೆಯ ಮೇಲ್ವಿಚಾರಣೆ ನಡೆಸಲು ಕೋರ್ಟ್ ಕಮಿಷನರ್ ಅವರನ್ನು ನೇಮಿಸುವಂತೆಯೂ ಮನವಿ ಮಾಡಿದ್ದಾರೆ.

ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಮಯಾಂಕ್ ಕುಮಾರ್ ಜೈನ್ ಅವರು ಶುಕ್ರವಾರ ನಡೆಸಿದರು. ಎಎಸ್‌ಐ ಸಮೀಕ್ಷೆ ಜೊತೆ ಎಸ್‌ಐಟಿ ತನಿಖೆ ನಡೆಸುವಂತೆ ಸೂಚನೆ ನೀಡಲೂ ಮನವಿ ಮಾಡಿದ್ದಾರೆ.

ಅರ್ಜಿಯ ಮುಂದಿನ ವಿಚಾರಣೆಯನ್ನು ಹೈಕೋರ್ಟ್ ಆಗಸ್ಟ್ 5ಕ್ಕೆ ನಿಗದಿಪಡಿಸಿದೆ.

ಕೇಂದ್ರ ಸರ್ಕಾರ ಆಗಸ್ಟ್‌ನಲ್ಲಿ ಪತನ: ಲಾಲು ಪ್ರಸಾದ್

ಪಟ್ನಾ (ಪಿಟಿಐ): ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದುರ್ಬಲವಾಗಿದ್ದು, ಮುಂದಿನ ತಿಂಗಳೇ ಉರುಳಿ ಬೀಳಲಿದೆ ಎಂದು ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಅವರು ಶುಕ್ರವಾರ ಹೇಳಿದರು.

ಪಕ್ಷದ ಸ್ಥಾಪನೆಯಾಗಿ 28 ವರ್ಷ ಪೂರ್ಣಗೊಂಡಿರುವ ಪ್ರಯುಕ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಹೀಗೆ ಭವಿಷ್ಯ ನುಡಿದರು. 'ಸದ್ಯದಲ್ಲಿಯೇ 10 ನಿಮಿಷಗಳ ಕಾಲ ಮಾತನಾಡಿದ ಅವರು, ಮೋದಿ ಸರ್ಕಾರ ದುರ್ಬಲವಾಗಿದೆ. ಯಾವುದೇ ಸಮಯದಲ್ಲಿ ಉರುಳಿ ಬೀಳಬಹುದು. ಆಗಸ್ಟ್‌ನಲ್ಲೇ ಪತನವಾಗಬಹುದು' ಎಂದು ಹೇಳಿದರು.

ಸಂಘಟನೆಯ ಪರಿಸ್ಥಿತಿ ಸಿದ್ಧವಾಗಿರುವಂತೆ ಪಕ್ಷದ ಕಾರ್ಯಕರ್ತರಿಗೆ ಸೂಚಿಸಿದರು. ಇದೇ ಸಂದರ್ಭದಲ್ಲಿ, 'ಬೇರೆಯವರಂತೆ ನಾವು ಯಾವತ್ತೂ ಸಿದ್ಧಾಂತದ ಜೊತೆ ರಾಜಿಯಾಗಿಲ್ಲ' ಎಂದರು.

ಬಿಹಾರ: ₹3,600 ಕೋಟಿ ಮೊತ್ತದ ಟೆಂಡರ್‌ಗಳು ರದ್ದು

ಪಟ್ನಾ (ಪಿಟಿಐ): 'ಮಹಾಘಟಬಂಧನ್ ಆಡಳಿತ ಅವಧಿಯಲ್ಲಿ ಮಂಜೂರಾಗಿದ್ದ ₹3,600 ಕೋಟಿ ಮೊತ್ತದ ಗ್ರಾಮೀಣ ನೀರು ಸರಬರಾಜು ಕಾಮಗಾರಿಗಳ ಟೆಂಡರ್‌ಗಳನ್ನು ಬಿಹಾರ ಸರ್ಕಾರವು ರದ್ದುಗೊಳಿಸಿದೆ' ಎಂದು ಸಾರ್ವಜನಿಕ ಆರೋಗ್ಯ ಎಂಜಿನಿಯರಿಂಗ್ (ಪಿಎಚ್‌ಇ) ಇಲಾಖೆಯ ಸಚಿವ ನೀರಜ್ ಕುಮಾರ್ ಸಿಂಗ್ ಶುಕ್ರವಾರ ಇಲ್ಲಿ ತಿಳಿಸಿದರು.

'ಈ ಟೆಂಡರ್‌ಗಳಲ್ಲಿ ಸರಿಯಾದ ಪ್ರಕ್ರಿಯೆ ಅನುಸರಿಸಿಲ್ಲ ಹಾಗೂ ಇವು ಸಾಕಷ್ಟು ಪ್ರದೇಶಗಳನ್ನು ಒಳಗೊಂಡಿಲ್ಲ ಎಂಬುದು ಇಲಾಖೆ ನಡೆಸಿದ ತನಿಖೆಯಲ್ಲಿ ದೃಢಪಟ್ಟ ಬಳಿಕ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಸಚಿವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಭಿನ್ನಮತದ ಮನ್ನಣೆಯೇ ಪ್ರಜಾಪ್ರಭುತ್ವದ ಪ್ರಾಣವಾಯು.

–ಗೋಪಾಲಕೃಷ್ಣ ಅಡಿಗ

ಬ್ರಿಟನ್ ಪ್ರಧಾನಿ ಸ್ಟಾರ್ಮರ್ ಮುಂದೆ ಸವಾಲುಗಳ ಸಾಲು

ಬ್ರಿಟನ್ ಜನಪ್ರತಿನಿಧಿ ಸಭೆಗೆ (ಹೌಸ್ ಆಫ್ ಕಾಮನ್ಸ್) ನಡೆದ ಚುನಾವಣೆಯಲ್ಲಿ ಲೇಬರ್ ಪಾರ್ಟಿಯು ಭಾರಿ ಬಹುಮತದ ಗೆಲುವು ದಾಖಲಿಸಿದೆ. 650 ಸದಸ್ಯ ಬಲದ ಸದನದಲ್ಲಿ 412 ಸ್ಥಾನಗಳನ್ನು ಕೀರ್ ಸ್ಟಾರ್ಮರ್ ನಾಯಕತ್ವದ ಲೇಬರ್ ಪಾರ್ಟಿಯು ಗಳಿಸಿದೆ. ಇದರೊಂದಿಗೆ ಕನ್ಸರ್ವೇಟಿವ್ ಪಾರ್ಟಿಯ 14 ವರ್ಷಗಳ ಆಳ್ವಿಕೆಯು ಕೊನೆಗೊಂಡಿದೆ. ಭಾರತ ಮೂಲದ ರಿಷಿ ಸುನಕ್ ನಾಯಕತ್ವದ ಕನ್ಸರ್ವೇಟಿವ್ ಪಾರ್ಟಿಯು ಸುಮಾರು ಎರಡು ಶತಮಾನಗಳಲ್ಲಿಯೇ ಅತ್ಯಂತ ಕಡಿಮೆ ಸ್ಥಾನಗಳನ್ನು ಪಡೆದುಕೊಂಡಿದೆ. ಸ್ಟಾರ್ಮರ್ ಹೊಸ ಪ್ರಧಾನಿಯಾಗಿ ಅಧಿಕಾರವನ್ನೂ ವಹಿಸಿಕೊಂಡಿದ್ದಾರೆ. ಕನ್ಸರ್ವೇಟಿವ್ ಪಕ್ಷದ ಹೀನಾಯ ಸೋಲು ಮತ್ತು ಲೇಬರ್ ಪಾರ್ಟಿಯ ಅದ್ಭುತ ಗೆಲುವು ನಿರೀಕ್ಷಿತವೇ ಆಗಿತ್ತು. ಮತಗಟ್ಟೆ ಸಮೀಕ್ಷೆಗಳು ಕೂಡ ಇದನ್ನೇ ಹೇಳಿದ್ದವು. ಕನ್ಸರ್ವೇಟಿವ್ ಪಕ್ಷದ 14 ವರ್ಷಗಳ ಆಡಳಿತವು ಬ್ರಿಟನ್ ಅನ್ನು ಹಿಂದಕ್ಕೆ ಒಯ್ಯಿತೇ ಹೊರತು ಪ್ರಗತಿಯತ್ತ ಮುನ್ನಡೆಸಲಿಲ್ಲ. ಈ 14 ವರ್ಷಗಳಲ್ಲಿ ಪ್ರಧಾನಿ ಹುದ್ದೆಗೆ ಐವರು ಏರಿದರು. ಹಣಕಾಸು ಸಚಿವರನ್ನು ಏಳು ಬಾರಿ ಬದಲಾಯಿಸಲಾಯಿತು. ವಿದೇಶಾಂಗ ಸಚಿವರು ಎಂಟು ಬಾರಿ ಬದಲಾದರು. ವಸತಿ ಸಚಿವರು 16 ಬಾರಿ ಬದಲಾದರು. ಸರ್ಕಾರವು ಎಷ್ಟು ಅಸ್ಥಿರವಾಗಿತ್ತು ಎಂಬುದಕ್ಕೆ ಬೇರೆ ವಿವರಗಳನ್ನೇನೂ ನೀಡಬೇಕಾಗಿಲ್ಲ. ಅಧಿಕಾರ ಸ್ಥಾನದಲ್ಲಿ ಇದ್ದವರು ಪದೇ ಪದೇ ಬದಲಾದರೆ ಆಡಳಿತವು ದಕ್ಷವಾಗಿ ಇರಲು ಸಾಧ್ಯವಿಲ್ಲ. ಈ ಅವಧಿಯಲ್ಲಿ ಹಲವು ಗಂಭೀರ ಸಮಸ್ಯೆಗಳನ್ನೂ ದೇಶವು ಎದುರಿಸಿದೆ. ಐರೋಪ್ಯ ಒಕ್ಕೂಟದಿಂದ ಹೊರಬರುವ ಕಠಿಣ ನಿರ್ಧಾರವನ್ನು ತೆಗೆದುಕೊಳ್ಳಬೇಕಾಯಿತು. ಕೋವಿಡ್ ಸಾಂಕ್ರಾಮಿಕವು ದೇಶವನ್ನು ಆವರಿಸಿದಾಗ ಬೋರಿಸ್ ಜಾನ್ಸನ್ ಪ್ರಧಾನಿಯಾಗಿದ್ದರು. ದೇಶದಲ್ಲಿ 2.3 ಲಕ್ಷಕ್ಕೂ ಹೆಚ್ಚು ಜನರು ಕೋವಿಡ್‌ನಿಂದಾಗಿ ಪ್ರಾಣ ಕಳೆದುಕೊಂಡರು. ಜಾನ್ಸನ್ ಅವರ ಅಸಡ್ಡೆಯೇ ಕೋವಿಡ್ ಅಪಾಯಕಾರಿಯಾಗಿ ಹರಡಲು ಕಾರಣ ಎಂದು ಆಗ ವಿಶ್ಲೇಷಿಸಲಾಗಿತ್ತು. 46 ದಿನ ಪ್ರಧಾನಿಯಾಗಿದ್ದ ಲಿಜ್ ಟ್ರಸ್ ಅವರ ಆರ್ಥಿಕ ನೀತಿಯು ದೇಶದ ಆರ್ಥಿಕತೆಯು ಮಗುಚಿ ಬೀಳುವಂತೆ ಮಾಡಿತು. ಕನ್ಸರ್ವೇಟಿವ್ ಆಳ್ವಿಕೆಯಲ್ಲಿ ಬ್ರಿಟನ್‌ನ ಸಾಮಾನ್ಯ ಪ್ರಜೆಯ ವಾರ್ಷಿಕ ವರಮಾನದಲ್ಲಿ ಕನಿಷ್ಠ 10 ಸಾವಿರ ಡಾಲರ್ ಕಡಿತವಾಗಿದೆ ಎಂಬ ವಿಶ್ಲೇಷಣೆಯೂ ಇದೆ. ಆದಾಯ ಕಡಿಮೆಯಾಗಿ, ಹಣದುಬ್ಬರ ಅಂಕೆ ಮೀರಿ ಜನರು ಹೈರಾಣಾದುದರ ಪರಿಣಾಮವೇ ಈ ಪರಿಯ ಫಲಿತಾಂಶಕ್ಕೆ ಕಾರಣ.



ಹಣದುಬ್ಬರ ನಿಯಂತ್ರಣ, ಜನರ ಆದಾಯ ಹೆಚ್ಚಳ, ಸರ್ಕಾರದ ಹಣಕಾಸು ಸ್ಥಿತಿಯನ್ನು ಉತ್ತಮಪಡಿಸುವುದು, ಉದ್ಯೋಗ ಸೃಷ್ಟಿ... ಇವು ನೂತನ ಪ್ರಧಾನಿಯ ಮುಂದಿರುವ ಸವಾಲುಗಳು

ಸ್ಟಾರ್ಮರ್ ಮುಂದೆ ಸಾಲು ಸಾಲು ಸವಾಲುಗಳಿವೆ. ಹಣದುಬ್ಬರ ನಿಯಂತ್ರಣ, ಜನರ ಆದಾಯ ಹೆಚ್ಚಳ, ಸರ್ಕಾರದ ಹಣಕಾಸು ಸ್ಥಿತಿಯನ್ನು ಉತ್ತಮಪಡಿಸುವುದು, ಉದ್ಯೋಗ ಸೃಷ್ಟಿ ಪ್ರಮುಖವಾದವು. ಭಾರಿ ಬಹುಮತದ ಸರ್ಕಾರ ಅಧಿಕಾರದಲ್ಲಿರುವಾಗ ಜನರಿಗೆ ಆ ಸರ್ಕಾರದ ಮೇಲೆ ನಿರೀಕ್ಷೆಗಳೂ ಹೆಚ್ಚೇ ಇರುತ್ತವೆ. ಹಾಗಾಗಿ, ಸ್ಟಾರ್ಮರ್ ಬಹಳ ಜಾಣ್ಮೆಯಿಂದ, ಎಚ್ಚರದಿಂದ ಕೆಲಸ ಮಾಡಬೇಕಾಗುತ್ತದೆ. 'ಬದಲಾವಣೆ ಬೇಕಿದೆ' ಎಂಬ ಘೋಷವಾಕ್ಯವನ್ನು ಮುಂದಿಟ್ಟು ಸ್ಟಾರ್ಮರ್ ಮತ ಯಾಚನೆ ಮಾಡಿದ್ದಾರೆ. ಆದರೆ ದೇಶವು ಸಮಸ್ಯೆಗಳ ಸುಳಿಯಲ್ಲಿ ಇದ್ದರೂ ಲೇಬರ್ ಪಾರ್ಟಿ ಈ ಬಾರಿ ಮುಂದಿರಿಸಿದ ಪ್ರಣಾಳಿಕೆಯು ಅಸ್ಪಷ್ಟವಾಗಿತ್ತು ಎಂದು ಹೇಳಲಾಗುತ್ತಿದೆ. ಮುಂದಿನ ದಾರಿ ಯಾವುದು ಎಂಬುದು ನಿಚ್ಚಳವಲ್ಲದಿದ್ದರೆ ತತ್ತರಿಸಿ ಹೋಗಿರುವ ದೇಶವನ್ನು ಮರಳಿ ಹಳಿಗೆ ತರುವುದು ಸುಲಭವಲ್ಲ. ಆಂತರಿಕವಾಗಿ ಮಾತ್ರವಲ್ಲ, ಬ್ರಿಟನ್ ಸುತ್ತ ಹಾಗೂ ಜಗತ್ತಿನಾದ್ಯಂತ ಹಲವು ಬಿಕ್ಕಟ್ಟು ಮತ್ತು ಸಂಘರ್ಷಗಳು ಇರುವ ಸಂದರ್ಭ ಇದು. ರಷ್ಯಾ–ಉಕ್ರೇನ್ ಸಂಘರ್ಷವು ಶಮನವಾಗುವ ಲಕ್ಷಣ ಕಾಣಿಸುತ್ತಿಲ್ಲ. ಇಸ್ರೇಲ್–ಹಮಾಸ್ ಜಟಾಪಟಿಗೂ ಪರಿಹಾರ ಸಿಕ್ಕಿಲ್ಲ. ಈ ವಿಚಾರದಲ್ಲಿ ಕನ್ಸರ್ವೇಟಿವ್ ಪಾರ್ಟಿ ದೃಢ ನಿಲುವು ತಳೆಯಲಿಲ್ಲ ಎಂಬ ಕಾರಣಕ್ಕೆ ಮುಸ್ಲಿಂ ಬಾಹುಳ್ಯದ ಪ್ರದೇಶಗಳಲ್ಲಿ ಈ ಪಕ್ಷಕ್ಕೆ ಹಿನ್ನಡೆಯಾಗಿದೆ. ಜಾಗತಿಕ ತಾಪಮಾನ ತಡೆಗೆ ರೂಪಿಸಿದ ಯಾವುದೇ ಯೋಜನೆ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರುತ್ತಿಲ್ಲ. ಪ್ರಧಾನಿಯಾದ ಮೊದಲ ತಿಂಗಳಲ್ಲಿಯೇ ಸ್ಟಾರ್ಮರ್ ಅವರು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರನ್ನು ಭೇಟಿಯಾಗಲಿದ್ದಾರೆ. ಯುರೋಪ್‌ನ ಇತರ ದೇಶಗಳ ಮುಖ್ಯಸ್ಥರನ್ನೂ ಭೇಟಿಯಾಗಲಿದ್ದಾರೆ. ಜಾಗತಿಕ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಸ್ಪಷ್ಟವಾದ ವಿದೇಶಾಂಗ ನೀತಿಯನ್ನು ಅವರು ರೂಪಿಸಿಕೊಳ್ಳಬೇಕಿದೆ. ಈ ಬಾರಿ ಭಾರತ ಮೂಲದ 26 ಸಂಸದರು ಆಯ್ಕೆಯಾಗಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಭಾರತ ಮೂಲದ ಮತದಾರರನ್ನು ಒಲಿಸಿಕೊಳ್ಳಲು ಸ್ಟಾರ್ಮರ್ ಭಾರಿ ಪ್ರಯತ್ನ ಮಾಡಿದ್ದಾರೆ. ದೇವಸ್ಥಾನಗಳಿಗೂ ಭೇಟಿ ಕೊಟ್ಟಿದ್ದಾರೆ. ಹೀಗಾಗಿ, ಭಾರತದ ಜೊತೆಗೆ ಅವರು ಸೌಹಾರ್ದ ಸಂಬಂಧವನ್ನು ಮುಂದುವರಿಸಿಕೊಂಡು ಹೋಗುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ.

ದಿನದ ಟ್ವೀಟ್

ಅದೃಷ್ಟವಂತ ಶ್ರೀಮಂತರು


ಮರುಹಂಚಿಕೆಯ ಉದ್ದೇಶದ ತೆರಿಗೆಗಳು ತಪ್ಪು ಎಂದು ಬಡವರ ಮನವೊಲಿಸಲು ಸಾಧ್ಯವಿರುವ ದೇಶಗಳಲ್ಲಿ ವಾಸಿಸುವ ಶ್ರೀಮಂತರು ಬಹಳ ಅದೃಷ್ಟವಂತರು!



ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

ಕಿಡಿನುಡಿ

ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು ತಮ್ಮ ಆಸ್ತಿಯನ್ನು ಸಾರ್ವಜನಿಕರ ಒಳಿತಿಗಾಗಿ ಬಿಟ್ಟುಕೊಡುತ್ತಾರೆ. ಆದರೆ ಇಲ್ಲಿ ಮುಖ್ಯಮಂತ್ರಿಯವರು ಅತ್ಯಧಿಕ ಪರಿಹಾರ ಪಡೆದುಕೊಂಡು ಮಾತ್ರವಲ್ಲ, ಇನ್ನೂ ಹೆಚ್ಚು ಕಬಳಿಸಲು ಆಸೆಪಡುತ್ತಿದ್ದಾರೆ. ನೆಹರೂ-ಗಾಂಧಿ ಕುಟುಂಬಕ್ಕೆ ನಿಷ್ಠರಾಗಿರುವ ಸಿದ್ದರಾಮಯ್ಯ ಅವರು ಆ ಹಿರಿಯರ ತ್ಯಾಗದ ಮಾದರಿಯನ್ನು ಅನುಸರಿಸಲಿ.



ಲಹರ್ ಸಿಂಗ್ ಸಿರೋಯಾ, ರಾಜ್ಯಸಭೆಯ ಬಿಜೆಪಿ ಸದಸ್ಯ

25 ವರ್ಷಗಳ ಹಿಂದೆ

ಮಂಗಳವಾರ, 6-7-1999

● ಸೇನೆ– ಅತಿಕ್ರಮಣಕಾರರ ವಾಪಸಿಗೆ ಪಾಕ್ ಒಪ್ಪಿಗೆ

ವಾಷಿಂಗ್ಟನ್, ಜುಲೈ 5 (ಪಿಟಿಐ)– ಕಾರ್ಗಿಲ್‌ನಿಂದ ತನ್ನ ಸೇನೆ ಹಾಗೂ ಅತಿಕ್ರಮಣಕಾರರನ್ನು ವಾಪಸ್ ಕರೆಸಿಕೊಳ್ಳಲು ಹಾಗೂ 1972ರ ಶಿಮ್ಲಾ ಒಪ್ಪಂದದಂತೆ ವಾಸ್ತವ ಗಡಿರೇಖೆಯನ್ನು ಗೌರವಿಸಲು ಪಾಕಿಸ್ತಾನ ಸಮ್ಮತಿಸುವುದರೊಂದಿಗೆ ಜಮ್ಮು–ಕಾಶ್ಮೀರದ ಗಡಿಯಲ್ಲಿ ಕಳೆದ ಎರಡು ತಿಂಗಳಿಂದ ನಡೆಯುತ್ತಿರುವ ಸಂಘರ್ಷ ಕೊನೆಯಾಗುವ ಕಾಲ ಹತ್ತಿರವಾಗಿದೆ.

ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್ ಭಾನುವಾರ ಅಮೆರಿಕ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರನ್ನು ಭೇಟಿ ಮಾಡಿ ಮೂರು ಗಂಟೆ ನಡೆಸಿದ ಮಾತುಕತೆ ಸಮಯದಲ್ಲಿ ಸೇನೆ ವಾಪಸ್ ಕರೆಸಿಕೊಳ್ಳುವ, ವಾಸ್ತವ ಹತೋಟಿ ರೇಖೆಯನ್ನು ಗೌರವಿಸುವ ಸುಳಿವು ನೀಡಿದರು ಎಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದರು.

● ಎಡದಂಡೆ ನಾಲೆ: ಆಗಸ್ಟ್‌ನಲ್ಲಿ ನೀರು ಬಿಡುಗಡೆ ಭರವಸೆ

ಬೆಂಗಳೂರು, ಜುಲೈ 5– ಪದೇ ಪದೇ ಬಿರುಕು ಬಿಟ್ಟು ರೈತರಿಗೆ ತೊಂದರೆಯಾಗುತ್ತಿರುವ ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿ ಕಾರ್ಯವನ್ನು ಪೂರ್ಣಗೊಳಿಸಿ ಆಗಸ್ಟ್ 1ರಿಂದ ನಾಲೆಯಲ್ಲಿ ನೀರು ಬಿಡಲಾಗುತ್ತದೆ ಎಂದು ಭಾರಿ ನೀರಾವರಿ ಸಚಿವ ಕೆ.ಎನ್. ನಾಗೇಗೌಡ ಇಂದು ವಿಧಾನಸಭೆಯಲ್ಲಿ ಆಶ್ವಾಸನೆ ನೀಡಿದರು.

ಸುಮಾರು ರೂ. 90 ಕೋಟಿ ಅಂದಾಜು ವೆಚ್ಚದಲ್ಲಿ ನಾಲೆಯ ಆಧುನೀಕರಣ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 6-7-1974

● ಲಿಂಗನಮಕ್ಕಿ ಅಣೆಗೆ 8 ಅಡಿಯಷ್ಟು ನೀರು: ಭರ್ತಿ ಭರವಸೆ

ಬೆಂಗಳೂರು, ಜುಲೈ 5– ಸುಮಾರು ಆರೇಳು ಇಂಚಿನಷ್ಟು ಭಾರಿ ಮಳೆ ಪಡೆಯುತ್ತಿರುವ ಲಿಂಗನಮಕ್ಕಿ ಜಲಾನಯನ ಪ್ರದೇಶದಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ ಜಲಾಶಯದ ಮಟ್ಟವನ್ನು ಎಂಟು ಅಡಿಗಳಷ್ಟು ಏರಿಸಿರುವುದರ ಪರಿಣಾಮವಾಗಿ, ಇನ್ನಷ್ಟು ವಿದ್ಯುತ್ ಕಡಿತದ ಆತಂಕವನ್ನು ಬಹುತೇಕ ದೂರ ಮಾಡಿದೆ.

'ನಾವು ಕಷ್ಟದಿಂದ ಪೂರ್ತಿ ಪಾರಾಗಿಲ್ಲ. ಆದರೆ ಮುಂಗಾರು ಮಳೆ ಆರಂಭವಾಗಿ ನೀರಿನ ಪ್ರಮಾಣ ಹೆಚ್ಚುತ್ತಿರುವುದರಿಂದ ಸದ್ಯದ ಮಟ್ಟಿಗೆ ಆನಂದಪಟ್ಟುಕೊಳ್ಳಲು ಕಾರಣಗಳಿವೆ' ಎಂದು ವಿದ್ಯುಚ್ಛಕ್ತಿ ಖಾತೆ ಮಂತ್ರಿ ಎಚ್.ಎಂ. ಚನ್ನಬಸಪ್ಪ ಅವರು ತಿಳಿಸಿದರು.

● ಹೃದ್ರೋಗ ತಡೆಗೆ ಹೊಸ ವಿಧಾನ

ನವದೆಹಲಿ, ಜುಲೈ 5– 'ಮೊಸರು ಆರೋಗ್ಯಕ್ಕೆ ಒಳ್ಳೆಯದು'. ಭಾರತೀಯರು ಹಿಂದಿನ ಕಾಲದಿಂದಲೂ ತಳೆದಿರುವ ನಂಬಿಕೆ ಇದು. ಹೃದಯಾಘಾತ ಸಂಭವಿಸುವುದನ್ನು ಮೊಸರು ತಡೆಯುತ್ತದೆ ಎಂದು ಈಚಿನ ವೈದ್ಯಕೀಯ ಅಧ್ಯಯನ ತಿಳಿಸಿದೆ.

'ನ್ಯೂಯಾರ್ಕ್ ಟೈಮ್ಸ್' ವರದಿ ಮಾಡಿರುವಂತೆ ಆಫ್ರಿಕಾ ಮತ್ತು ಅಮೆರಿಕದ ವೈದ್ಯ ಅಧ್ಯಯನವು ಮೊಸರಿನ ಮಹಿಮೆಯನ್ನು ಸಾಬೀತುಪಡಿಸಿದೆ.

ಮೊಸರನ್ನು ಸೇವಿಸುವುದರಿಂದ ರಕ್ತದಲ್ಲಿ ಕೊಲೆಸ್ಟರಾಲ್ ಪ್ರಮಾಣವನ್ನು ಇಳಿಸಬಹುದು. ಇದೇ ವೈದ್ಯ ವಿಜ್ಞಾನಿಗಳ ಈಚಿನ ಶೋಧ.

ಭಾರತದ ದಿಕ್ಕು ಬದಲಿಸಿದ ಕ್ರಾಂತಿಕಾರಿ ಕರೆ ಎಲ್ಲ ಜನಪರ ಹೋರಾಟಗಳ ಭಾಗವಾಗಲಿ

ಅಂಬೇಡ್ಕರ್ ಕರೆಗೆ ಶತಮಾನದ ಸಂಭ್ರಮ!



ವಿಶ್ಲೇಷಣೆ

ನಟರಾಜ್ ಹುಳಿಯಾರ್

'ಎಜುಕೇಟ್, ಆ್ಯಜಿಟೇಟ್ ಆ್ಯಂಡ್ ಆರ್ಗನೈಸ್'.

ಇಸವಿ 1924. ಜುಲೈ 20. ಬಿ.ಆರ್. ಅಂಬೇಡ್ಕರ್ ಅವರ ಕಂಠದಿಂದ ಚಿಮ್ಮಿದ ಈ ಮೂರು ಚಾರಿತ್ರಿಕ ಕರೆಗಳಿಗೆ ಈ ತಿಂಗಳು ನೂರು ವರ್ಷ ತುಂಬಲಿದೆ! ಬಾಬಾಸಾಹೇಬರು 'ಬಹಿಷ್ಕೃತ ಹಿತಕಾರಿಣಿ ಸಭಾ' ಸ್ಥಾಪಿಸಿದ ದಿನ ಮೊಳಗಿದ ಕರೆಗಳಿವು.

ಅಂಬೇಡ್ಕರ್ ಅವರು 1923ರಲ್ಲಿ ಇಂಗ್ಲೆಂಡಿನಲ್ಲಿ ಬಾರ್ ಅಟ್ ಲಾ ಪದವಿ ಹಾಗೂ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಿಂದ ಡಾಕ್ಟರ್ ಆಫ್ ಸೈನ್ಸ್ ಪದವಿ ಪಡೆದು ಭಾರತಕ್ಕೆ ಮರಳಿ ಬಂದಿದ್ದರು. ವಕೀಲ, ನ್ಯಾಯಾಧೀಶ, ಅಧ್ಯಾಪಕ ವೃತ್ತಿಗಳ ಪೈಕಿ ಯಾವುದನ್ನು ಆಯ್ಕೆ ಮಾಡಿಕೊಳ್ಳುವುದು ಎಂಬ ಗೊಂದಲದಲ್ಲಿ ಇದ್ದರು. 1920ರಿಂದಲೇ 'ಮೂಕನಾಯಕ' ಪತ್ರಿಕೆಯ ಮೂಲಕ ದಲಿತ ಸಮುದಾಯವನ್ನು ಜಾಗೃತಗೊಳಿಸುತ್ತಿದ್ದ ಅವರಿಗೆ ತಾವು ಮಹತ್ತರ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದೆ ಎಂಬುದು ಖಚಿತವಾಗಿತ್ತು; ದಾರಿ ಸ್ಪಷ್ಟವಾಗಿರಲಿಲ್ಲ.

ಆ ಘಟ್ಟದಲ್ಲಿ ಅಂಬೇಡ್ಕರ್ ಅವರು ಬಾಂಬೆಯಲ್ಲಿ 'ಬಹಿಷ್ಕೃತ ಹಿತಕಾರಿಣಿ ಸಭಾ' ಆರಂಭಿಸಿದರು. ಅವತ್ತು ಅವರು ಕೊಟ್ಟ ಮೂರು ಕರೆಗಳು ಅವರ ಮುಂದಿನ ದಾರಿ, ಗುರಿಗಳನ್ನು ತೆರೆದಿಟ್ಟವು. ಮೂರೂ ಗುರಿಗಳತ್ತ ದಲಿತ ಸಮುದಾಯವನ್ನು ಮುನ್ನಡೆಸುವ ಜೀವಮಾನದ ಹೊಣೆ ತಮ್ಮದೇ ಎಂಬುದೂ ಅವರಿಗೆ ಖಾತ್ರಿಯಾಯಿತು. 'ಬಹಿಷ್ಕೃತ ಹಿತಕಾರಿಣಿ ಸಭಾ' ಅಸ್ಪೃಶ್ಯತೆಯಿಂದ ದಮನಕ್ಕೊಳಗಾದ ಎಲ್ಲ ಜಾತಿಗಳಿಗೂ ವೇದಿಕೆಯಾಯಿತು. ಮೊದಲಿಗೆ, ದಲಿತ ಮಕ್ಕಳಿಗಾಗಿ ವಿದ್ಯಾರ್ಥಿನಿಲಯ, ರೀಡಿಂಗ್ ರೂಮ್ ಶುರುವಾದವು. ಇದು ಅಂಬೇಡ್ಕರ್ ಕರೆಯಲ್ಲಿದ್ದ 'ಶಿಕ್ಷಣ'ದ ಮೂಲಕ ಜಾಗೃತಿ ಮೂಡಿಸುವ ಮೊದಲ ಘಟ್ಟ. ಆದರೂ 'ಸಭಾ' ದೊಡ್ಡ ಮಟ್ಟದಲ್ಲಿ ಹಬ್ಬಲು ಒಂದು ಬೃಹತ್ ಕಾರ್ಯಕ್ರಮ ಅಥವಾ ವಿದ್ಯಮಾನವನ್ನು ಅಂಬೇಡ್ಕರ್ ಎದುರು ನೋಡುತ್ತಿದ್ದರು.

ಅಷ್ಟೊತ್ತಿಗಾಗಲೇ ಸ್ವಾತಂತ್ರ್ಯ ಚಳವಳಿಯ ಭಾಗವಾಗಿ ಗಾಂಧೀಜಿ ನೇತೃತ್ವದ ಕಾಂಗ್ರೆಸ್, ಅಸ್ಪೃಶ್ಯತೆಯ ನಿವಾರಣೆಗೆ ಸುಧಾರಣಾ ಕಾರ್ಯಕ್ರಮಗಳನ್ನು ಶುರು ಮಾಡಿತ್ತು. ಕೇರಳದ ವೈಕಂನ ಮಹಾದೇವ ದೇವಾಲಯದ ಸುತ್ತ ಓಡಾಡುವ ದಾರಿಯನ್ನು ದಲಿತರೂ ಬಳಸಲು ಅವಕಾಶ ಇರಬೇಕು ಎಂದು ಕಾಂಗ್ರೆಸ್ ನೇತೃತ್ವದಲ್ಲಿ ಸತ್ಯಾಗ್ರಹ ಶುರುವಾಗಿತ್ತು. ಗಾಂಧೀಜಿ, ಪೆರಿಯಾರ್ ಈ ಸತ್ಯಾಗ್ರಹವನ್ನು ಬೆಂಬಲಿಸಿದ್ದರು. ದೇವಾಲಯದ ಸುತ್ತ ಓಡಾಡುವ ದಾರಿಗಾಗಿ ಕೂಡ ದಲಿತರು ಹೋರಾಡಬೇಕಾಗಿದ್ದುದನ್ನು ಅಂಬೇಡ್ಕರ್ ಗಮನಿಸುತ್ತಿದ್ದರು. ಜಡ ಸವರ್ಣೀಯ ಮನಸ್ಸು ಇಂಥ ಸತ್ಯಾಗ್ರಹಗಳಿಂದ ಬಗ್ಗುವುದಿಲ್ಲವೆಂಬುದನ್ನು ಮನಗಂಡಿದ್ದರು. ಆ ಹೊತ್ತಿಗಾಗಲೇ ಜಾತಿಪದ್ಧತಿಯ ಗಂಭೀರ ಅಧ್ಯಯನ ಮಾಡಿದ್ದ ಅವರೆದುರು ಜಾತಿಪದ್ಧತಿಯ ವಿರುದ್ಧ ನಿರ್ಣಾಯಕ ಹೋರಾಟವೊಂದನ್ನು ಆರಂಭಿಸುವ ಸವಾಲಿತ್ತು.

ಅದೇ ಸುಮಾರಿಗೆ ಅಂಬೇಡ್ಕರ್ ಭೇಟಿಗೆಂದು ಮಹಾರಾಷ್ಟ್ರದ ಮಹಾಡ್ ಪ್ರಾಂತದಿಂದ ತರುಣ ರಾಮಚಂದ್ರ ಬಾಬಾಜಿ ಮೋರೆ ಬಂದರು. ಅಸ್ಪೃಶ್ಯತೆಯ ಅವಮಾನಗಳನ್ನು ಎದುರಿಸುತ್ತಲೇ ಹೈಸ್ಕೂಲ್ ಮುಗಿಸಿದ್ದ ಮೋರೆ, ಮಹಾಡ್ ದಲಿತರ ಹಕ್ಕುಗಳಿಗಾಗಿ ಹೋರಾಟ ಆರಂಭಿಸಿದ್ದರು. ಹೋಟೆಲುಗಳಿಗೆ ಪ್ರವೇಶವಿಲ್ಲದ ದಲಿತರಿಗಾಗಿ ಮಹರ್ ಸಮುದಾಯದ ದೇವು ಜೋಶಿ ತೆರೆದ ಹೋಟೆಲ್, ದಲಿತ ಹಕ್ಕುಗಳನ್ನು ಚರ್ಚಿಸುವ ಚಾವಡಿಯಾಯಿತು. ದಲಿತರ ಹಕ್ಕುಗಳಿಗಾಗಿ ಒತ್ತಾಯಿಸಲು ಭಾರಿ ಸಮ್ಮೇಳನವೊಂದನ್ನು ಸಂಘಟಿಸಬೇಕೆಂದು ಮೋರೆಯವರ ಸಂಗಾತಿಗಳು ಯೋಚಿಸಿದರು. ಅಮೆರಿಕ, ಇಂಗ್ಲೆಂಡ್‌ನಲ್ಲಿ ಉನ್ನತ ಅಧ್ಯಯನ ಮಾಡಿ ಬಂದಿದ್ದ ಅಂಬೇಡ್ಕರ್ ಅವರನ್ನು ಈ ಸಮ್ಮೇಳನದಲ್ಲಿ ಸನ್ಮಾನಿಸಬೇಕು; ಅವರ ಮೂಲಕ ಹೊಸ ದಲಿತ ತಲೆಮಾರುಗಳಲ್ಲಿ ಸ್ಫೂರ್ತಿ ತುಂಬಬೇಕು ಎಂದು ಮೋರೆ ತಂಡ ತೀರ್ಮಾನಿಸಿತು.

ಮೋರೆಯ ಉತ್ಸಾಹದ ಬಗ್ಗೆ ಅಂಬೇಡ್ಕರ್ ಅವರಿಗೆ ನಂಬಿಕೆ ಹುಟ್ಟಿತು; ತರುಣನ ಸಂಘಟನಾ ಶಕ್ತಿಯ ಬಗ್ಗೆ ಅನುಮಾನವಿತ್ತು. ಸಂಘಟನೆಯ ಸಿದ್ಧತೆ ನೋಡಲು ಗೆಳೆಯರನ್ನು ಮಹಾಡ್‌ಗೆ ಕಳಿಸಿದರು. ಎರಡು ವರ್ಷಗಳ ಸಿದ್ಧತೆಯ ನಂತರ 1927ರ ಮಾರ್ಚ್ 19ರಂದು ಮಹಾಡ್ ಸಮ್ಮೇಳನ ಶುರುವಾಯಿತು. ಅಂಬೇಡ್ಕರ್ ಅವರ ಮೂರೂ ಕರೆಗಳು ದೊಡ್ಡ ಮಟ್ಟದಲ್ಲಿ ಜಾರಿಗೆ ಬಂದದ್ದು ಮಹಾಡ್‌ನಲ್ಲಿ. ಅಲ್ಲಿ ದಲಿತರ ಬೃಹತ್ 'ಸಂಘಟನೆ' ಆರಂಭವಾಗಿತ್ತು; ಅಂಬೇಡ್ಕರ್ ಅವರ ಸುದೀರ್ಘ ಮಹಾಡ್ ಭಾಷಣವು 'ಶಿಕ್ಷಣ', ಅದರಲ್ಲೂ ಉನ್ನತ ಶಿಕ್ಷಣ ಹಾಗೂ 'ಜಾಗೃತಿ'ಯ ಮಹತ್ವವನ್ನು, 'ಸಂಘಟನೆ', 'ಮರುಸಂಘಟನೆ'ಗಳ ಅಗತ್ಯವನ್ನು ಹೇಳಿಕೊಟ್ಟಿತು. 'ಹೋರಾಟ'ದ ಕರೆ ಮಾರನೆಯ ದಿನವೇ ಸಾಕಾರವಾಯಿತು.

ಚೌದಾರ್ ಕೆರೆಯ ನೀರು ಮುಟ್ಟದಂತೆ ಅಸ್ಪೃಶ್ಯರ ಮೇಲೆ ಹೇರಲಾಗಿದ್ದ ನಿಷೇಧವನ್ನು ಅಂಬೇಡ್ಕರ್ ನೇತೃತ್ವದ ಹೋರಾಟಗಾರರು ಮಾರ್ಚ್ 20ರಂದು ಶಾಂತಿಯುತವಾಗಿ ಉಲ್ಲಂಘಿಸಿದರು. ದಲಿತ ವಿಮೋಚನೆಯ ಚರಿತ್ರೆಯ ಚಕ್ರ ನಿರ್ಣಾಯಕವಾಗಿ ಚಲಿಸಿತು. 1927ರ ಡಿಸೆಂಬರ್ 25ರಿಂದ 27ರವರೆಗೆ ಬಹಿಷ್ಕೃತ ಹಿತಕಾರಿಣಿ ಸಭಾದ ನೇತೃತ್ವದಲ್ಲಿ ಆಯೋಜನೆಗೊಂಡಿದ್ದ ಮಹಾಡ್ ಸಮ್ಮೇಳನದ ಮೊದಲ ದಿನ ಮನುಸ್ಮೃತಿ ದಹನ ನಡೆಯಿತು. ಇದು, ಅಂಬೇಡ್ಕರ್ ಕರೆಯಲ್ಲಿರುವ 'ಶಿಕ್ಷಣ'ದ ಅರ್ಥವನ್ನು ಇನ್ನಷ್ಟು ವಿಸ್ತರಿಸಿತು; ಮನುಸ್ಮೃತಿಯ ಸರ್ವಾಧಿಕಾರದ ಬಗ್ಗೆ ಬ್ರಾಹ್ಮಣ, ಶೂದ್ರ, ದಲಿತ, ಮಹಿಳಾ ವಲಯಗಳಲ್ಲಿ ಕ್ರಾಂತಿಕಾರಿ ಜಾಗೃತಿಯನ್ನು ಮೂಡಿಸಿತು.



1970ರ ದಶಕದಲ್ಲಿ ಕರ್ನಾಟಕದ 'ದಲಿತ ಸಂಘರ್ಷ ಸಮಿತಿ' ಈ ಕರೆಯನ್ನು 'ಶಿಕ್ಷಣ, ಸಂಘಟನೆ, ಹೋರಾಟ' ಎಂದು ಅನುವಾದಿಸಿಕೊಂಡಿತು. ಇದು ಮುಂದೆ 'ಜಾಗೃತರಾಗಿ, ಹೋರಾಡಿ, ಸಂಘಟಿತರಾಗಿ'; 'ಜಾಗೃತರಾಗಿ, ಚಿಂತಿಸಿ, ಒಂದಾಗಿ' ಮುಂತಾಗಿ ವಿಸ್ತಾರಗೊಂಡಿತು.

ಅಂಬೇಡ್ಕರ್ ಕರೆ ಈ ನೂರು ವರ್ಷಗಳಲ್ಲಿ ಬೆಳೆದ ಪರಿ ವಿಸ್ಮಯಕಾರಿಯಾಗಿದೆ. 'ಎಜುಕೇಟ್' ಎಂಬುದರ ಅರ್ಥ ವಿಸ್ತಾರವಾಗಿದೆ; ದಲಿತರನ್ನೂ, ದಲಿತರನ್ನು ದಮನಿಸುವ ಸವರ್ಣೀಯರನ್ನೂ ತಿದ್ದುವ, ಜಾಗೃತಗೊಳಿಸುವ ಹೊಣೆಯನ್ನು ಈ ಕರೆ ಹೇಳಿಕೊಟ್ಟಿದೆ. ದಲಿತ ಸಾಹಿತ್ಯ, ದಲಿತ ಚಳವಳಿಗಳು ಮೂರೂ ಕರೆಗಳನ್ನು ನಿರಂತರವಾಗಿ ಮುಂದೊಯ್ದಿವೆ. ಈ ಕರೆಗಳ ಮುಂದಿನ ಹಂತದಂತಿದ್ದ 'ದಲಿತರು ಬರುವರು ದಾರಿ ಬಿಡಿ; ದಲಿತರ ಕೈಗೆ ರಾಜ್ಯ ಕೊಡಿ' ಎಂಬ ರೂಪಕ-ಘೋಷಣೆಯನ್ನು ತರುಣ ಕಮ್ಯುನಿಸ್ಟ್ ಕವಿ ಸಿದ್ಧಲಿಂಗಯ್ಯ ಸೃಷ್ಟಿಸಿದರು. ಈ ಕವಿಸಾಲು ಪ್ರಖ್ಯಾತ ಗೋಡೆ ಬರಹವಾಯಿತು; ಭಾರತದ ಹಲವು ಭಾಷೆಗಳಿಗೆ ಅನುವಾದಗೊಂಡಿತು. ಮಾಯಾವತಿ ಅವರು ಉತ್ತರಪ್ರದೇಶದ ಮುಖ್ಯಮಂತ್ರಿಯಾದಾಗ ಅಂಬೇಡ್ಕರ್ ಅವರು ಕೊನೆಯ ಘಟ್ಟದಲ್ಲಿ ಹೇಳುತ್ತಿದ್ದ ರಾಜಕೀಯ ಅಧಿಕಾರದ ಗುರಿಯೂ, ಕವಿ ರೂಪಕದ ಆಶಯವೂ ಬೆರೆತುಹೋದವು! ಬಾಬಾಸಾಹೇಬರು ಕರೆ ಕೊಟ್ಟ ಮೂರು ದಶಕಗಳಲ್ಲಿ ಮೂರೂ ಆಶಯಗಳು ಸಮುದಾಯ ಚಳವಳಿಯಾಗಿ ಬೆಳೆದು ಎಚ್ಚೆತ್ತ ದಲಿತ ಸಮುದಾಯವೇ ಸೃಷ್ಟಿಯಾಯಿತು. ನಂತರದ ದಶಕಗಳಲ್ಲಿ ಅಂಬೇಡ್ಕರ್ ಹೆಸರಿನಲ್ಲಿ ದೇಶದಾದ್ಯಂತ ಲಕ್ಷಾಂತರ ಶಿಕ್ಷಣ ಸಂಸ್ಥೆಗಳು, ಸಂಘಟನೆಗಳು ಹುಟ್ಟಿ ಬೆಳೆದವು.

ಮೂರು ಕರೆಗಳ ಜೊತೆಗೆ, 'ಬೌದ್ಧರಾಗಿರಿ', 'ಅಧಿಕಾರ ಹಿಡಿಯಿರಿ' ಎಂಬ ಕರೆಗಳು ಕೂಡ ಅವರೊಳಗೆ ಮೂಡತೊಡಗಿದ್ದನ್ನು ಅವರ ಕೊನೆಯ ಸಂದರ್ಶನಗಳು ಸೂಚಿಸುತ್ತವೆ. ಇವೆರಡೂ ಆಶಯಗಳು ಬಾಬಾಸಾಹೇಬರ ಬದುಕಿನ ಕೊನೆಯ ದಶಕದ ಗುರಿಗಳಾದವು. ಬೌದ್ಧ ಧರ್ಮ ಸ್ವೀಕಾರದ ಗುರಿ 1956ರಲ್ಲಿ ಸಾಕಾರವಾಯಿತು. 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' ಮೂಲಕ ರಾಜಕೀಯ ಅಧಿಕಾರದ ಗುರಿಯೆಡೆಗೆ ಚಲಿಸುವ ಮೊದಲೇ ಅಂಬೇಡ್ಕರ್ ನಿರ್ಗಮಿಸಿದರು. ಮುಂದೆ 'ರಿಪಬ್ಲಿಕನ್ ಪಾರ್ಟಿ'ಯ ರಾಜಕೀಯ ಪ್ರಯತ್ನ ಮುಂದುವರಿಯಿತು. ಅಂಬೇಡ್ಕರ್ ಬರಹಗಳ ಅಧ್ಯಯನದ ಮೂಲಕ 'ಅಧಿಕಾರದ ಕೀಲಿಕೈ' ಹುಡುಕಿಕೊಂಡ ಕಾನ್ಶಿರಾಂ ಅವರು ಬಹುಜನ ಸಮಾಜ ಪಕ್ಷವನ್ನು ಅಧಿಕಾರದತ್ತ ಮುನ್ನಡೆಸಿದರು.

ಕಳೆದ ನೂರು ವರ್ಷಗಳಲ್ಲಿ ಅಂಬೇಡ್ಕರ್ ಕರೆಯ ಪ್ರಭಾವವು ಎಲ್ಲ ನ್ಯಾಯಪರ ಚಳವಳಿಗಳ ಮೇಲೂ ಆಗಿದೆ. ರೈತ, ಕಾರ್ಮಿಕ, ಮಹಿಳಾ, ಹಿಂದುಳಿದ ವರ್ಗಗಳ ಚಳವಳಿಗಳು ಅಂಬೇಡ್ಕರ್ ಅವರ ಕರೆಯನ್ನು ಮೊಳಗಿಸದಿದ್ದರೂ, ಅವರ ಕರೆಯನ್ನು ಅನುಸರಿಸುವ ಕೆಲಸವನ್ನಂತೂ ಮಾಡಿವೆ. ಬಾಬಾಸಾಹೇಬರ ಕರೆಯ ಶತಮಾನೋತ್ಸವದ ಆಚರಣೆಯ ಸಂದರ್ಭದಲ್ಲಿ ಎಲ್ಲ ಜನಪರ ಚಳವಳಿಗಳೂ ಈ ಮೂರು ಗುರಿಗಳ ಹಿಂದಿನ ತಾತ್ವಿಕತೆಯನ್ನು ಆಳವಾಗಿ ಅಳವಡಿಸಿಕೊಳ್ಳಬೇಕಾಗಿದೆ. ಭಾರತದ ದಿಕ್ಕನ್ನೇ ಬದಲಿಸಿದ ಈ ಕ್ರಾಂತಿಕಾರಿ ಕರೆಯ ಶತಮಾನೋತ್ಸವದ ಈ ಸಂದರ್ಭದಲ್ಲಿ ಕರೆಯ ಗುರಿಗಳ ವಿಸ್ತರಣೆ, ಮರುಸ್ವೀಕಾರ, ಮರುವ್ಯಾಖ್ಯಾನ ದೊಡ್ಡ ಮಟ್ಟದಲ್ಲಿ ಶುರುವಾದರೆ ಇನ್ನಿತರ ಹುಸಿ ಆಚರಣೆಗಳ ಕರೆಗಳೆಲ್ಲ ಹಿಮ್ಮೆಟ್ಟಬಲ್ಲವು!

ಚುರುಮುರಿ



ನಾ ಅಲ್ಲಿರಬೇಕಿತ್ತು!

● ಗುರು ಪಿ.ಎಸ್.

'ನಾ ಬಿಹಾರದಲ್ಲಿ ಕೆಲಸ ಮಾಡ್ತಿರಬೇಕಿತ್ತು' ಕೈ ಹಿಸುಕಿಕೊಂಡ ಸಿವಿಲ್ ಎಂಜಿನಿಯರ್ ಮುದ್ದಣ್ಣ.

'ಹೌದು, ಇಷ್ಟೊತ್ತಿಗೆ ಕೋಟ್ಯಧಿಪತಿಗಳಾಗಿ ಬಿಡ್ತಿದ್ವಿ' ದನಿಗೂಡಿಸಿದ ಮತ್ತೊಬ್ಬ ಸಿವಿಲ್ ಎಂಜಿನಿಯರ್ ವಿಜಿ.

'15 ದಿನಗಳಲ್ಲಿ 10 ಸೇತುವೆಗಳು ಬಿದ್ದಿವೆಯಂತೆ. ಈ ಸಂದರ್ಭದಲ್ಲಿ ನಾವು ಬಿಹಾರದಲ್ಲಿ ಇದ್ದಿದ್ದರೆ ಕೈ ತುಂಬಾ ಕೆಲಸ ಸಿಕ್ಕಿರೋದು' ಮುದ್ದಣ್ಣ ಪುನರುಚ್ಚರಿಸಿದ.

'ನಾನೂ ಅಲ್ಲೇ ಇರಬೇಕಿತ್ತು' ಎನ್ನುತ್ತಾ ಬಂದ ನಗರಾಭಿವೃದ್ಧಿ ಪ್ರಾಧಿಕಾರವೊಂದರ ಅಧಿಕಾರಿ.

'ನಿಮಗೇನ್ ಕಡಿಮೆ ಆಗಿದೆ ಸರ್, ಡಿನೋಟಿಫೈ ಆಗಿದ್ದ ಜಮೀನಿನಲ್ಲೇ ಮತ್ತೆ ಲೇಔಟ್ ಮಾಡಿ ಹಣ ಮಾಡ್ಕೋಬಹುದು, ಸೈಟ್ ಅಲಾಟ್ ಮಾಡೋವಾಗಲೂ ಸೈಡ್ ಇನ್‌ಕಂ ತಗೋಬಹುದು' ಕಾಲೆಳೆದ ವಿಜಿ.

'ಆದರೂ ಒಮ್ಮೆ ಒಂದು ಲೇಔಟ್ ಮಾಡಿದರೆ ಕೆಲಸ ಮುಗಿದಂಗೆ ನಮ್ಮದು. ಆದರೆ, ಈ ರೀತಿ ಸೇತುವೆಗಳನ್ನ ಬೀಳಿಸ್ತಾ, ಮತ್ತೆ ಮತ್ತೆ ಅವೇ ಸೇತುವೆ ನಿರ್ಮಿಸ್ತಾ ದುಡ್ ಮೇಲೆ ದುಡ್ ಮಾಡಬಹುದಲ್ಲ' ಎಂದು ದೊಡ್ಡ ಅವಕಾಶ ತಪ್ಪಿ ಹೋಯಿತೇನೋ ಎಂಬಂಥ ದುಃಖದಲ್ಲಿ ಹೇಳಿದ ಅಧಿಕಾರಿ.

'ಅಷ್ಟ್ ಬೇಗ ಪ್ರಾಜೆಕ್ಟ್ ಸ್ಯಾಂಕ್ಷನ್ ಆಗೋದು ಕಷ್ಟ ಬಿಡಿ ಸರ್' ಎಂದ ಮುದ್ದಣ್ಣ.

'ಏನ್ರೀ, ಹಾಗಂತೀರ, ಆ ರಾಜ್ಯದ ಸಿಎಂ ಈಗ ಸೆಂಟ್ರಲ್‌ನಲ್ಲಿ ಪವರ್‌ಫುಲ್. ಬ್ರಿಡ್ಜ್ ಕುಸೀತಾ ಇದ್ದಂಗೆ ಸಾವಿರಾರು ಕೋಟಿ ರೂಪಾಯಿ ಫಂಡ್ ರಿಲೀಸ್ ಆಗಿಬಿಡುತ್ತೆ' ನಗುತ್ತಾ ಭವಿಷ್ಯ ನುಡಿದ ಅಧಿಕಾರಿ.

'ಆದರೂ ನನಗಿನ್ನೂ ಅರ್ಥ ಆಗದಿರೋದು ಏನಂದರೆ, ಹೀಗೆ ದುಬುದುಬು ಅಂತ ಸೇತುವೆ ಬೀಳ್ತಿದ್ರೂ ಈ ಪಾರ್ಟಿಯವರಾಗಲಿ, ಆ ಪಾರ್ಟಿಯವರಾಗಲಿ ಯಾರೂ ಜೋರಾಗಿ ಖಂಡಿಸ್ತಿಲ್ವಲ್ಲ ಯಾಕೆ ಅಂತ' ಎಂದ ಮುದ್ದಣ್ಣ.

'ಆ ಸಿಎಂ ಯಾವ ಟೈಮ್‌ನಲ್ಲಿ ಯಾವ ಅಲಯನ್ಸ್‌ನಲ್ಲಿ ಇರ್ತಾರೋ ಗೊತ್ತಿಲ್ಲ. ಸುಮ್ನೆ ಯಾಕ್ ರಿಸ್ಕ್ ತಗೋಳೋಣ ಅಂತ ಸರ್ವಪಕ್ಷದವರೂ ಸೈಲೆಂಟ್ ಆಗಿದ್ದಾರೆ' ಎಂದು ನಕ್ಕ ವಿಜಿ.

ಸಂಗತ

ವಿದ್ಯಾರ್ಜನೆಯೂ ಸ್ವಕಲಿಕೆಯ ಕ್ಷಾಮವೂ

ಬೋಧಕರು ಮತ್ತು ಪೋಷಕರು ತಮ್ಮ ಸಕ್ರಿಯ ಸಹಭಾಗಿತ್ವದ ಮೂಲಕ ತಮ್ಮ ಮಕ್ಕಳಿಗೆ ಸ್ವಅಧ್ಯಯನಕ್ಕೆ ಉತ್ತೇಜನ ನೀಡಬೇಕಿದೆ

● ಬಿ.ಎಸ್. ಭಗವಾನ್

ಶಿಕ್ಷಣವು ವೈಯಕ್ತಿಕ ಜೀವನದ ಗುಣಮಟ್ಟವನ್ನು ನಿರ್ಧರಿಸುತ್ತದೆ. ಶಿಕ್ಷಣದ ಮೂಲಕ ವ್ಯಕ್ತಿಯು ತಾನೂ ಬೆಳೆದು ಸಮಾಜಕ್ಕೆ, ದೇಶಕ್ಕೆ ಶಕ್ತ್ಯಾನುಸಾರ ಸೇವೆ ಸಲ್ಲಿಸಬಹುದು. ಶಾಲೆಯ ಮುಖ್ಯಸ್ಥರು 'ನಿಮ್ಮ ಮಗ ಓದಿನಲ್ಲಿ ಹಿಂದು' ಎಂದೊಡನೆ ಪೋಷಕರ ಪ್ರತಿಕ್ರಿಯೆ ಏನಿರುತ್ತದೆ?

ಬಹುತೇಕರ ಪ್ರತಿಕ್ರಿಯೆ 'ಟ್ಯೂಷನ್ನಿಗೆ ಸೇರಿಸೋಣ' ಎನ್ನುವುದೇ! ಸಾವಧಾನವಾಗಿ ಓದಿ ಮನನ ಮಾಡಿಕೊಳ್ಳಲು ಹೇಳುತ್ತೇನೆ ಎಂಬ ಮಾತು ಅಪರೂಪ. ಶಿಕ್ಷಣದ ಗುರಿ ಜ್ಞಾನಾರ್ಜನೆ; ಪರೀಕ್ಷೆಯಲ್ಲಿ ತೇರ್ಗಡೆಯಲ್ಲ ಎನ್ನುವ ಮನವರಿಕೆಯನ್ನು ಪೋಷಕರಿಗೇ ಮಾಡಿಕೊಡಬೇಕು. ಯಾವುದೇ ಪರಿಣತಿ ಆಕಸ್ಮಿಕವಾಗಿ ಕೈಗೂಡದು. ಉತ್ಸಾಹ ಮತ್ತು ಶ್ರದ್ಧೆಯಿಂದ ಮಾತ್ರ ಅದನ್ನು ಅರಸಲು ಸಾಧ್ಯ. ಕಲಿಕೆಗೆ ಕುತೂಹಲ ಬೇಕು. ಸ್ವಾಧ್ಯಯನದಿಂದ ಕಲಿತದ್ದು ಗಟ್ಟಿಯಾಗಿರುತ್ತದೆ. ಅದು ಅನುಕೂಲಕರವಾದ ಪ್ರಖರ ಕಲಿಕಾ ವಿಧಾನ. ಮಾತ್ರವಲ್ಲ, ಸಾಂಪ್ರದಾಯಿಕ ತರಗತಿ ಬೋಧನೆಗಿಂತ ಉತ್ತಮ. ಬದುಕನ್ನು ಗಾಢವಾಗಿ ಪ್ರೀತಿಸುವವರು ಹೊಸ ವಿಷಯಗಳನ್ನರಿಯಲು ಆಸಕ್ತರಾಗಿರುತ್ತಾರೆ.

ದಾರ್ಶನಿಕ ಕನ್‌ಫ್ಯೂಷಿಯಸ್ ಹೇಳಿದಂತೆ ನಿಜವಾದ ಜ್ಞಾನವೆಂದರೆ ನಮ್ಮ ಅಜ್ಞಾನದ ಪರಿಚಯ. ಮಾರ್ಕ್ ಟ್ವೈನ್ 'ನಾನು ನನ್ನ ಶಾಲೆಯನ್ನು ನನ್ನ ಶಿಕ್ಷಣಕ್ಕೆ ಅಡ್ಡಿಯಾಗಬಿಡೆನು' ಎನ್ನುತ್ತಿದ್ದರು! ಸ್ವತಃ ಕಲಿಕೆಯು ಯಶಸ್ವಿ ವಿದ್ಯಾರ್ಜನೆಯ ನಿರಾಡಂಬರ ಮಾರ್ಗ. ಅದು ಆತ್ಮವಿಶ್ವಾಸವನ್ನು ಸ್ವಾಭಾವಿಕವಾಗಿ ರೂಢಿಸಿಕೊಳ್ಳುವ ಕ್ರಮ. ಯಾರೇ ವಿದ್ಯಾರ್ಥಿ ಹೋಮ್‌ವರ್ಕ್ ತಂತಾನೇ ಪೂರೈಸಿದರೆ, ಅದು ತರುವ ಹೆಮ್ಮೆ ಮತ್ತು ತೃಪ್ತಿ ಅಷ್ಟಿಷ್ಟಲ್ಲ. ಸ್ವಾಧ್ಯಯನದ ವಿಶೇಷವೆಂದರೆ ವಿದ್ಯಾರ್ಥಿ ಮತ್ತು ಗುರು ಒಬ್ಬರೇ ಆಗಿರುವುದು. ವಿದ್ಯಾರ್ಥಿಗಳು ಸ್ವಯಂ ಅಧ್ಯಯನಕ್ಕೆ ಮುಂದಾದರೆ ಪೋಷಕರಿಗೆ ದೊಡ್ಡ ಮೊತ್ತದ ಆರ್ಥಿಕ ಹೊರೆ ತಪ್ಪೀತು. ಸ್ವ ಅಧ್ಯಯನದಿಂದ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣದ ಗುರಿಯನ್ನು ತಾವೇ ನಿಯಂತ್ರಿಸುವ ಅವಕಾಶ ಸಿಗುತ್ತದೆ. ಅವರ ಗುರಿ ಅವರದೇ ಕೈಯಲ್ಲಿರುತ್ತದೆ.

ಮಾಮೂಲಿಯ ಕಲಿಕೆಗಿಂತಲೂ ಸ್ವ ಕಲಿಕೆ ಹೆಚ್ಚು ಸಂತೋಷದಾಯಕ. ಮೇಲಾಗಿ ಅದು ಬದುಕಿನ ಪರ್ಯಂತ ವ್ಯಾಸಂಗದ ಹವ್ಯಾಸವನ್ನು ಕಟ್ಟಿಕೊಡುತ್ತದೆ. ಅದು ನಮಗೆ ನಾವೇ ವಿಧಿಸಿಕೊಳ್ಳುವ ಹೋಮ್‌ವರ್ಕ್. ಅದು ಹೊರೆಯಲ್ಲ, ಸಾಹಸ. ಹೀಗಿರುವಾಗ, ಮಕ್ಕಳನ್ನು ಗ್ರಹಿಕೆಗೆ ಸಿಗದ ಬಾಯಿಪಾಠದಿಂದ ಮುಕ್ತಗೊಳಿಸಿ ಗ್ರಹಿಕೆಯ ಪಾಠದತ್ತ ಒಯ್ಯಬೇಕು. ಅವರಾಗಿಯೇ ಅಧ್ಯಾಯಗಳನ್ನು ಅರ್ಥೈಸಿಕೊಳ್ಳುವಂತೆ ಪ್ರೇರೇಪಿಸುವುದು ಹೆಚ್ಚು ಪರಿಣಾಮಕಾರಿ. ವಿಪರ್ಯಾಸವೆಂದರೆ ಮಕ್ಕಳು ನಿಭಾಯಿಸಬಹುದಾದ ಕಾರ್ಯಗಳಿಗೂ ಹಿರಿಯರು ಕೈಜೋಡಿಸಿರುತ್ತಾರೆ! ಸ್ವನಿರ್ದೇಶಿತ ಅಧ್ಯಯನದಿಂದ ನಕಲು, ಪ್ರಶ್ನೆಪತ್ರಿಕೆಗಳ ಸೋರಿಕೆ, ಪ್ರಶ್ನೆಗಳ ಬೇಟೆ, ಬೇನಾಮಿ ಪರೀಕ್ಷಾರ್ಥಿಯಂತಹ ಪರೀಕ್ಷಾ ಅಕ್ರಮಗಳೂ ಕ್ಷೀಣಿಸುತ್ತವೆ.

ವಿದ್ಯಾರ್ಥಿಗಳಲ್ಲಿ ಸ್ವಾಧ್ಯಯನ ಕ್ಷಾಮ ನೀಗಿದರೆ ಇಡೀ ಶಿಕ್ಷಣ ವ್ಯವಸ್ಥೆ ಗಮನಾರ್ಹವಾಗಿ ಸುಧಾರಿಸುವುದು. 'ಸ್ವಾಧ್ಯಾಯ ಪ್ರವಚನಾಭ್ಯಂ ನ ಪ್ರಮದಿತವ್ಯಂ' - ಇದು ತೈತ್ತಿರೀಯ ಉಪನಿಷತ್ತಿನ ನುಡಿ.

ಸ್ವಾವಲಂಬಿಯಾಗಿ ತನ್ನ ಓದಿನ ಹೊಣೆಯನ್ನು ತಾನೇ ಹೊತ್ತಾಗ ಒಂದು ಅಧ್ಯಾಯದ ಸೀಮೆ ಮೀರಿ ಗ್ರಹಿಕೆ, ಚಿಂತನೆಗಳಿಗೆ ಹೆಚ್ಚು ಅವಕಾಶಗಳು ಒದಗುತ್ತವೆ. ಜೊತೆಗೆ ಆತ್ಮಾನಂದ ಮತ್ತು ಕಲಿಕಾ ಅನುಭವವೂ ದಕ್ಕುತ್ತದೆ. ಇಂದು ಎಲ್ಲೆಲ್ಲೂ ಮಾಹಿತಿಗಳ ಕಾರಂಜಿ ಕಾಣಿಸುತ್ತದೆ. ಬೇಕಾದ್ದು ಪರಾಮರ್ಶನ ಗ್ರಂಥಗಳ ಜೊತೆಗೆ ಅಂತರ್ಜಾಲ ಸಂಪರ್ಕಿತ ಕಂಪ್ಯೂಟರ್ ಹಾಗೂ ವಿಶ್ವಾಸಾರ್ಹ ವೆಬ್‌ಸೈಟ್‌ಗಳ ವಿವರ. ತರಗತಿಯ



ಅಭ್ಯಾಸಕ್ಕೆ ಪೂರಕವಾಗಿ ಸ್ವಾಧ್ಯಯನವೂ ಒಂದು ಮಹತ್ತರ ಹೆಜ್ಜೆ.

ಬೋಧಕರು ಮತ್ತು ಪೋಷಕರು ತಮ್ಮ ಸಕ್ರಿಯ ಸಹಭಾಗಿತ್ವದ ಮೂಲಕ ತಮ್ಮ ಮಕ್ಕಳಿಗೆ ಸ್ವಾಧ್ಯಯನಕ್ಕೆ ಉತ್ತೇಜನ ನೀಡಬೇಕಿದೆ. ಸಮಯವನ್ನು ಕಿಂಚಿತ್ತೂ ಪೋಲು ಮಾಡದೆ ಸ್ವಾಧ್ಯಯನದಲ್ಲಿ ತೊಡಗುವುದು ಮುಖ್ಯ. ವಿಳಂಬ ಪ್ರವೃತ್ತಿಯು ಸಮಯದ ಚೋರನಂತೆ ಕೆಲಸ ಮಾಡುತ್ತದೆ. ನಾವು ನಿತ್ಯ ಜೀವನದಲ್ಲಿ ಎಷ್ಟೊಂದು ಕಾರ್ಯಗಳನ್ನು ನಾವೇ ತೀರ್ಮಾನಿಸಿಕೊಳ್ಳುತ್ತೇವೆ... ಚಪಾತಿಗೆ ಹಿಟ್ಟು ಲಟ್ಟಿಸುವುದು, ಹರಿದ ಬಟ್ಟೆಗೆ ಹೊಲಿಗೆ ಹಾಕುವುದು, ಅಡುಗೆ ಮಾಡುವುದು, ಉಪ್ಪಿನಕಾಯಿ ತಯಾರಿಸುವುದು... ಒಂದೇ, ಎರಡೇ?

ಒಮ್ಮೆಗೇ ಯಾವ ಕೌಶಲವೂ ಕರಗತವಾಗದು. ಕೌಶಲಗಳೆಲ್ಲವೂ ನಿರಂತರ ಪ್ರಯತ್ನಕ್ಕೆ ಮಾತ್ರ ಒಲಿಯುತ್ತವೆ. ತಾನಾಯಿತು, ತರಗತಿಯಾಯಿತು ಎಂದು ಸಾಧಕರು ತಮ್ಮ ಇತಿಮಿತಿಗಳಲ್ಲಿ ಬಂದಿಗಳಾಗಿದ್ದಿದ್ದರೆ ಮಹಾನ್ ಆವಿಷ್ಕಾರಗಳು ಸಾಧ್ಯವಾಗುತ್ತಿದ್ದವೇ? ದ್ರವಕ್ಕೆ ಮೇಲ್ಮುಖ ಒತ್ತಡವಿದೆ ಎಂಬ ಶೋಧಕ್ಕೆ ಆರ್ಕಿಮಿಡೀಸ್‌ಗೆ ಸ್ಫೂರ್ತಿ ಆಗಿದ್ದು ನೀರಿನ ತೊಟ್ಟಿ. ಕಿಂಚಿತ್ತಾದರೂ ಸ್ವಗ್ರಹಿಕೆ ಇರದೆ ಯಾವುದೇ ಪ್ರಯೋಗಾಲಯ ಅಥವಾ ಪುಸ್ತಕ ಭಂಡಾರವು ಕಲಿಸುವ ಕೆಲಸ ಮಾಡುವುದಿಲ್ಲ. ಪರೀಕ್ಷೆಯ ಫಲಿತಾಂಶ ಹೊರಬಿದ್ದಾಗ ನಪಾಸಾದವರನ್ನು ಉದ್ದೇಶಿಸಿ ಅವರು ಓದಲಿಲ್ಲ ಎನ್ನುವುದು ಸಾಮಾನ್ಯ. ಆದರೆ, ಹಾಗೆನ್ನುವುದಕ್ಕಿಂತಲೂ ಅವರು ಸ್ವಂತವಾಗಿ ಓದಿಕೊಳ್ಳಲಿಲ್ಲ ಎನ್ನುವುದು ಹೆಚ್ಚು ಸಮಂಜಸ. 'ಟ್ಯೂಷನ್'ಗೆ ಸಾಲುಗಟ್ಟುವ ಬದಲು ಗ್ರಂಥಾಲಯಗಳಲ್ಲಿ ವಿದ್ಯಾರ್ಥಿಗಳು ಜಮಾಯಿಸುವುದು ಮಾದರಿಯಲ್ಲವೇ?

ವಾಚಕರ ವಾಣಿ

ಜಾತಿ ನೆಲಗಟ್ಟಿನಲ್ಲಿ ನೋಡುವುದು ತಪ್ಪು

ಕಿರಣ್ ಎಂ. ಗಾಜನೂರು ಬರೆದ 'ಪಟೇಲ್, ಖರ್ಗೆ ದಾಖಲಿಸಿದ ಪ್ರತಿರೋಧ' ಎಂಬ ಲೇಖನದಲ್ಲಿ (ಪ್ರ.ವಾ., ಜುಲೈ 5) ಆಹಾರದ ವಿಷಯದಲ್ಲಿಯೂ ಶುದ್ಧ ಮತ್ತು ಅಶುದ್ಧ ಎನ್ನುವ ಜಾತಿ ಪರಿಭಾಷೆಗಳು ಅತ್ಯಂತ ಸಹಜವಾಗಿ ಬಳಕೆಯಾಗುತ್ತವೆ ಎಂದು ಬರೆಯಲಾಗಿದೆ. ಸಸ್ಯಾಹಾರಿ ಹೋಟೆಲ್‌ಗಳಲ್ಲಿ 'ಶುದ್ಧ ಸಸ್ಯಾಹಾರಿ' ಎಂಬ ಒಕ್ಕಣೆಯನ್ನು ಸೇರಿಸಲಾಗಿದೆ ಎಂದು ಲೇಖಕರು ಅಭಿಪ್ರಾಯ ದಾಖಲಿಸಿದ್ದಾರೆ.

ಮಾಂಸಾಹಾರಿ ಹೋಟೆಲ್‌ನವರು 'ಶುದ್ಧ ಮಾಂಸಾಹಾರಿ' ಹೋಟೆಲ್ ಎಂದು ಫಲಕ ಹಾಕಬೇಕಾಗಿಲ್ಲ. ಏಕೆಂದರೆ ಅಲ್ಲಿ ಸಸ್ಯಾಹಾರವೂ ದೊರೆಯುತ್ತದೆ. ಹೀಗಾಗಿ 'ಶುದ್ಧ ಸಸ್ಯಾಹಾರಿ' ಎಂದು ಹೋಟೆಲ್‌ಗಳಲ್ಲಿ ಫಲಕ ಹಾಕಿದರೆ ಮಾಂಸಾಹಾರಿಗಳು ಬೇಸರಪಡುವ ಅಗತ್ಯವಿಲ್ಲ. ಆಹಾರ ಪದ್ಧತಿಯಲ್ಲೂ ಜಾತಿವಾದ ಮತ್ತು ಶ್ರೇಷ್ಠ–ಕನಿಷ್ಠ ವಾಸನೆಯನ್ನು ಹಿಡಿದು, ಅದಕ್ಕೆ ಎಲ್ಲೆಲ್ಲಿಂದಲೋ ಸಾಕ್ಷ್ಯ ತರುವುದು ವಿಷಾದಕರ. ಆಹಾರ ಪದ್ಧತಿ ಮತ್ತು ಜಾತಿಯ ವಿಂಗಡಣೆಯ ಕಾಲ ಮುಗಿದುಹೋಗಿದೆ.

ರಾಜ್ಯಸಭೆಯ ಸಭಾಪತಿಯವರು ಜೈರಾಮ್ ರಮೇಶ್ ಅವರನ್ನು ಹೊಗಳಿದ್ದನ್ನು ಜಾತಿಯ ನೆಲಗಟ್ಟಿನಲ್ಲಿ ನೋಡುವುದೇ ಸರಿಯಲ್ಲ ಅನಿಸುತ್ತದೆ. ನೀರಸವಾದ ಚರ್ಚೆಗಳ ನಡುವೆ ಈ ರೀತಿಯ ಹಾಸ್ಯ ಚಟಾಕಿ ಹಾರಿಸುವುದು ಸಂಸತ್ತಿನಲ್ಲಿ ಹಿಂದಿನಿಂದಲೂ ನಡೆದುಬಂದಿದೆ. ಖರ್ಗೆಯವರ ವಿಚಾರದಲ್ಲಿ ದೇಶದ ಸ್ವಸ್ಥ ಮನಸ್ಸುಗಳಿಗೆ ಯಾವುದೇ ಆಕ್ಷೇಪ ಇರಲಾರದು. ಚರ್ಚೆಯ ಸಂದರ್ಭಗಳಲ್ಲಿ ಖರ್ಗೆಯವರು ಮಾತನಾಡುವ ಮುನ್ನವೇ ರಮೇಶ್ ಅವರು ಮಾತಿಗೆ ತೊಡಗುವುದರಿಂದ ಸಭಾಪತಿಯವರು ಸಹಜವಾಗಿ ವಿರೋಧ ಪಕ್ಷದ ನಾಯಕ ಸ್ಥಾನದ ಹೆಗ್ಗಳಿಕೆಯನ್ನು ರಮೇಶ್ ಅವರಿಗೆ ಪರೋಕ್ಷವಾಗಿ ತಿಳಿಸಲು ಹೇಳಿರಬಹುದಾದ ಮಾತುಗಳಲ್ಲೂ ಜಾತಿಯ ತಾರತಮ್ಯವನ್ನು ಗುರುತಿಸಲು ಮುಂದಾಗುವುದನ್ನು ಏನೆಂದು ಅರ್ಥೈಸುವುದು?

ಮೋದೂರು ಮಹೇಶಾರಾಧ್ಯ, ಹುಣಸೂರು

ಬಿಜೆಪಿ ಸೋತಿರುವಲ್ಲಿ ಬಡವರ ಅಭಿವೃದ್ಧಿಯಾಗಲಿ!

ಪೇಜಾವರ ಮಠಾಧೀಶ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರು ಅಯೋಧ್ಯೆಯನ್ನು ಒಳಗೊಂಡಿರುವ ಫೈಜಾಬಾದ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸೋತಿರುವುದು ಹಿಂದೂಗಳ ಧಾರ್ಮಿಕ ನಂಬಿಕೆಯ ಸೋಲಲ್ಲ; ಬಡವರು ಆಮಿಷಗಳಿಗೆ ಒಳಗಾಗಿ ಬಿಜೆಪಿ ವಿರುದ್ಧ ಮತ ಹಾಕಿದ್ದರಿಂದ ಸೋಲಾಗಿದೆ ಎಂದು ಹೇಳಿದ್ದಾರೆ.

ಸ್ವಾಮೀಜಿಯವರು ಬಿಜೆಪಿಯ ವಕ್ತಾರರಾಗಿ ಮಾತಾಡಿದ್ದಾರೋ ಅಥವಾ ಕ್ಷೇತ್ರದ ಬಡವರನ್ನು ಬಡತನ ರೇಖೆಗಿಂತ ಮೇಲೆ ತರುವಂತೆ ಸರ್ಕಾರಕ್ಕೆ ಹಿತವಚನ ನೀಡಿದ್ದಾರೋ ಗೊತ್ತಿಲ್ಲ. ಅವರ ಹೇಳಿಕೆ ಪ್ರಕಾರ, ಬಿಜೆಪಿ ಅಭ್ಯರ್ಥಿಗಳು ಎಲ್ಲೆಲ್ಲಿ ಗೆದ್ದಿದ್ದಾರೋ ಅಲ್ಲೆಲ್ಲ ಬಡತನ ಕಡಿಮೆ ಇದೆ, ಸೋತಿರುವ ಕಡೆ ಬಡಜನ ಅಧಿಕ ಸಂಖ್ಯೆಯಲ್ಲಿ ಇದ್ದಾರೆ ಎಂದಾಯಿತು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಿಜೆಪಿ ಸೋತಿರುವ ಕ್ಷೇತ್ರಗಳಲ್ಲಿ ಬಡತನ ನಿರ್ಮೂಲನೆಗೆ ಕ್ರಮ ಕೈಗೊಂಡಲ್ಲಿ ಕಡು ಬಡವರ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ!

ಶಾಂತಕುಮಾರ್, ಸರ್ಜಾಪುರ

ಉದ್ದೇಶಪೂರ್ವಕ ಮೌನವೇ?

ದೇಶದ ಪ್ರಮುಖ ದೂರಸಂಪರ್ಕ ಕಂಪನಿಗಳು ಶುಲ್ಕ ಹೆಚ್ಚಿಸಿ ಗ್ರಾಹಕರ ಮೇಲೆ ಬಲವಾದ ಪ್ರಹಾರ ನಡೆಸಿವೆ. ಮನೆಯಲ್ಲಿ ನಾಲ್ಕೈದು ಮೊಬೈಲುಗಳಿರುವ ಈ ಕಾಲಘಟ್ಟದಲ್ಲಿ ಮಧ್ಯಮ, ಕೆಳಮಧ್ಯಮ ಹಾಗೂ ಬಡ ಕುಟುಂಬಗಳಿಗೆ ಇದು ತೀವ್ರ ಹೊರೆ. ಆದರೆ ಈ ಬಗ್ಗೆ ಜನಪ್ರತಿನಿಧಿಗಳಾಗಲಿ, ಜನಸಾಮಾನ್ಯರಾಗಲಿ ಯಾವುದೇ ಪ್ರತಿಭಟನೆಗೆ ಮುಂದಾಗದಿರುವುದು ಆಶ್ಚರ್ಯಕರ. ಸರ್ಕಾರಿ ಸ್ವಾಮ್ಯದ ವಿದ್ಯುತ್ ವಿತರಣಾ ಕಂಪನಿಗಳು ಅಥವಾ ಕೆಎಸ್‌ಆರ್‌ಟಿಸಿ ದರ ಏರಿಸಿದಾಗ ತೀವ್ರವಾಗಿ ಪ್ರತಿಭಟಿಸುವ ಹಾಗೂ ಪ್ರತಿಕ್ರಿಯಿಸುವ ವಿರೋಧ ಪಕ್ಷಗಳು ಈ ವಿಷಯದಲ್ಲಿ ಪ್ರತಿಕ್ರಿಯೆ ತೋರಿಸದೇ ಇರುವುದು ಉದ್ದೇಶಪೂರ್ವಕವೋ ಅಥವಾ ಸಂವೇದನಾಶೀಲತೆಯ ಕೊರತೆಯೋ?

ಶಿವರಾಜು ಎ.ಆರ್., ಜೆಟ್ಟಿ ಅಗ್ರಹಾರ, ಕೊರಟಗೆರೆ

ಮುತ್ತು, ರತ್ನಗಳಿಂದ ಕಂಗೊಳಿಸಿದ ಮರೀನ್ ಡ್ರೈವ್

ಮಹಾರಾಣಿಯ ಕೊರಳ ಹಾರದಂತಿರುವ ಮುಂಬೈನ ಮರೀನ್ ಡ್ರೈವ್ ಪ್ರದೇಶವು ಗುರುವಾರ ಸಂಜೆ ನಿಜವಾದ ಮುತ್ತುರತ್ನಗಳಿಂದ ಕಂಗೊಳಿಸಿತ್ತು! 'ಅಭಿಮಾನದ ಮಹಾಸಾಗರ' ವರದಿಯ ಜೊತೆಗಿನ ಚಿತ್ರ ಆ ರೀತಿಯಲ್ಲಿ ಇತ್ತು! (ಪ್ರ.ವಾ., ಜುಲೈ 5).

ಟಿ-20 ವಿಶ್ವಕಪ್ ಮುಡಿಗೇರಿಸಿಕೊಂಡ ನಮ್ಮ ಟೀಮ್ ಇಂಡಿಯಾದ ಮುತ್ತು ರತ್ನಗಳು ಹದಿನೈದು ಸಾವಿರ ಮೈಲುಗಳ ಪ್ರಯಾಣದ ನಂತರವೂ ಮಳೆಯನ್ನೂ ಲೆಕ್ಕಿಸದೆ, ಅಭಿಮಾನಿಗಳ ಪ್ರೀತಿ ಗೌರವದ ಮಹಾಸಾಗರದಲ್ಲಿ ಮಿಂದೆದ್ದ ದೃಶ್ಯಾವಳಿಗಳು ಮನಸೂರೆಗೊಳ್ಳುವಂತಿದ್ದವು. ಪಕ್ಕದಲ್ಲಿದ್ದ ಸಮುದ್ರವನ್ನೇ ಮೀರಿಸುವಂತಿತ್ತು ಜನಸಾಗರ.

ನಿಖಿತಾ ಜಿ, ಹೊಸನಗರ

ಉಪಯೋಗಕ್ಕಿಂತ ದುರುಪಯೋಗವೇ ಹೆಚ್ಚು

'ಲೋಕಸಭಾ ಅಧಿವೇಶನ: ಸದನದಲ್ಲಿ ಕಾಣಿಸಿದ್ದು ಅಪನಂಬಿಕೆ, ವೈಷಮ್ಯ' ಎಂಬ ಸಂಪಾದಕೀಯವು (ಪ್ರ.ವಾ., ಜುಲೈ 5) ವಾಸ್ತವಕ್ಕೆ ಹತ್ತಿರವಾಗಿದೆ. ಪ್ರತಿಪಕ್ಷಗಳ ಮೈತ್ರಿಕೂಟದ ಆತ್ಮವಿಶ್ವಾಸ ಮತ್ತು ಪ್ರಬುದ್ಧತೆಯ ಕೊರತೆಯೂ ಸದನದಲ್ಲಿ ಎದ್ದು ಕಂಡಿತು. ಸಂಸದೀಯ ಅಧಿಕಾರವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕಿಂತಲೂ ದುರುಪಯೋಗ ಮಾಡಿಕೊಳ್ಳುವುದನ್ನು ನೋಡುವುದೇ ನಮಗೆ ಅಭ್ಯಾಸವಾಗಿರುವಂತೆ ಕಾಣುತ್ತಿದೆ!

ಆಳುವುದೆಂದರೆ ದಬ್ಬಾಳಿಕೆಯೆಂದೇ ಆಳುವ ಪಕ್ಷ ಅರ್ಥೈಸಿಕೊಂಡಂತಿದೆ. ಪ್ರತಿ ಮಾತಿಗೂ ಅಪಾರ್ಥ ಕಲ್ಪಿಸಿ ಅಬ್ಬರದ ಅಪಪ್ರಚಾರ ನಡೆಸುವ ಅದರ ಗತ್ತು ಹಿಂದಿನಂತೆಯೇ ಇದೆ. ಈಗ ಸಂಖ್ಯಾಬಲ ವರ್ಧಿಸಿದ್ದರೂ ಪ್ರತಿಪಕ್ಷವು ಸಂಸದೀಯ ಚೌಕಟ್ಟಿನ ಪರಿಮಿತಿಯಲ್ಲೇ ಆಡಳಿತ ಪಕ್ಷವನ್ನು ಹಣಿಯುವ ಚಾಕಚಕ್ಯತೆಯನ್ನು ಬೆಳೆಸಿಕೊಂಡಿಲ್ಲ. ಆಳುವ ಪಕ್ಷದ ಬಲವನ್ನು ಅದು ನೈತಿಕ ಶಕ್ತಿಯಿಂದ ಮಾತ್ರವೇ ಎದುರಿಸಬೇಕು. ನಿರೀಕ್ಷೆಯಂತೆ ವಂದನಾ ನಿರ್ಣಯ ಪಾಸಾಯಿತು. ಇನ್ನೆಲ್ಲ ನಿರ್ಣಯಗಳೂ ಹೀಗೇ ಆಗುತ್ತವೆ ಎನ್ನುವುದಕ್ಕೆ ಈ ಅಧಿವೇಶನ ಮುನ್ನುಡಿ ಬರೆಯಿತು!

ಆರ್.ಕೆ. ದಿವಾಕರ, ಎಳೇನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ದರ್ಶನ್ ಜೈಲಿನಲ್ಲಿರುವ ಈ ಹೊತ್ತಿನಲ್ಲಿಯೂ ಸಾಮಾಜಿಕ ಮಾಧ್ಯಮದಲ್ಲಿ ಹುಚ್ಚು ಅಭಿಮಾನದ ಹೊಳೆ ಹರಿಸುವವರನ್ನು ಕಾಣುತ್ತಿದ್ದೇವೆ. ಪುನೀತ್ ರಾಜಕುಮಾರ್, ಯಶ್, ದರ್ಶನ್, ಸುದೀಪ್ ಈ ನಟರು ಹೊಂದಿರುವ ದೊಡ್ಡ ಅಭಿಮಾನಿಗಳ ಬಳಗದ ಚಟುವಟಿಕೆ ಡಿಜಿಟಲ್ ಲೋಕದಲ್ಲಿ ವ್ಯಾಪಕವಾಗಿದೆ. ಆದರೆ, ಕನ್ನಡದ ನಟರಿಗೆ ಅಭಿಮಾನಿಗಳ ಸಂಘ ಹುಟ್ಟಿದ ಸಂದರ್ಭ ಬೇರೆಯದೇ ಆಗಿತ್ತು. ರಾಜಕುಮಾರ್ ನೂರನೇ ಚಿತ್ರದ ಕಾಲಘಟ್ಟದಲ್ಲಿ ಸದುದ್ದೇಶದಿಂದ ಕಟ್ಟಲಾದ ಅಭಿಮಾನಿಗಳ ಸಂಘ, ಕಾಲಾಂತರದಲ್ಲಿ ಬದಲಾಗುತ್ತಾ ಬಂತು. ಅವುಗಳ ಜಾಯಮಾನದ ಚಿತ್ರಣ ಕಟ್ಟಿಕೊಡುವ ಪ್ರಯತ್ನವಿದು...


ಅಭಿಮಾನಿಗಳ ಬೇರು–ಬಿಳಲು



ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ 1987ರ ಅ. 12ರಂದು ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ನಟರಾದ ರಾಜಕುಮಾರ್ ಮತ್ತು ವಿಷ್ಣುವರ್ಧನ್ ಭಾಗವಹಿಸಿದ್ದರು. ಸಾವಿರಾರು ಸಂಖ್ಯೆಯಲ್ಲಿ ಅಭಿಮಾನಿಗಳು ಇದ್ದರು. ಪ್ರಜಾವಾಣಿ ಸಂಗ್ರಹ ಚಿತ್ರ

ದ್ವೇಷವಾಗದಿರಲಿ ಅಭಿಮಾನ

ಹಾಲಿವುಡ್ ನಟ ಸ್ಕಾಟ್ ವ್ಯಾಲಂಟೈನ್‌ಗೆ ಮೇಕಪ್ ಕೋಣೆಯಿಂದ ಹೊರಗೆ ನಡೆದು ಸಾಗಲೆಂದೇ ಒಂದು ಸುರಂಗ ನಿರ್ಮಿಸಿದ್ದರು. ಅಭಿಮಾನಿಗಳು ಆತನನ್ನು ಮುತ್ತಿಕೊಳ್ಳದಿರಲಿ ಎಂಬ ಕಾರಣಕ್ಕೆ ಆಗಿದ್ದ ವ್ಯವಸ್ಥೆ ಅದು. ಕಿಂಗ್ ಕಾಂಗ್–ದಾರಾಸಿಂಗ್ ನಡುವೆ ಬಾಕ್ಸಿಂಗ್ ನಡೆದರೆ, ಅವರ ಅಭಿಮಾನಿಗಳೂ ಹೊಡೆದಾಡಿಕೊಳ್ಳುವಷ್ಟು ಭಾವುಕತೆಯಿಂದ ಪ್ರತಿಕ್ರಿಯೆ ನೀಡುತ್ತಿದ್ದರು.



ಅಭಿಮಾನ ಇರುವುದೇ ಹಾಗೆ. ರಾಜಕುಮಾರ್ ಅವರೇ ಒಂದೊಮ್ಮೆ ಅಭಿಮಾನಿಗಳ ಅತಿರೇಕ ತಾಳಲಾರದೆ ತಮಗೆ ಯಾವ ಸಂಘವೂ ಇಲ್ಲ ಎಂದು ಘೋಷಿಸಿಬಿಟ್ಟಿದ್ದರು. ಕೆಲವರು ನಟರ ಹೆಸರಿನಲ್ಲಿ ಸುಲಿಗೆ ಮಾಡುತ್ತಿದ್ದರು.

ವಿಷ್ಣು ಅಭಿಮಾನಿಗಳನ್ನು ಕಂಡರೆ ರಾಜಕುಮಾರ್ ಅಭಿಮಾನಿಗಳಲ್ಲಿ ಅನೇಕರು ದಾಳಿ ಇಡುತ್ತಿದ್ದರು. ‘ಬಂಧನ’ ಸಿನಿಮಾ ತೆರೆಕಂಡಾಗ ಚಿತ್ರಮಂದಿರಗಳಲ್ಲಿ ಹೆಣ್ಣುಮಕ್ಕಳಿಗೆ ಬ್ಲೇಡ್‌ನಿಂದ ಕುಯ್ಯುವುದು, ಫ್ಯಾನ್‌ಗೆ ಖಾರದ ಪುಡಿ ಎರಚಿ ಎಲ್ಲೆಡೆ ಚಿಮ್ಮುವಂತೆ ಮಾಡಿ, ಕಣ್ಣುಗಳು ಉರಿಯುವಂತೆ ಮಾಡುವ ಕೃತ್ಯಗಳನ್ನು ಎಸಗಿದ್ದರು. ‘ಮುತ್ತಿನಹಾರ’ ಚಿತ್ರ ತೆರೆಕಂಡಾಗ, ತಲೆಬೋಳಿಸಿಕೊಂಡಿದ್ದ ವಿಷ್ಣು ಅಭಿಮಾನಿಯೊಬ್ಬನ ನೆತ್ತಿಗೆ ಹೊಲಿಗೆ ಹಾಕಿಸುವಂತೆ ಹಲ್ಲೆ ನಡೆಸಿದ್ದರು.

ರಾಜಕುಮಾರ್, ವಿಷ್ಣು ಇಬ್ಬರೂ ಚೆನ್ನಾಗಿಯೇ ಇದ್ದರು. ಅಂಬರೀಶ್ ಕೂಡ ಹಿಂಸೆಯನ್ನು ಒಪ್ಪುತ್ತಿರಲಿಲ್ಲ. ಅಭಿಮಾನಿಗಳಲ್ಲಿ ಕೆಲವರು ತಮ್ಮ ಗುಪ್ತ ಕಾರ್ಯಸೂಚಿಯಿಂದ ದುಷ್ಕೃತ್ಯ ಮಾಡುತ್ತಿದ್ದರು. ಆದರೆ, ಕನ್ನಡ ಸಿನಿಮಾಗಳು ಮೆಜೆಸ್ಟಿಕ್‌ನಲ್ಲಿ ತೆರೆಕಾಣುವಲ್ಲಿ ವಾಟಾಳ್ ನಾಗರಾಜ್ ಅವರಂತಹವರ ಪಾತ್ರ ಮುಖ್ಯವಾಗಿದೆ. ಅಭಿಮಾನವು ದ್ವೇಷ ಆಗದಿದ್ದರೆ ಅನಾಹುತವಾಗುವುದಿಲ್ಲ. ಶಿವರಾಜಕುಮಾರ್, ಸುದೀಪ್, ಯಶ್, ದರ್ಶನ್ ಅಭಿಮಾನಿಗಳು ಹಿಂಸಾತ್ಮಕವಾಗಿಯೇನೂ ಇರಲಿಲ್ಲ.

ಕಮಲ ಹಾಸನ್ ಅಭಿಮಾನಿಗಳು ಸಿನಿಮಾ ಗೆಲ್ಲಿಸಲೆಂದೇ ₹25 ಲಕ್ಷ ರೂಪಾಯಿ ಚೀಟಿ ಹಾಕಿದ್ದರು. ತೆಲುಗಿನ ನಾಗಾರ್ಜುನ ಅಭಿಮಾನಿಗಳು ಸಿನಿಮಾ ಬಿಡುಗಡೆಯಾದ ದಿನ ಟಿಕೆಟ್ ಕೊಂಡು ಮಾರಲು ದುಡ್ಡು ಹಿಡಿದುಕೊಂಡು ನಿಲ್ಲುತ್ತಿದ್ದರು. ಇದು ನಿಜದ ಅಭಿಮಾನ.

ರಾಜೇಂದ್ರ ಸಿಂಗ್ ಬಾಬು, ಚಿತ್ರ ನಿರ್ದೇಶಕ

● ವಿಶಾಖ ಎನ್.


ಗೋಕಾಕ್ ಚಳವಳಿ ನಡೆದ ಸಂದರ್ಭ. ಬೆಂಗಳೂರಿನಲ್ಲಿ ವಿಜಯೋತ್ಸವ ಹಮ್ಮಿಕೊಳ್ಳಲಾಗಿತ್ತು. ಸಂಶೋಧಕರೂ ಆಗಿದ್ದ ಹೋರಾಟಗಾರ ಎಂ.ಚಿದಾನಂದಮೂರ್ತಿ ಆ ದಿನ ನಡುಗುತ್ತಿದ್ದರು. ಅಂದಿನ ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ಪೊಲೀಸರಿಗೆ ಮೊದಲೇ ದೂರು ಕೊಟ್ಟಿದ್ದರು. ಆ ದಿನ ಗಲಾಟೆಗಳಾಗುವ ಸಂಭವ ಇದೆ ಎನ್ನುವ ಮಾಹಿತಿ ಪೊಲೀಸರಿಗೂ ಸಿಕ್ಕಿತ್ತು. ಆಗಿನ ಪೊಲೀಸ್ ಕಮಿಷನರ್ ಆಗಿದ್ದ ನಿಜಾಮುದ್ದೀನ್ ಅವರು, ನಟ ರಾಜಕುಮಾರ್ ವಿಜಯೋತ್ಸವಕ್ಕೆ ಬರಕೂಡದು ಎಂದೇ ಕಡ್ಡಿ ತುಂಡುಮಾಡಿದಂತೆ ಹೇಳಿದ್ದರು. ಆದರೆ, ಅಭಿಮಾನಿಗಳ ಆಗ್ರಹಕ್ಕೆ ರಾಜಕುಮಾರ್ ತಲೆಬಾಗಿದ್ದರು. ವಿಜಯೋತ್ಸವಕ್ಕೆ ಬಂದರು. ಅಭಿಮಾನಿಗಳಿಂದ ಸಮಾರಂಭದಲ್ಲಿ ಅಲ್ಲೋಲಕಲ್ಲೋಲ ಆಯಿತು. ಚಿದಾನಂದಮೂರ್ತಿ (ಚಿ.ಮೂ.) ಅವರಿಗೆ ಪೊಲೀಸರ ಲಾಠಿ ಏಟು ಬಿತ್ತು. ಅರಸಪ್ಪ ಎಂಬ ಹೋರಾಟಗಾರರು ಮೃತಪಟ್ಟರು. ‘ವಿಜಯೋತ್ಸವವಲ್ಲ; ಸಂತಾಪ ಸಭೆ’ ಎಂದೇ ಆಗ ಹೋರಾಟಗಾರ ಜಿ.ಕೆ.ಸತ್ಯ ಅದನ್ನು ಬಣ್ಣಿಸಿದ್ದರು.

ಚಲನಚಿತ್ರ ನಟರ ಅಭಿಮಾನಿಗಳೆಂದರೆ, ದಾಂದಲೆ ಮಾಡುವವರು ಎಂಬ ಅಭಿಪ್ರಾಯಕ್ಕೆ ಪುಷ್ಟಿ ಕೊಡುವ ಪ್ರಸಂಗಗಳು ಆ ದಿನ ನಡೆದಿದ್ದವು.

ಕನ್ನಡ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ಹಾಗೂ ಚಿ.ಮೂ. ಅವರ ಶಿಷ್ಯ ಆಗಿದ್ದ ರಾ.ನಂ. ಚಂದ್ರಶೇಖರ ಅವರು ಈ ಪ್ರಸಂಗವನ್ನು ಮೆಲುಕು ಹಾಕಿದರು.

ಈಗ ನಟ ದರ್ಶನ್ ಜೈಲಿನಲ್ಲಿದ್ದಾರೆ. ಹೊರಗಿರುವ ಅವರ ಅಭಿಮಾನಿಗಳಲ್ಲಿ ಕೆಲವರು ಈಗಲೂ ಆ ನಟ ಏನೂ ತಪ್ಪು ಮಾಡಿಲ್ಲ ಎಂಬ ನಂಬಿಕೆಗೆ ಜೋತುಬಿದ್ದಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಅವರ ಪರವಾಗಿ ಹಾಗೂ ಟೀಕಿಸುವವರ ವಿರುದ್ಧ ಬೆದರಿಕೆ ಶೈಲಿಯ ಪೋಸ್ಟ್‌ಗಳನ್ನು ಹಾಕುತ್ತಿರುವ ಅಭಿಮಾನಿಗಳ ಸಂಖ್ಯೆಯೂ ದೊಡ್ಡದಿದೆ. ಈ ಹೊತ್ತಿನಲ್ಲಿ ಅಭಿಮಾನಿಗಳ ಸಂಘದ ಬೇರು–ಬಿಳಲುಗಳ ಸಮಾಚಾರ ಕೂಡ ಮುಖ್ಯವೇ ಹೌದು.

ಇಷ್ಟಕ್ಕೂ ನಟರಿಗೆಂದೇ ಕರ್ನಾಟಕದಲ್ಲಿ ಅಭಿಮಾನಿಗಳ ಸಂಘ ಹುಟ್ಟಿದ್ದು ಯಾವಾಗ ಎನ್ನುವ ಪ್ರಶ್ನೆ ಯಾರನ್ನೇ ಕಾಡಲಿಕ್ಕೂ ಸಾಕು. ಈ ಪ್ರಶ್ನೆ ಹಾಕಿದಾಗ, ರಾ.ನಂ.ಚಂದ್ರಶೇಖರ ಇನ್ನೊಂದು ನೆನಪಿಗೆ ಜಾರಿದರು.



ರಾ.ನಂ. ಚಂದ್ರಶೇಖರ

‘ರಾಜಕುಮಾರ್ ಅಭಿನಯದ ನೂರನೇ ಚಿತ್ರ ‘ಭಾಗ್ಯದ ಬಾಗಿಲು’ ತೆರೆಕಂಡಿದ್ದು 1968ರಲ್ಲಿ. ಆ ಸಿನಿಮಾ ಯಶಸ್ವಿಯಾದ ನಂತರವಷ್ಟೆ ಅಭಿಮಾನಿಗಳ ಸಂಘ ಹುಟ್ಟಿಕೊಂಡಿದ್ದು. ತಮಿಳಿನ ಎಂ.ಜಿ.ರಾಮಚಂದ್ರನ್, ಶಿವಾಜಿ ಗಣೇಶನ್ ತರಹದ ನಟರಿಗೆ ನಮ್ಮ ನಾಡಿನಲ್ಲೂ ಅಭಿಮಾನಿಗಳ ಸಂಘಗಳು ಇದ್ದವು. ಅದೇ ಸ್ಫೂರ್ತಿಯಿಂದ ಇಲ್ಲಿಯೂ ರಾಜಕುಮಾರ್ ಅಭಿಮಾನಿಗಳ ಸಂಘ ಜನ್ಮತಳೆಯಿತು. ರಾಮೇಗೌಡ ಎನ್ನುವವರು ಅದರ ಅಧ್ಯಕ್ಷರಾದರು. ಅವರು ನಂಜನಗೂಡಿನವರು. ರಾಜಕುಮಾರ್ ಅವರ ಸುತ್ತಮುತ್ತಲೇ ಇದ್ದ ಕೆಲವರು ಮೊದಲಿಗೆ ಈ ಅಭಿಮಾನಿಗಳ ಸಂಘಕ್ಕೆ ಓನಾಮ ಹಾಕಿದರು’– ಇದನ್ನು ನೆನಪಿಸಿಕೊಂಡ ನಂತರ, ಸಂಘದವರ ಅನೇಕ ಸತ್ಕಾರ್ಯಗಳನ್ನು ರಾ.ನಂ. ಸ್ಮರಿಸಿಕೊಂಡರು. ಸರ್ಕಾರಿ ಉದ್ಯೋಗಗಳಲ್ಲಿನ ಮೂರು ಹಾಗೂ ನಾಲ್ಕನೇ ದರ್ಜೆ ನೌಕರರ ಆಯ್ಕೆ ಪರೀಕ್ಷೆಯನ್ನು ಕನ್ನಡದಲ್ಲಿ ನಡೆಸುವುದನ್ನು ಕಡ್ಡಾಯಗೊಳಿಸಲು, ಅಚ್ಚು ಮತ್ತು ಗಾಲಿ ಕಾರ್ಖಾನೆಯಲ್ಲಿ ಕನ್ನಡಿಗರ ನೇಮಕಾತಿಗೆ ಅವಕಾಶ ಕಲ್ಪಿಸಲು ನಡೆಸಿದ ಹೋರಾಟಗಳು ಕೊಟ್ಟಿದ್ದ ಸತ್ಫಲವನ್ನು ಅವರು ಹೊಗಳಿದರು.

ಗೋವಿಂದಹಳ್ಳಿ ದೇವೇಗೌಡ ಅವರಂಥವರು ರಾಜಕುಮಾರ್ ಕುರಿತ ಪುಸ್ತಕಗಳನ್ನು ಹೊರತಂದದ್ದು, ರಾಜಕುಮಾರ್ ಅಭಿಮಾನಿಗಳೇ ರಕ್ತದಾನ ಶಿಬಿರಗಳನ್ನು ನಡೆಸಿದ್ದು, ಶಾಲಾ ಮಕ್ಕಳಿಗೆ ಉಚಿತವಾಗಿ ನೋಟ್‌ಪುಸ್ತಕ ವಿತರಣೆ ಮಾಡಿದ್ದು, ಸಾಮೂಹಿಕ ವಿವಾಹ ಆಯೋಜಿಸಿದ್ದು... ಹೀಗೆ ಸತ್ಕಾರ್ಯದ ಪಟ್ಟಿ ಸಣ್ಣದೇನೂ ಇಲ್ಲ.


ಅಭಿಮಾನಿಗಳಲ್ಲಿ ಮೊದಲಿನಿಂದಲೂ ಒಂದು ಅತಿರೇಕದ ಗುಣ ಇದೆ ಎಂದು ಚಿದಾನಂದಮೂರ್ತಿ ಅವರಿಗೆ ಅನಿಸಿತ್ತು. ಅದನ್ನೇ ಅವರು ಎಚ್ಚರಿಕೆ ನೀಡುವ ದನಿಯಲ್ಲಿ ರಾ.ನಂ. ಅವರ ಕಿವಿಮೇಲೆ ಹಾಕುತ್ತಿದ್ದರು.

‘ನಾರಾಯಣಗೌಡರು ಕರೆದಿದ್ದ ಸಮಾರಂಭಕ್ಕೆ ಹೋಗಿ ಒಮ್ಮೆ ಭಾಷಣ ಮಾಡಿ ಬಂದದ್ದೆ, ಕನ್ನಡ ಶಕ್ತಿ ಕೇಂದ್ರದ ತಮ್ಮ ಹುದ್ದೆಗೆ ರಾಜೀನಾಮೆ ಕೊಡುವಂತೆ ರಾ.ನಂ. ಅವರನ್ನು ಒತ್ತಾಯಿಸಿದ್ದರು. ಆಗ ನನಗೆ ಕ್ಷಮೆ ಕೇಳದೆ ಬೇರೆ ವಿಧಿ ಇರಲಿಲ್ಲ’ ಎಂದರು.

ಅಭಿಮಾನಿಗಳ ಸಂಘದವರ ಹೋರಾಟದ ಹೆಜ್ಜೆಗಳಲ್ಲಿ ಶಿಸ್ತು ಇರಲಿಲ್ಲ ಎನ್ನುವುದು ಅವರ ಅನುಭವದ ನುಡಿ. ‘ನಾಡಿನಲ್ಲಿ ಕನ್ನಡ ಕಡ್ಡಾಯ’ಕ್ಕೆ ಒತ್ತಾಯಿಸಿ ಸುಮಾರು 1985ರಲ್ಲಿ ನಡೆದಿದ್ದ ಹೋರಾಟದ ಸಂದರ್ಭದಲ್ಲಿ ಗೋಲಿಬಾರ್ ಆಗಿತ್ತು. ಆಗ ಇಬ್ಬರು ಮೃತಪಟ್ಟಿದ್ದರು. ಇಂತಹ ಕೆಲವು ಮಹತ್ವದ ಪ್ರಸಂಗಗಳು ಅಭಿಮಾನಿಗಳ ಚಳವಳಿಗಳಲ್ಲಿ ಇದ್ದ ಬಿರುಕುಗಳಿಗೆ ಕನ್ನಡಿ ಹಿಡಿಯುತ್ತವೆ ಎನ್ನುವುದು ರಾ.ನಂ. ಅವರ ವಾದ.

ಉತ್ತಮ ಉದ್ದೇಶ, ಶಿಸ್ತಿಲ್ಲದ ಚಟುವಟಿಕೆ: ‘ಅಭಿಮಾನಿ’ ಪತ್ರಿಕೆಯ ಸಂಪಾದಕರಾಗಿದ್ದ, ಹೋರಾಟಗಾರರೂ ಆದ ಜಾಣಗೆರೆ ವೆಂಕಟರಾಮಯ್ಯ ಅವರು ರಾ.ನಂ. ನೆನಪುಗಳನ್ನು ಇನ್ನಷ್ಟು ವಿಸ್ತರಿಸಿದರು.

ಗೋಕಾಕ್ ಚಳವಳಿ ನಡೆದ ಸಂದರ್ಭದಲ್ಲಿ ‘ಅಖಿಲ ಕರ್ನಾಟಕ ರಾಜಕುಮಾರ್ ಅಭಿಮಾನಿಗಳ ಸಂಘ’ ಶುರುವಾದುದು. ರಾಜಕುಮಾರ್ ಆಪ್ತ ವಲಯದವರೇ ಇದ್ದ ಈ ಸಂಘದ ಉದ್ದೇಶ ಉತ್ತಮವಾಗಿತ್ತಾದರೂ, ಚಟುವಟಿಕೆಯನ್ನು ಶಿಸ್ತುಬದ್ಧಗೊಳಿಸುವಷ್ಟು ಬಲ ಇರಲಿಲ್ಲ ಎನ್ನುವುದು ಜಾಣಗೆರೆ ಅವರ ಅಭಿಪ್ರಾಯ.



ಜಾಣಗೆರೆ ವೆಂಕಟರಾಮಯ್ಯ

ಈ ಸಂಘ ಹುಟ್ಟುವ ಹತ್ತು ವರ್ಷಗಳ ಮೊದಲೇ ‘ಸಚಿವ’ ಪತ್ರಿಕೆ ನಡೆಸುತ್ತಿದ್ದ ಶ್ರೀಧರ್ ಅವರು ‘ಡಾ ರಾಜಕುಮಾರ್ ಫ್ಯಾನ್ಸ್ ಅಸೋಸಿಯೇಷನ್ ಆಫ್ ಇಂಡಿಯಾ’ ಕಟ್ಟಿದ್ದರು; ಅದೂ 1970ರ ದಶಕದಲ್ಲಿ. ಆ ಸಂಘವನ್ನು ಖುದ್ದು ಪಾರ್ವತಮ್ಮ ರಾಜಕುಮಾರ್ ಉದ್ಘಾಟಿಸಿದ್ದು, ತಾವೂ ಅದಕ್ಕೆ ಹಾಜರಾಗಿದ್ದನ್ನು ಜಾಣಗೆರೆ ನೆನಪಿಸಿಕೊಂಡರು.

ಅಭಿಮಾನಿಗಳ ಸಂಘ, ಗೋಕಾಕ್ ಹೋರಾಟ ಹಾಗೂ ರಾಜಕುಮಾರ್ ಸಿನಿಮಾಗಳ ಯಶಸ್ಸು ಈ ಮೂರಕ್ಕೂ ಸಾವಯವ ಸಂಬಂಧ ಇರುವುದನ್ನು ಅವರು ಗುರುತಿಸುತ್ತಾರೆ.

ಗೋಕಾಕ್ ಚಳವಳಿಗೆ ಮೊದಲು ರಾಜಕುಮಾರ್ ಅವರ ಸಿನಿಮಾಗಳಿಗೆ ಬರುತ್ತಿದ್ದ ಅಭಿಮಾನಿಗಳಿಗೂ ಆನಂತರ ಮುಗಿಬಿದ್ದು ನೋಡತೊಡಗಿದ ಪ್ರೇಕ್ಷಕರಿಗೂ ಮನಃಸ್ಥಿತಿಯಲ್ಲೇ ಒಂದು ವ್ಯತ್ಯಾಸ ಇದೆ ಎನ್ನುವ ಅವರು, ‘ಹೊಸಬೆಳಕು’, ‘ಹಾಲು–ಜೇನು’, ‘ಚಲಿಸುವ ಮೋಡಗಳು’ ರೀತಿಯ ಸಿನಿಮಾಗಳ ಗೆಲುವನ್ನು ಅದಕ್ಕೆ ಉದಾಹರಣೆಯಾಗಿ ನೀಡುತ್ತಾರೆ.

‘ರಾಘವೇಂದ್ರ ಮಹಾತ್ಮೆ’ ಚಿತ್ರದಲ್ಲಿ ರಾಜಕುಮಾರ್ ನಟಿಸಿದ್ದರು. ಬೆಂಗಳೂರಿನ ‘ಸ್ಟೇಟ್ಸ್’ ಚಿತ್ರಮಂದಿರದಲ್ಲಿ ಬಿಡುಗಡೆಯಾಗಿದ್ದ ಆ ಸಿನಿಮಾಕ್ಕೆ ಉತ್ತಮ ಸ್ಪಂದನ ದೊರೆಯಲಿಲ್ಲ. ಆಗ ಅಭಿಮಾನಿಗಳೇ ಚಿತ್ರಮಂದಿರಲ್ಲಿ ಒಂದು ಹುಂಡಿ ಇಟ್ಟು, ಹಣವನ್ನು ಸಂಗ್ರಹಿಸುವ, ಆ ಮೂಲಕ ಸಿನಿಮಾ ಓಡಿಸುವ ಅಭಿಯಾನ ನಡೆಸಿದ್ದು ಅಪರೂಪದ ಪ್ರಸಂಗ.

ಒಂದು ಕಾಲದಲ್ಲಿ ರಾಜಕುಮಾರ್ ಅಭಿಮಾನಿಗಳ ಸಂಘದ 800 ಶಾಖೆಗಳು ಕರ್ನಾಟಕದಲ್ಲಿ ಇದ್ದುದನ್ನು ಜಾಣಗೆರೆ ಕಂಡಿದ್ದಾರೆ.


‘ರಾಜಕುಮಾರ್ ಸಂಘಗಳ ಹುಟ್ಟಿನ ನಂತರ ವಿಷ್ಣುವರ್ಧನ್, ಅಂಬರೀಶ್, ಶಂಕರ್‌ನಾಗ್ ಅವರ ಅಭಿಮಾನಿ ಸಂಘಗಳೂ ತಲೆಎತ್ತಿದವು. ಮೆಜೆಸ್ಟಿಕ್ ಸರ್ಕಲ್‌ನಲ್ಲಿ ಆಗ ಏಕಕಾಲದಲ್ಲಿ ಇಬ್ಬರು ಸ್ಟಾರ್‌ಗಳ ಸಿನಿಮಾ ತೆರೆಕಂಡಾಗ ಅಲ್ಲಿ ಕಟ್‌ಔಟ್, ಸ್ಟಾರ್ ಕಟ್ಟುವ ಪೋಟಿ ಏರ್ಪಡುತ್ತಿತ್ತು. ಕೆಲವರು ಸಗಣಿ ಹಚ್ಚುವ ಅತಿರೇಕಕ್ಕೂ ಹೋಗುತ್ತಿದ್ದರು. ನೆಚ್ಚಿನ ನಟನ ಸಿನಿಮಾ ತೆರೆಕಂಡಾಗ ಮೊದಲೇ ಟಿಕೆಟ್‌ಗಳನ್ನು ಖರೀದಿಸಿ ಬ್ಲಾಕ್‌ನಲ್ಲಿ ಮಾರಿಕೊಳ್ಳುವ ಪರಿಪಾಟ ಇತ್ತು. ಸಣ್ಣಪುಟ್ಟ ಲೋಭಿತನವಿತ್ತು. ಕ್ರಮೇಣ ನಾಯಕನ ಹೆಸರಲ್ಲಿ ಏನು ಮಾಡಿದರೂ ನಡೆಯುತ್ತದೆ ಎನ್ನುವ ಭಾವನೆ ಹೆಚ್ಚಾಗತೊಡಗಿತು. ಅಭಿಮಾನಿ ಸಂಘಗಳ ಹೆಸರಿನಲ್ಲಿ ವಸೂಲಿಗೆ ಇಳಿದರು’ ಎಂದು ಜಾಣಗೆರೆ ವಿಶ್ಲೇಷಿಸುತ್ತಾರೆ.

ಅಭಿಮಾನಿ ಸಂಘಗಳಲ್ಲಿ ಇರುವ ಬಹುತೇಕರು ಒಳ್ಳೆಯ ಉದ್ಯೋಗಗಳಲ್ಲಿ ಇರುತ್ತಿರಲಿಲ್ಲ. ಬಹಳ ಬೇಗ ದಿಕ್ಕು ತಪ್ಪುತ್ತಿದ್ದರು. ಹುಚ್ಚು ಹೊಳೆಯಲ್ಲಿ ತೇಲಾಡುತ್ತಿದ್ದರು. ಈಗಲೂ ಸಾಮಾಜಿಕ ಮಾಧ್ಯಮದಲ್ಲಿ ಅದೇ ಚಾಳಿ ಮುಂದುವರಿದಿದೆ ಎನ್ನುವುದು ಅವರ ಪ್ರತಿಪಾದನೆ.

ಪುನೀತ್ ರಾಜಕುಮಾರ್ ತೀರಿಹೋದ ನಂತರ ಅವರ ಅಭಿಮಾನಿಗಳು ಆ ರೀತಿ ಇದ್ದಾರೆ ಎನ್ನುವಂತೇನೂ ಕಾಣಲಿಲ್ಲವಲ್ಲ ಎಂದು ಗಮನಸೆಳೆದಾಗ, ಅವರು ಹೇಳಿದ್ದಿಷ್ಟು: ‘ಪುನೀತ್ ಆತ್ಮಶೋಧ ಮಾಡಿಕೊಂಡು ಬೆಳೆದಿದ್ದವರು. ಅಲ್ಪಾವಧಿಯಲ್ಲಿಯೇ ಒಳ್ಳೆಯ ಕಲಾವಿದರಾಗಿ ಬೆಳೆದಿದ್ದರು. ‘ಕನ್ನಡದ ಕೋಟ್ಯಧಿಪತಿ’ ಕಾರ್ಯಕ್ರಮ ಅವರ ವರ್ಚಸ್ಸನ್ನು ಹೆಚ್ಚಿಸಿತ್ತು. ಅವರು ಮಾಡಿದ್ದ ಅನೇಕ ಮಾನವೀಯ ಕೆಲಸಗಳು ಚಿಕ್ಕ ವಯಸ್ಸಿನಲ್ಲೇ ಅವರು ತೀರಿಕೊಂಡಾಗ ಅಭಿಮಾನದ ರೂಪದಲ್ಲಿ ವ್ಯಕ್ತವಾಯಿತು. ಅಂತಹ ಅಭಿಮಾನಿಗಳ ಮನಃಸ್ಥಿತಿಯೇ ಬೇರೆ.’

ಹೀಗೆ ಹೇಳಿದ ನಂತರ ಅವರು ವಿಷ್ಣುವರ್ಧನ್ ಜೀವನದಲ್ಲಿ ಅಭಿಮಾನಿಗಳಿಂದ ಆದ ತೊಂದರೆಗೆ ಉದಾಹರಣೆ ಕೊಟ್ಟರು: ವಿಷ್ಣು ತಂದೆ ನಿಧನರಾದಾಗ, ಶವದ ಮೆರವಣಿಗೆ ಸಾಗುತ್ತಿದ್ದಾಗ ಕೆಲವರು ಕಲ್ಲು ಬೀರಿದ್ದರು. ಬೆದರಿಕೆ ಕರೆಗಳು, ಚಿತ್ರಹಿಂಸೆಯನ್ನು ವಿಷ್ಣು ಅನುಭವಿಸಿದ್ದ ಕಾರಣಕ್ಕೇ ಅವರು ಅಂಬರೀಶ್ ಸ್ನೇಹದ ನೆರಳನ್ನು ಹೆಚ್ಚು ಆಶ್ರಯಿಸಿದ್ದು. ವಿಷ್ಣುವಿನ ಪಾಲಿಗೆ ‘ವಿಷ್ಣು ಸೇನೆ’ ಎಂಬ ಅಭಿಮಾನಿ ಬಳಗ ಅನಿವಾರ್ಯ ರಕ್ಷಣಾಕವಚವಾಗಿತ್ತು.

ಈಗಿನ ನಟರಲ್ಲಿ ಯಶ್ ದುಡುಕಿಲ್ಲದೆ ಎಲೆಮರೆಯ ಕಾಯಿಯಂತೆ ಕೆಲಸ ಮಾಡಿಕೊಂಡಿದ್ದಾರೆನ್ನುವ ಜಾಣಗೆರೆ, ದರ್ಶನ್ ಹುಚ್ಚಾಟವನ್ನೇ ಅಭಿಮಾನಿಗಳೂ ಅನುಕರಿಸುತ್ತಿರುವ ಸಾಧ್ಯತೆಯೊಂದನ್ನು ಕೂಡ ಬಿಚ್ಚಿಟ್ಟರು. ಶಂಕರ್‌ನಾಗ್ ಚಿಕ್ಕ ವಯಸ್ಸಿಗೇ ತೀರಿಕೊಂಡಾಗ ಹುಟ್ಟಿದ ಅನುಕಂಪದ ಅಲೆಯು ಈಗಲೂ ಅವರ ಅಭಿಮಾನದ ಸೆಲೆಯಾಗಿ ಉಳಿದಿರುವುದಕ್ಕೆ ಕನ್ನಡಿ ಹಿಡಿದರು.



ವಿಧಾನಸೌಧ ಮುಂಭಾಗ 1983ರ ನವೆಂಬರ್1ರಂದು ನಡೆದ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಸೇರಿದ್ದ ರಾಜಕುಮಾರ್ ಅವರ ಅಭಿಮಾನಿಗಳು ಮತ್ತು ಸಾರ್ವಜನಿಕರು ಪ್ರಜಾವಾಣಿ ಸಂಗ್ರಹ ಚಿತ್ರ

ಸಣ್ಣಪುಟ್ಟದ್ದಕ್ಕೂ ತಕರಾರು

‘ಒಡಹುಟ್ಟಿದವರು’ ಸಿನಿಮಾ ಬಿಡುಗಡೆಯಾದ ಸಂದರ್ಭ. ರಾಜಕುಮಾರ್ ಹಾಗೂ ಅಂಬರೀಶ್ ಇಬ್ಬರೂ ನಟಿಸಿದ್ದ ಚಿತ್ರ ಅದು. ಬೆಂಗಳೂರಿನ ನರ್ತಕಿ ಚಿತ್ರಮಂದಿರದಲ್ಲಿ ಅದು ತೆರೆಕಂಡಿತು. ಅದೇ ಕಾಲಘಟ್ಟದಲ್ಲಿ ವಿಷ್ಣುವರ್ಧನ್ ಅಭಿನಯದ ‘ನಿಷ್ಕರ್ಷ’ ಸಿನಿಮಾ ನರ್ತಕಿ ಚಿತ್ರಮಂದಿರದಲ್ಲಿ ಇತ್ತು. ಅಭಿಮಾನಿಗಳ ನಡುವೆ ತಿಕ್ಕಾಟ ಆಗಬಹುದು ಎಂದು ಆ ಚಿತ್ರವನ್ನು ‘ತ್ರಿವೇಣಿ’ ಚಿತ್ರಮಂದಿರಕ್ಕೆ ಸ್ಥಳಾಂತರಿಸಿದರು. ಚಿತ್ರಮಂದಿರದ ಎದುರು ಇದ್ದ ಕಟ್‌ಔಟ್‌ಗಳಲ್ಲಿ ಅಂಬರೀಶ್ ಅವರದ್ದು ರಾಜಕುಮಾರ್ ಅವರದ್ದಕ್ಕಿಂತ ಎರಡು ಅಡಿ ಎತ್ತರವಿತ್ತು. ಅಭಿಮಾನಿಗಳು ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಆಗ ಅಂಬರೀಶ್ ಕಟ್‌ಔಟ್ ಅನ್ನು ಕತ್ತರಿಸಿ, ರಾಜಕುಮಾರ್ ಅವರ ಕಟೌಟ್‌ಗೆ ಹೊಂದುವ ಎತ್ತರಕ್ಕೆ ತರಲಾಯಿತು. ವಿಷ್ಣು ಪೋಸ್ಟರ್‌ನಲ್ಲಿ ಶಸ್ತ್ರಾಸ್ತ್ರ ಇತ್ತು. ಅದು ರಾಜಕುಮಾರ್ ಕಟ್‌ಔಟ್ ಕಡೆಗೆ ತೋರುತ್ತಿದೆ ಎಂದು ಕೆಲವು ಅಭಿಮಾನಿಗಳು ತಕರಾರು ತೆಗೆದರು.



ನಾನು ಆಗ ಅದೇ ಪ್ರದೇಶದ ವ್ಯಾಪ್ತಿಯಲ್ಲಿ ಇನ್‌ಸ್ಪೆಕ್ಟರ್ ಆಗಿದ್ದೆ. ಅದೇ ರಸ್ತೆಯ ಇನ್ನೊಂದು ಚಿತ್ರಮಂದಿರದಲ್ಲಿ ವಿಷ್ಣು ಅಭಿನಯದ ಬೇರೆ ಚಿತ್ರವಿತ್ತು. ಶಸ್ತ್ರಾಸ್ತ್ರ ಆ ಕಡೆಗೆ ಇದೆ ಎಂದು ತೋರಿಸಿದೆ. ನನ್ನ ಅಭಿಪ್ರಾಯವನ್ನು ಅವರೆಲ್ಲ ಒಪ್ಪಿ, ಜೈಕಾರ ಹಾಕುತ್ತಾ ನಡೆದಿದ್ದರು.

ಗೋಕಾಕ್ ಚಳವಳಿಯ ನಂತರ ರಾಜಕುಮಾರ್ ಅಭಿಮಾನಿಗಳ ಸಂಘದ ಶಾಖೆಗಳು ಹೆಚ್ಚಾಗಿದ್ದವು. ಒಂದೊಮ್ಮೆ ಮಲ್ಲೇಶ್ವರ ಕ್ಷೇತ್ರದಿಂದ ಅಭಿಮಾನಿಗಳ ಸಂಘದ ಅಧ್ಯಕ್ಷರು ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿ, ಸೋತಿದ್ದರು. ನಾರಾಯಣಗೌಡರು ಅವೆನ್ಯೂ ರಸ್ತೆಯ ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷರಾಗಿದ್ದರು. ‘ಅಭಿಮಾನಿ’ ವೆಂಕಟೇಶ್, ಸಾ.ರಾ. ಗೋವಿಂದ್ ಇವರೆಲ್ಲರೂ ಅದೇ ಕಾಲಘಟ್ಟದಲ್ಲಿ ಚಟುವಟಿಕೆಯಿಂದ ಇದ್ದರು. ಪಾರ್ವತಮ್ಮ ರಾಜಕುಮಾರ್ ಅವರು ಈ ಸಂಘಗಳ ಮೇಲೆ ಹಿಡಿತ ಹೊಂದಿದ್ದರು.

ಆಗೆಲ್ಲ ಅಭಿಮಾನಿಗಳು ಸಣ್ಣಪುಟ್ಟ ತಕರಾರುಗಳನ್ನು ತೆಗೆಯುತ್ತಿದ್ದರು. ಯಾರೂ ವಸೂಲಿಗೆ ಇಳಿದಿರಲಿಲ್ಲ.

ಬಿ.ಕೆ.ಶಿವರಾಂ, ನಿವೃತ್ತ ಎಸಿಪಿ

ಇದು ‘ಟಾಕ್ಸಿಕ್ ಫ್ಯಾನ್‌ಡಮ್’

ಸೆಲೆಬ್ರಿಟಿಗಳ ಆರಾಧನೆಯು ಪ್ರೌಢಾವಸ್ಥೆಯಿಂದಲೇ ಶುರುವಾಗುವ ಸಾಧ್ಯತೆ ಇರುತ್ತದೆ. ಇದನ್ನು ನಾವು ‘ಟಾಕ್ಸಿಕ್ ಫ್ಯಾನ್‌ಡಮ್’ ಎನ್ನುತ್ತೇವೆ. ಮನೆಯಲ್ಲಿ ಬಾಲ್ಯದಲ್ಲೇ ನೀತಿಪಾಠ ಹೇಳಿ, ರಾಮಾಯಣ–ಮಹಾಭಾರತದ ಉಪಕತೆಗಳನ್ನು ಕೇಳಿಸಿ, ಮಾದರಿ ನಾಯಕ ಹೇಗಿರಬೇಕು ಎಂದು ತಿಳಿಸುತ್ತಿದ್ದರು. ಇದು ಸಂಸ್ಕಾರ ರೂಢಿಸುತ್ತದೆ ಎನ್ನುವ ನಂಬಿಕೆ ಇತ್ತು.

ಈಗ ದೃಶ್ಯ ಮಾಧ್ಯಮದ ಪ್ರಭಾವ ತೀವ್ರವಾಗಿದೆ. ತೆರೆಮೇಲೆ ನೋಡುವ ತಮ್ಮಿಷ್ಟದ ನಾಯಕನ ಹೊಡೆದಾಟ ಒಳ್ಳೆಯದಕ್ಕೆ ಮಾದರಿ ಎಂದುಕೊಳ್ಳುತ್ತಾರೆ. ಸಾಮಾಜಿಕ ಮಾಧ್ಯಮ ಅದಕ್ಕೆ ಪೂರಕವಾದ ವಿಷಯಗಳನ್ನೇ ಉಣಬಡಿಸುತ್ತಾ ಇರುತ್ತದೆ. ಹೀಗಾದಾಗ, ನಾಯಕನ ವರ್ತನೆ ಅನುಕರಣೀಯ ಎನ್ನುವ ಕಲ್ಪನೆ ಮೂಡುತ್ತದೆ. ತಾವು ಬದುಕಿನಲ್ಲಿ ಅನುಭವಿಸಿರುವ ಹಿನ್ನಡೆ ಅಥವಾ ಶೋಷಣೆಗೆ ಪ್ರತಿರೋಧದ ಮಾರ್ಗವಾಗಿ ಈ ಆರಾಧನೆ ಗಟ್ಟಿಗೊಳ್ಳುತ್ತದೆ. ಇನ್ನು, ಮಾನಸಿಕ ಸಮಸ್ಯೆ ಇರುವವರಲ್ಲಿಯಂತೂ ಈ ಆರಾಧನಾಭಾವ ಆವರಿಸಿಕೊಳ್ಳುತ್ತದೆ.



ಈ ರೀತಿ ವರ್ತಿಸುವವರಿಗೆ ಒಂದೋ ಸರಿಯಾದ ಮಾರ್ಗದರ್ಶನ ದೊರೆತಿರುವುದಿಲ್ಲ ಅಥವಾ ತಮ್ಮ ದೌರ್ಬಲ್ಯ ಮೀರುವ ಮಾರ್ಗವಾಗಿ ನಾಯಕನ ಹೊಡೆದಾಟದ ವೈಖರಿ ಕಾಣಿಸುತ್ತದೆ.

ಈಗ ಸಾಮಾಜಿಕ ಮಾಧ್ಯಮದಲ್ಲಿ ನಟರ ಅಧಿಕೃತ ಖಾತೆಗಳಿರುತ್ತವೆ. ಅಲ್ಲಿ ಕಾಮೆಂಟ್ ಮಾಡುವುದು, ಹೊಗಳುವುದು, ಆ ಹೊಗಳಿಕೆಗೆ ಮೆಚ್ಚುಗೆ–ಟೀಕೆ ಬರುವುದು ಸಾಮಾನ್ಯ. ಇದರಿಂದ ಇಷ್ಟದ ನಾಯಕನ ಖಾಸಗಿ ಬದುಕಿನ ಭಾಗವೇ ಆಗಿ ಅಭಿಮಾನಿ ಪರಿಗಣಿತನಾಗುತ್ತಾನೆ. ಈ ಕಾರಣದಿಂದಲೂ ಅಭಿಮಾನ ಈ ಮಟ್ಟಕ್ಕೆ ಮುಟ್ಟುತ್ತಿದೆ. ಅನಾಮಧೇಯರಾಗಿ ಪ್ರತಿಕ್ರಿಯಿಸುವ ಅವಕಾಶ, ಇಂತಹ ಧೋರಣೆಯ ಬೆಂಕಿಗೆ ಸುರಿಯಲು ಇಂಧನವೂ ಹೌದಾಗಿದೆ.

ಡಾ.ಪ್ರೀತಿ ಶಾನಭಾಗ್, ಮನೋವೈದ್ಯೆ, ಶಿವಮೊಗ್ಗ

ಪದಬಂಧ 5733


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಿಡಿತವಿಲ್ಲದೆ ಸರ್ವಸ್ವತಂತ್ರವಾದುದು (4)
3.ಈತ ಸೋಮಾರಿ (4)
5.ಬರಲು ಹೇಳಿದವ ತೋರಿಸಿದ ಪೊರಕೆ! (3)
6.ಭ್ರಮೆಯನ್ನು ಹೀಗೂ ಹೇಳುತ್ತಾರೆ (4)
7.ಕನ್ನಡಿಗನು ನೀಡಿದ ಇನ್‌ಕಮ್ ಟ್ಯಾಕ್ಸ್! (7)
10.ವೇದಾದಿಗಳನ್ನು ಅಧ್ಯಯನ ಮಾಡಿದವನು (4)
11.ಸಂಗತಿ ತಿಳಿಸಿದ ಜೊತೆಗಾತಿ (3)
14.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
15.ರಾಗ ಹೇಳುತ್ತಾ ಸುಗಂಧ ಲೇಪನ (4)

ಮೇಲಿಂದ ಕೆಳಕ್ಕೆ

1.ಸಂಪತ್ತು ಇಲ್ಲದೆ (2)
2.ವರ ಪಡೆದುಕೊಂಡಿರುವ ಮಗ (3)
4.ವಿಷ್ಣುವಿನ ವಾಹನ (3)
5.ಈತ ದುಡ್ಡಿಲ್ಲದವನು (3)
6.ಹಣ ನೀಡಿ ತಂದಿರುವ ಸೊಡರು (3)
8.ಮಾವನಿಗೆದುರು ಬಂದಿರುವ ಸ್ತ್ರೀ (3)
9.ಗೆಳೆಯನೊಡನಿರುವ ಸ್ನೇಹಿತೆ (3)
10.ಅಂಗ ಹೀನ ವ್ಯಕ್ತಿ (3)
12.ಗಾಣದಿಂದ ಎಣ್ಣೆ ತೆಗೆಯುವವನು (3)
13.ಹೆಣ್ಣುಮಕ್ಕಳ ಉಡುಗೆ (2)



5732ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಿಂಹಾಸನ 3.ಬಾಕಿದಾರ
5.ಮಸುಕು 7.ರಜಾ
9.ತಾಣ 10.ಅಮರ್ಷ
11.ಕಂತೆ 12.ತ್ರಪು
14.ಕವನ 16.ಕದುಜಾಣ

ಮೇಲಿಂದ ಕೆಳಕ್ಕೆ:
1.ಸಿಂಗಾರ 2.ನಮ
3.ಬಾಕು 4.ರಮಣ
6.ಸುವರ್ಣಮಹೋತ್ಸವ 17.ತರಕಾರಿ
8.ಜಾಗರೂಕತೆ 9.ತಾರಕಮಂತ್ರ
11.ಕಂದಕ 13.ಪುಢಾರಿ
14.ಕಣ 15.ನತ

ಸುಡೊಕು 6118

9				6				2
6		2	4		9			
	8					6		9
3	5	7	2			4		
		8		4			3	7
4					3	2		8
		9	8					4
8					4		2	
		3		2		7		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6117 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಜುಲೈ 6, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಪ್ರತಿಪದ್ ಗಂ.28-27 ನಕ್ಷತ್ರ: ಪುನರ್ವಸು ಗಂ.28-48 ಯೋಗ: ವ್ಯಾಘಾತ ಗಂ.26-47 ಕರಣ: ಕಿಂಸ್ತುಘ್ನ ಗಂ.16-23, ಮಿಥುನ ಮಾಸದ 21 ನೇ ದಿನ, ಮಳೆನಕ್ಷತ್ರ: ಪುನರ್ವಸು 1.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-13 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 29 ಜುಲ್‌ಹಿಜಾ
ಅದೃಷ್ಟ ಸಂಖ್ಯೆ: 7, 11

ಮೇಷ: ತರಗತಿಯಲ್ಲಿ ವಿದ್ಯಾರ್ಥಿಗಳ ಸಂಶಯವನ್ನು ಹಾಗೂ ಮನೆಯಲ್ಲಿ ಮಗುವಿನ ಸಂಶಯನ್ನು ಬಗೆ ಹರಿಸುವುದರಲ್ಲಿ ದಿನ ಕಳೆಯುವಿರಿ. ಮಾನಸಿಕ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಮಾತನಾಡಿ.

ವೃಷಭ: ಗುರು-ಹಿರಿಯರ ಅನುಗ್ರಹದಿಂದ ಹಾಗೂ ನಿಮ್ಮ ಶಾಂತಿ ಸ್ವಭಾವದಿಂದ ಹೆಚ್ಚಿನ ನೆಮ್ಮದಿ ಕಾಣುವಿರಿ. ದೈವಾನುಗ್ರಹದಿಂದ ಕಾರ್ಯಗಳು ಕೈಗೂಡಿ ನಿರೀಕ್ಷಿತ ಫಲ ಲಭಿಸಲಿದೆ.

ಮಿಥುನ: ಸಣ್ಣ ಕಾರಣಗಳಿಗೆ ಶುರುವಾದ ವಾದಗಳನ್ನು ಸಂಸಾರ ಒಡೆಯುವ ಹಂತಕ್ಕೆ ತಲುಪಲು ಬಿಡದಿರಿ. ನಿಮ್ಮ ಸ್ಪರ್ಧಾತ್ಮಕ ಮನೋಭಾವ ಹೊಸ ಸಾಹಸಕ್ಕೆ ಕೈ ಹಾಕಲು ಪ್ರೇರೇಪಿಸುವುದು.

ಕರ್ಕಾಟಕ: ಗ್ರಹಫಲಗಳು ಅನುಕೂಲಕರ ಆಗಿರುವುದರಿಂದ ವ್ಯಾಪಾರ–ಉದ್ಯಮಗಳಲ್ಲಿ ನಿರೀಕ್ಷೆಗೂ ಮೀರಿದ ಲಾಭವಾಗಲಿದೆ. ಕಷ್ಟವಾದ ಕೆಲಸಗಳನ್ನು ಸರಳೀಕರಿಸಿಕೊಳ್ಳುವ ಸರ್ವಪ್ರಯತ್ನಗಳನ್ನೂ ಮಾಡುವಿರಿ.

ಸಿಂಹ: ಇನ್ನೊಬ್ಬರ ಜೀವನದಲ್ಲಿ ನಿಮ್ಮ ಪಾತ್ರ ಮಹತ್ವದ್ದು ಎಂದು ತಿಳಿದು ಸಂತಸವಾಗುವುದು. ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ಈ ದಿನ ತಿಳಿಯುವುದು. ಅವಿವಾಹಿತರಿಗೆ ಶುಭ ಫಲಗಳು ಲಭಿಸಲಿವೆ.

ಕನ್ಯಾ: ಸ್ನೇಹಿತರ ಸಲಹೆ ಸಹಕಾರದಿಂದ ಪ್ರಾರಂಭಿಸಿದ ವ್ಯವಹಾರದಲ್ಲಿ ಒಳ್ಳೆಯ ಫಲಿತಾಂಶ ಸಿಗಲಿದೆ. ಅಧಿಕ ಓಡಾಟಗಳಿಂದ ದೇಹಾಯಾಸ ಇದ್ದರೂ ಆದಾಯಕ್ಕೆ ಯಾವುದೇ ಕೊರತೆ ಇರುವುದಿಲ್ಲ.

ತುಲಾ: ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಉದಾಸೀನತೆ ತೋರಿಬಂದರೂ ಬುದ್ಧಿ ಬಲ ಮತ್ತು ಶ್ರದ್ಧೆಯಿಂದ ಆಲೈಸುವ ಗುಣದಿಂದಾಗಿ ಫಲಿತಾಂಶಕ್ಕೆ ಚ್ಯುತಿ ಬರುವುದಿಲ್ಲ. ದಾಂಪತ್ಯ ಜೀವನ ಸುಖಮಯವಾಗಿರುವುದು.

ವೃಶ್ಚಿಕ: ಮಳೆಗಾಲಕ್ಕೆ ಸೂಕ್ತವಾಗುವ ರೀತಿಯಲ್ಲಿ ಮನೆಯಲ್ಲಿ ಸಣ್ಣ ಪುಟ್ಟ ಮಾರ್ಪಾಡು ಕಾರ್ಯಗಳನ್ನು ನಡೆಸುವಿರಿ. ಸಹೋದರನ ವ್ಯಾಪಾರ ವಹಿವಾಟುಗಳಿಗೆ ಉಪಕಾರವಾಗುವ ಸಲಹೆಗಳನ್ನು ನೀಡಬಹುದು.


ಧನು: ನೂತನ ಯೋಜನೆ ಆರಂಭಕ್ಕೆ ಮುನ್ನ ದೀರ್ಘಾಲೋಚನೆ ಮತ್ತು ಸಲಹೆ ಪಡೆದುಕೊಳ್ಳುವುದನ್ನು ಅವಶ್ಯ. ನಂಬಿಕಸ್ಥ ಸ್ನೇಹಿತರೊಂದಿಗಷ್ಟೇ ಪ್ರಯಾಣದ ಯೋಜನೆ ರೂಪಿಸಿ. ಇಷ್ಟದ ಸಿಹಿ ಖಾದ್ಯಗಳನ್ನು ಸೇವಿಸುವ ಯೋಗವಿದೆ.

ಮಕರ: ವಿದ್ಯಾರ್ಥಿಗಳು ಶಿಕ್ಷಕರ ಹೆಸರನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯುವರು. ಕ್ರೀಡಾ ಕ್ಷೇತ್ರದಲ್ಲಿ ಈಗಾಗಲೇ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿರುವವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸುವಿರಿ.

ಕುಂಭ: ಕುಟುಂಬದ ಅತಿ ಮುಖ್ಯ ಕಾರ್ಯಕ್ರಮವನ್ನು ಅನಿವಾರ್ಯ ಕಾರಣಗಳಿಂದಾಗಿ ತಪ್ಪಿಸಿಕೊಳ್ಳಬೇಕಾದ ಪರಿಸ್ಥಿತಿಯು ನೋವುಂಟು ,ಆಡಲಿದೆ. ಪದವೀಧರರಿಗೆ ಸನ್ಮಾನದಂತಹ ಗೌರವ ದೊರಕಲಿದೆ.

ಮೀನ: ಮಗಳ ಮದುವೆಯ ಜವಾಬ್ದಾರಿಯು ಹೆಂಡತಿಯ ತವರು ಮನೆಯವರ ಸಹಕಾರದಿಂದಾಗಿ ನೀವಂದುಕೊಂಡಷ್ಟು ಕಷ್ಟವಾಗಿ ಪರಿಣಮಿಸದು. ವಾಹನ ಖರೀದಿಗೆ ಆತುರ ಬೇಡ.

ಷೇರುಪೇಟೆ ವಹಿವಾಟು




ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,302
ಇಂದಿನ ಅಂತ್ಯ	24,323
▲	21
ದಿನದ ಗರಿಷ್ಠ	24,363

ವಿನಿಮಯ ದರ

$	ಡಾಲರ್	83.49
£	ಪೌಂಡ್	106.80
€	ಯುರೊ	90.40
¥	ಯೆನ್ (100ಕ್ಕೆ)	52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹980 (980)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹916 (920)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹250-445
ದ್ವಿತಳಿ (ಬಿ.ವಿ)	₹280-619

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-37500
ಹಳತು	37500-45500
ಚಿತ್ರದುರ್ಗ	
ಅಪಿ	49700-50100
ಬೆಟ್ಟೆ	34600-35000
ಕೆಂಪುಗೋಟು	28200-28600
ರಾಶಿ	49200-49600
ಕುಮಟ	
ಚಿಪ್ಪು	24189-28590
ಕೋಕ	13899-26079
ಫ್ಯಾಕ್ಟರಿ	10099-20829
ಹಳೆಚಾಲಿ	36099-37899
ಹೊಸಚಾಲಿ	30599-35029

ಪುತ್ತೂರು	
ಹೊಸತು	27000-38000
ಶಿವಮೊಗ್ಗ	
ಬೆಟ್ಟೆ	23079-54150
ಗೊರಬಲು	17089-34699
ರಾಶಿ	22069-51599
ಸರಕು	56599-80000
ಸಿದ್ದಾಪುರ	
ಬಿಳಿಗೋಟು	25699-29899
ಚಾಲಿ	32299-35199
ಕೋಕ	24699-26299
ಕೆಂಪುಗೋಟು	26311-34099
ರಾಶಿ	40499-46399
ತಟ್ಟಿಬೆಟ್ಟೆ	35689-38089

ಶಿರಸಿ	
ಬೆಟ್ಟೆ	34100-42699
ಬಿಳಿಗೋಟು	22199-30600
ಚಾಲಿ	33239-36501
ಕೆಂಪುಗೋಟು	20000-27800
ರಾಶಿ	44699-47399
ಯಲ್ಲಾಪುರ	
ಅಪಿ	55995-62379
ಬಿಳಿಗೋಟು	22099-30900
ಚಾಲಿ	31069-36009
ಕೋಕ	9021-28012
ಕೆಂಪುಗೋಟು	26899-31899
ರಾಶಿ	44309-52429
ತಟ್ಟಿಬೆಟ್ಟೆ	34299-43200

ಮುಂಬೈ ಧಾರಣೆ

ಶೇಂಗಾ

05-07-2024

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	11100-11200
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	925 (925)
ಪಾಮ್ ವಾರದ ಡೆಲಿವರಿ	914 (918)
ಸೂರ್ಯಕಾಂತಿ ಎಣ್ಣೆ ಕಚ್ಚಾ	925 (915)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹72,450 (72,200)

ಬೆಳ್ಳಿ ಕೆ.ಜಿ ₹90,800 (90,050)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹16000
ಎಸಿ	₹9380
ಆರ್‌ಪಿ	₹18000
ಆರ್‌ಸಿ	₹9830

ಈರುಳ್ಳಿ



(ಕ್ವಿಂಟಲ್‌ಗೆ)

ದಪ್ಪ	₹2800-3200
ಮಧ್ಯಮ	₹2500-2800
ಸಣ್ಣ	₹2000-2500

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4		₹203
ಆರ್‌ಎಸ್‌ಎಸ್-5		₹195.50
ಗುಡ್ ಲಾಟ್	₹182.50	(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹8500-9150
ಕೆ.ಆರ್.ಪೇಟೆ	₹9455-9455
ತುರುವೇಕೆರೆ	₹9200-9200

ಕೆ.ಜಿಗೆ ₹80: ಕೋಲಾರ, ಚಿತ್ತೂರಿನಿಂದ ಪೂರೈಕೆ ಹೆಚ್ಚಳ ನಿರೀಕ್ಷೆ

ಟೊಮೆಟೊ ಬೆಲೆ ಏರಿಕೆ ಬಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ವಿವಿಧ ಚಿಲ್ಲರೆ ಮಾರುಕಟ್ಟೆಗಳಲ್ಲಿ ಟೊಮೆಟೊ ಧಾರಣೆಯು ಪ್ರತಿ ಕೆ.ಜಿಗೆ ₹80 ದಾಟಿದ್ದು, ಗ್ರಾಹಕರು ತತ್ತರಿಸಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆಯಿಂದಾಗಿ ಟೊಮೆಟೊ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.



ಕರ್ನಾಟಕ ಹಾಗೂ ಆಂಧ್ರಪ್ರದೇಶದಲ್ಲಿ ಬೇಸಿಗೆ ಅವಧಿಯಲ್ಲಿ ಬೆಳೆದಿರುವ ಟೊಮೆಟೊ ಬೆಳೆಯು ರೋಗ ಬಾಧೆಗೆ ತುತ್ತಾಗಿದೆ. ಜೊತೆಗೆ, ತಾಪಮಾನ ಹೆಚ್ಚಳದಿಂದಾಗಿ ಈ ಎರಡು ರಾಜ್ಯಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಉತ್ಪಾದನೆಯಲ್ಲಿ ಶೇ 35ರಷ್ಟು ಇಳಿಕೆಯಾಗಿದೆ. ಹಾಗಾಗಿ, ಪೂರೈಕೆಯಲ್ಲಿ ಕೊರತೆಯಾಗಿದ್ದು, ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಬಿಸಿ ಗಾಳಿ ಕೂಡ ಧಾರಣೆ ಏರಿಕೆಗೆ ಕಾರಣವಾಗಿದೆ. ನವದೆಹಲಿಯಲ್ಲಿ ಮದರ್ ಡೇರಿಯು ತನ್ನ 'ಸಫಲ್' ಮಳಿಗೆಗಳ ಮೂಲಕ ಪ್ರತಿ ಕೆ.ಜಿಗೆ ₹75 ದರದಲ್ಲಿ ಟೊಮೆಟೊ ಮಾರಾಟ ಮಾಡುತ್ತಿದೆ.

ದೇಶದ ಕೆಲವು ಭಾಗಗಳಲ್ಲಿ ಟೊಮೆಟೊ ಚಿಲ್ಲರೆ ಧಾರಣೆಯು ಕಳೆದ ಒಂದು ತಿಂಗಳ ಅವಧಿಯಲ್ಲಿ ದುಪ್ಪಟ್ಟಾಗಿದೆ.

ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಅಧೀನದಲ್ಲಿ ಬರುವ ಬೆಲೆ ನಿಯಂತ್ರಣ ವಿಭಾಗದ ಮಾಹಿತಿ ಪ್ರಕಾರ, ಪ್ರಸ್ತುತ ದೇಶದಲ್ಲಿ ಟೊಮೆಟೊದ ಸರಾಸರಿ ಬೆಲೆ ಕೆ.ಜಿಗೆ ₹58.2 ಇದೆ. ಕಳೆದ ತಿಂಗಳಿನಲ್ಲಿ ಇದ್ದ ಚಿಲ್ಲರೆ ದರಕ್ಕೆ ಹೋಲಿಸಿದರೆ ಶೇ 64.45ರಷ್ಟು ಏರಿಕೆಯಾಗಿದೆ. ಸಗಟು ದರದಲ್ಲಿ ಶೇ 73.24ರಷ್ಟು ಹೆಚ್ಚಳವಾಗಿದೆ.

ಒಂದು ತಿಂಗಳ ಅವಧಿಯಲ್ಲಿ ಚಿಲ್ಲರೆ ಈರುಳ್ಳಿ ದರ ಶೇ 32.19, ಆಲೂಗಡ್ಡೆ ಧಾರಣೆ ಶೇ 17.09ರಷ್ಟು ಏರಿಕೆಯಾಗಿದೆ. ಪ್ರತಿ ಕೆ.ಜಿ ಈರುಳ್ಳಿ ಬೆಲೆಯು ₹32.53ರಿಂದ ₹43ಕ್ಕೆ ಮುಟ್ಟಿದೆ.

ಕಳೆದ ವರ್ಷದ ಮುಂಗಾರು ಅವಧಿಯಲ್ಲಿ ಟೊಮೆಟೊ ಬೆಲೆ ಏರಿಕೆ ಕಂಡಿತ್ತು. ಆ ವರ್ಷದ ಜುಲೈ–ಆಗಸ್ಟ್‌ನಲ್ಲಿ ಪ್ರತಿ ಕೆ.ಜಿಗೆ ₹350 ದಾಟಿತ್ತು. ಬಳಿಕ ಸೆಪ್ಟೆಂಬರ್ ವೇಳೆಗೆ ಇಳಿಕೆ ಕಂಡಿತ್ತು. ಈ ಬಾರಿಯೂ ಹಿಂದಿನ ವರ್ಷದ ಸ್ಥಿತಿಯೇ ಮುಂದುವರಿಯುವ ಸಾಧ್ಯತೆಯಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಪೂರೈಕೆ ಹೆಚ್ಚಳ ನಿರೀಕ್ಷೆ: 'ಕರ್ನಾಟಕದ ಕೋಲಾರ ಜಿಲ್ಲೆಯಲ್ಲಿ ಟೊಮೆಟೊ ಕಟಾವಿಗೆ ಬಂದಿದ್ದು, ಶೀಘ್ರವೇ, ಮಾರುಕಟ್ಟೆಗೆ ಪೂರೈಕೆಯಾಗಲಿದೆ. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಿಂದಲೂ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗಲಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಎರಡು ಜಿಲ್ಲೆಗಳಲ್ಲಿ ಉತ್ಪಾದನೆಯು ಉತ್ತಮವಾಗಿದೆ' ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.

ಆಹಾರ ತಯಾರಿಕಾ ವೆಚ್ಚ ಏರಿಕೆ: ಟೊಮೆಟೊ, ಆಲೂಗಡ್ಡೆ, ಈರುಳ್ಳಿ ಬೆಲೆ ಏರಿಕೆಯಿಂದಾಗಿ ಜೂನ್‌ನಲ್ಲಿ ಮನೆಯಲ್ಲಿ ತಯಾರಿಸುವ ಆಹಾರದ ವೆಚ್ಚದಲ್ಲಿ ಶೇ 10ರಷ್ಟು ಏರಿಕೆಯಾಗಿದೆ ಎಂದು ಕ್ರೆಡಿಟ್ ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್ ತಿಳಿಸಿದೆ.

ಮೇ ತಿಂಗಳಿನಲ್ಲಿ ಮನೆಯಲ್ಲಿ ಒಂದು ಪ್ಲೇಟ್ ಸಸ್ಯಾಹಾರ ತಯಾರಿಕೆ ವೆಚ್ಚ ₹26.7 ಇತ್ತು. ಜೂನ್‌ನಲ್ಲಿ ₹29.4ಕ್ಕೆ ತಲುಪಿದೆ. ಟೊಮೆಟೊ, ಈರುಳ್ಳಿ, ಆಲೂಗಡ್ಡೆ ಬೆಲೆ ಏರಿಕೆಗೆ ಪ್ರತಿಕೂಲ ಹವಾಮಾನವೇ ಕಾರಣ ಎಂದು ತಿಳಿಸಿದೆ.

'ಕಳೆದ ವರ್ಷದ ನವೆಂಬರ್ ನಿಂದಲೂ ಮನೆಯಲ್ಲಿ ತಯಾರಿಸುವ ಸಸ್ಯಾಹಾರದ ಥಾಲಿ ದರದಲ್ಲಿ ಏರಿಕೆ ಯಾಗುತ್ತಿದೆ. ತರಕಾರಿಗಳ ಬೆಲೆ ಏರಿಕೆಯು ಇದಕ್ಕೆ ಕೊಡುಗೆ ನೀಡಿದೆ' ಎಂದು ಕ್ರಿಸಿಲ್ ಮಾರ್ಕೆಟ್ ಇಂಟೆಲಿಜೆನ್ಸಿ ಆ್ಯಂಡ್ ಆ್ಯನಲಟಿಕ್ಸ್‌ನ (ಸಂಶೋಧನಾ) ನಿರ್ದೇಶಕ ಪೂಶನ್ ಶರ್ಮಾ ತಿಳಿಸಿದ್ದಾರೆ.

ಈರುಳ್ಳಿ ಬೆಲೆ ಸ್ಥಿರ: ಕೇಂದ್ರ ಹೇಳಿಕೆ

ನವದೆಹಲಿ (ಪಿಟಿಐ): ದೇಶೀಯ ಮಾರುಕಟ್ಟೆಯಲ್ಲಿ ಈರುಳ್ಳಿ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗಿಲ್ಲ. ಚಿಲ್ಲರೆ ಬೆಲೆಯೂ ಸ್ಥಿರವಾಗಿದೆ ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯವು ಶುಕ್ರವಾರ ತಿಳಿಸಿದೆ.



'ಮುಂಗಾರು ಋತುವಿನಲ್ಲಿ ಸಕಾಲದಲ್ಲಿ ಮಳೆ ಸುರಿದಿರುವುದು ಈರುಳ್ಳಿ, ಟೊಮೆಟೊ, ಆಲೂಗಡ್ಡೆ ಬೆಳೆಗೆ ವರದಾನವಾಗಿದೆ' ಎಂದು ತಿಳಿಸಿದೆ.

ಹಿಂಗಾರು ಅವಧಿಯಲ್ಲಿ ಈರುಳ್ಳಿ ಉತ್ಪಾದನೆ ಕುಂಠಿತವಾಗಿತ್ತು. ಮುಂಗಾರು ಅವಧಿಯಲ್ಲಿ 3.61 ಲಕ್ಷ ಹೆಕ್ಟೇರ್‌ನಲ್ಲಿ ಈರುಳ್ಳಿ ಬಿತ್ತನೆ ಗುರಿ ಹೊಂದಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಬಿತ್ತನೆ ಪ್ರದೇಶದಲ್ಲಿ ಶೇ 27ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ. ಕರ್ನಾಟಕದಲ್ಲಿ 1.50 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಈ ಪೈಕಿ ಇಲ್ಲಿಯವರೆಗೆ ಶೇ 30ರಷ್ಟು ಪ್ರದೇಶದಲ್ಲಿ ಬಿತ್ತನೆ ಪೂರ್ಣಗೊಂಡಿದೆ. ಇತರೆ ರಾಜ್ಯಗಳಲ್ಲೂ ಬಿತ್ತನೆ ಚುರುಕುಗೊಂಡಿದೆ ಎಂದು ತಿಳಿಸಿದೆ.

ಗ್ರಾಹಕರ ದತ್ತಾಂಶ ಸೋರಿಕೆಯಾಗಿಲ್ಲ: ಏರ್‌ಟೆಲ್ ಸ್ಪಷ್ಟನೆ

ನವದೆಹಲಿ (ಪಿಟಿಐ): ಬಳಕೆದಾರರ ದತ್ತಾಂಶ ಸೋರಿಕೆಯಾಗಿಲ್ಲ. ಈ ಕುರಿತ ಆರೋಪ ಸತ್ಯಕ್ಕೆ ದೂರವಾದುದು ಎಂದು ಭಾರ್ತಿ ಏರ್‌ಟೆಲ್ ಕಂಪನಿ ಸ್ಪಷ್ಟಪಡಿಸಿದೆ.

ಕೆಲವರು ಕಂಪನಿಯ ಬ್ರ್ಯಾಂಡ್‌ಗೆ ಕಳಂಕ ತರಲು ಷಡ್ಯಂತ್ರ ರೂಪಿಸಿದ್ದಾರೆ. ಈ ಬಗ್ಗೆ ಸಂಪೂರ್ಣ ತನಿಖೆ ನಡೆಸಿದ್ದು, ಯಾವುದೇ ನಿಯಮಾವಳಿಗಳು ಉಲ್ಲಂಘನೆಯಾಗಿಲ್ಲ ಎಂದು ಹೇಳಿದೆ.

ಆರೋಪ ಏನು?: ಏರ್‌ಟೆಲ್‌ನ 37.5 ಕೋಟಿಗೂ ಹೆಚ್ಚು ಬಳಕೆದಾರರ ದತ್ತಾಂಶವನ್ನು ಹ್ಯಾಕ್ ಮಾಡಲಾಗಿದೆ. ಡಾರ್ಕ್ ವೆಬ್ ವೇದಿಕೆಯಲ್ಲಿ 'ಕ್ಸೆನ್‌ಜೆನ್' ಹೆಸರಿನ ಖಾತೆಯಡಿ ಬಳಕೆದಾರರ ಮೊಬೈಲ್ ಫೋನ್ ನಂಬರ್, ಇ–ಮೇಲ್ ವಿಳಾಸ, ಪೋಷಕರ ಹೆಸರು, ಆಧಾರ್ ಸೇರಿ ಖಾಸಗಿ ಮಾಹಿತಿಯನ್ನು ಮಾರಾಟಕ್ಕೆ ಇಡಲಾಗಿದೆ ಎಂದು ಹೇಳಲಾಗಿದೆ.



ಪ್ರತಿಭಟನೆ ತರಕಾರಿಗಳ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಕೋಲ್ಕತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ನಾಗೇಂದ್ರ, ದದ್ದಲ್‌ಗೆ ನೋಟಿಸ್

ಒಂದನೇ ಪುಟದಿಂದ...

ಹಗರಣದಲ್ಲಿ ಅವರ ಪಾತ್ರದ ಕುರಿತು ಆರಂಭದಿಂದಲೂ ಆರೋಪ ಇತ್ತಾದರೂ ಅವರನ್ನು ಎಸ್‌ಐಟಿ ವಿಚಾರಣೆ ನಡೆಸಿರಲಿಲ್ಲ. ಎಫ್‌ಐಆರ್‌ನಲ್ಲೂ ಅವರ ಹೆಸರನ್ನು ಉಲ್ಲೇಖಿಸಿಲ್ಲ.

ನಾಗೇಂದ್ರ ಹಾಗೂ ಬಸನಗೌಡ ದದ್ದಲ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಬಿಜೆಪಿಯ ನಿಯೋಗ ರಾಜ್ಯಪಾಲರಿಗೆ ಮನವಿ ಸಲ್ಲಿಸಿತ್ತು. ವಿರೋಧ ಪಕ್ಷಗಳ ಮುಖಂಡರು ಈ ಪ್ರಕರಣವನ್ನು ಮುಂದಿಟ್ಟುಕೊಂಡು ರಾಜ್ಯದಾದ್ಯಂತ ಪ್ರತಿಭಟನೆ ಆರಂಭಿಸಿದ ಬೆನ್ನಲ್ಲೇ ಇಬ್ಬರಿಗೂ ಎಸ್‌ಐಟಿ ನೋಟಿಸ್ ಜಾರಿಗೊಳಿಸಿ, ತನಿಖೆ ಚುರುಕುಗೊಳಿಸಿದೆ.

ನಿಗಮದ ಖಾತೆಯಿಂದ ₹94.73 ಕೋಟಿಯು ಅಕ್ರಮವಾಗಿ 'ಹೈದರಾಬಾದ್‌ನ 'ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ– ಆಪರೇಟಿವ್ ಸೊಸೈಟಿ'ಯ (ಎಫ್‌ಎಫ್‌ಸಿಸಿಎಸ್‌ಎಲ್) ಖಾತೆಗಳಿಗೆ ವರ್ಗಾವಣೆ ಆಗಿತ್ತು. ಹಣ ವರ್ಗಾವಣೆ ಮಾಹಿತಿ ಗೊತ್ತಾದ ಮೇಲೆ ನಿಗಮದ ಅಧೀಕ್ಷಕರಾಗಿದ್ದ ಪಿ.ಚಂದ್ರ ಶೇಖರನ್ ಅವರು ಹಣ ವಾಪಸ್ ಹಾಕುವಂತೆ ಸೂಚಿಸಿದ್ದರು. ಈ ಬೆಳವಣಿಗೆ ಬಳಿಕ ₹5 ಕೋಟಿಯಷ್ಟು ಹಣ ನಿಗಮದ ಖಾತೆಗೆ ವಾಪಸ್ ಬಂದಿತ್ತು. ಉಳಿದ ಹಣ ವಾಪಸ್ ಬಂದಿರಲಿಲ್ಲ. ಇದರಿಂದ ಬೆದರಿದ್ದ ಚಂದ್ರಶೇಖರನ್ ಅವರು ಮರಣ ಪತ್ರ ಬರೆದಿಟ್ಟು ಶಿವಮೊಗ್ಗದ ನಿವಾಸದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಹಣ ದುರ್ಬಳಕೆ ಸಂಬಂಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಮೇ 28ರಂದು ಪ್ರಕರಣ ದಾಖಲಾಗಿತ್ತು. ಬ್ಯಾಂಕ್ ಅಧಿಕಾರಿಗಳ ಹೆಸರನ್ನೂ ಎಫ್‌ಐ–ಆರ್‌ನಲ್ಲಿ ಹೆಸರಿಸಲಾಗಿತ್ತು. ಅದಾದ ಮೇಲೆ ಪ್ರಕರಣದ ತನಿಖೆಯನ್ನು ಸರ್ಕಾರ ಎಸ್‌ಐಟಿಗೆ ವಹಿಸಿ ಆದೇಶಿಸಿತ್ತು.

ನಾಗೇಂದ್ರ ಆಪ್ತರ ಬಂಧನ: 'ಹಣ ವರ್ಗಾವಣೆಯಲ್ಲಿ ಬಿ.ನಾಗೇಂದ್ರ ಅವರ ಆಪ್ತ ನೆಕ್ಕಂಟಿ ನಾಗರಾಜ್ ಹಾಗೂ ಅವರ ಸಂಬಂಧಿ ನಾಗೇಶ್ವರ ರಾವ್ ಅವರನ್ನು ಎಸ್‌ಐಟಿ ಬಂಧಿಸಿತ್ತು. ವಿಚಾರಣೆ ವೇಳೆ ಅವರು ಬಹಿರಂಗಪಡಿಸಿರುವ ಮಾಹಿತಿಗಳನ್ನು ಆಧರಿಸಿ ವಿಚಾರಣೆಗೆ ಬರಲು ನಾಗೇಂದ್ರ ಅವರಿಗೆ ಸೂಚಿಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ನಾಗರಾಜ್ ಸೂಚನೆ ಮೇರೆಗೆ ಹಲವು ಖಾತೆಗಳಿಗೆ ಹಣ ವರ್ಗಾವಣೆ ಮಾಡಲಾಗಿತ್ತು. ನಿಗಮ ಹಾಗೂ ನಿಗಮದ ಅಧಿಕಾರಿಗಳ ಹೆಸರಿನ ನಕಲಿ ಮೊಹರು ಹಾಗೂ ದಾಖಲೆಗಳನ್ನು ನಾಗರಾಜ್, ನಾಗೇಶ್ವರ ರಾವ್ ಅವರೇ ಸೃಷ್ಟಿಸಿದ್ದರು ಎಂದು ತನಿಖೆಯಿಂದ ಗೊತ್ತಾಗಿತ್ತು.

ಅಧ್ಯಕ್ಷರ ಆಪ್ತನಿಗೆ ಹಣ ಸಂದಾಯ?: ಬಸನಗೌಡ ದದ್ದಲ್ ಅವರ ಆಪ್ತರೊಬ್ಬರಿಗೆ ಹಣ ಸಂದಾಯ ಆಗಿರುವುದಕ್ಕೆ ದಾಖಲೆಗಳು ಸಿಕ್ಕಿದ್ದು, ಆ ಮಾಹಿತಿ ಆಧರಿಸಿ ಅಧ್ಯಕ್ಷರನ್ನು ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ.

'ಅಧ್ಯಕ್ಷರ ಆಪ್ತನಿಗೆ ಬ್ಯಾಂಕ್ ಖಾತೆ ಅಥವಾ ಡಿಜಿಟಲ್ ಪೇಮೆಂಟ್ ಮೂಲಕ ಹಣ ಸಂದಾಯ ಆಗಿಲ್ಲ. ನಗದು ರೂಪದಲ್ಲಿ ಹಣ ಕೊಡಲಾಗಿದೆ. ಹೋಟೆಲ್ ಸೇರಿ ಹಲವು ಸ್ಥಳಗಳಲ್ಲಿದ್ದ ಸಿ.ಸಿ ಟಿವಿ ಕ್ಯಾಮೆರಾ ಪರಿಶೀಲಿಸಿ ಡಿವಿಆರ್ ಜಪ್ತಿ ಮಾಡಲಾಗಿದೆ' ಎಂದು ಎಸ್‌ಐಟಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ವಾಟ್ಸ್‌ಆ್ಯಪ್ ಚಾಟಿಂಗ್ ಸಾಕ್ಷ್ಯ: ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಜೆ.ಜಿ.ಪದ್ಮನಾಭ್ ಹಾಗೂ ಮಾಜಿ ಲೆಕ್ಕಾಧಿಕಾರಿ ಪರಶುರಾಮ ಎಂಬವರನ್ನೂ ಎಸ್‌ಐಟಿ ಬಂಧಿಸಿ ವಿಚಾರಣೆ ನಡೆಸಿದೆ. ಎಂಟನೇ ಆರೋಪಿ ಆಗಿರುವ ಪರಶುರಾಮ ಅವರು ಈ ಹಿಂದೆ ನ್ಯಾಯಾಲಯಕ್ಕೆ ಪ್ರಮಾಣಪತ್ರವನ್ನೂ ಸಲ್ಲಿಸಿದ್ದರು.

'ಮೊಬೈಲ್‌ನ ಸಂಪರ್ಕ ಪಟ್ಟಿಯಲ್ಲಿ ರುವ ಬಸನಗೌಡ ದದ್ದಲ್ ಹೆಸರು ಹಾಗೂ ಆರೋಪಿ ಮಧ್ಯೆ ವಾಟ್ಸ್ ಆ್ಯಪ್ ಚಾಟಿಂಗ್‌ಗಳನ್ನು ಪುರಾವೆ ಆಗಿ ಪರಿಗಣಿಸುವಂತೆ ತನಿಖಾಧಿ ಕಾರಿಗಳಿಗೆ ನಿರ್ದೇಶಿಸಬೇಕು' ಎಂದು ವಕೀಲರ ಮೂಲಕ ಪ್ರಮಾಣಪತ್ರ ಸಲ್ಲಿಕೆ ಮಾಡಲಾಗಿತ್ತು. ಈ ನಿಟ್ಟಿನಲ್ಲೂ ತನಿಖೆ ನಡೆಸಲಾಗಿದೆ. ಕೆಲವು ಮಹತ್ವದ ಸಾಕ್ಷ್ಯಗಳು ಲಭಿಸಿವೆ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಮಹುವಾ ವಿರುದ್ಧ ಎಫ್‌ಐಆರ್ ದಾಖಲಿಸಿ: ಎನ್‌ಸಿಡಬ್ಲ್ಯು

ನವದೆಹಲಿ (ಪಿಟಿಐ): ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಅಧ್ಯಕ್ಷೆ ರೇಖಾ ಶರ್ಮ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದಡಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆಯೋಗ ಒತ್ತಾಯಿಸಿದೆ.

ಉತ್ತರಪ್ರದೇಶದ ಹಾಥರಸ್‌ನಲ್ಲಿ ಭೀಕರ ಕಾಲ್ತುಳಿತ ಸಂಭವಿಸಿರುವ ಸ್ಥಳಕ್ಕೆ ಭೇಟಿ ನೀಡಿರುವ ವಿಡಿಯೊವನ್ನು ರೇಖಾ ಶರ್ಮ ಅವರು 'ಎಕ್ಸ್'ನಲ್ಲಿ ಹಂಚಿ ಕೊಂಡಿದ್ದರು. ಇದಕ್ಕೆ ಗುರುವಾರ ಪ್ರತಿಕ್ರಿಯಿಸಿದ್ದ ಟಿಎಂಸಿ, 'ರೇಖಾ ತನ್ನ ಬಾಸ್‌ನ ಪೈಜಾಮವನ್ನು ಹಿಡಿದುಕೊಳ್ಳು ವಲ್ಲೇ ನಿರತರಾಗಿದ್ದರು' ಎಂದು ಟೀಕಿಸಿತ್ತು.

'ಟಿಎಂಸಿಯ ಅಸಭ್ಯ ಮತ್ತು ಅತಿರೇಕದ ಹೇಳಿಕೆಗಳಿಂದ ಮಹಿಳೆಯ ಘನತೆಗೆ ಧಕ್ಕೆಯಾಗಿದೆ. ಭಾರತೀಯ ನ್ಯಾಯಸಂಹಿತೆ 2023ರ ಸೆಕ್ಷನ್ 79ರ ಅಡಿ ಅಪರಾಧವಾಗಿದೆ' ಎಂದು ತಿಳಿಸಿದೆ.

ಅಂಬಾನಿ ಪುತ್ರನ ಮದುವೆ: ಮುಂಬೈಗೆ ಬಂದ ಜಸ್ಟಿನ್ ಬೀಬರ್

ಮುಂಬೈ (ಪಿಟಿಐ): ಉದ್ಯಮಿ ಮುಖೇಶ್ ಅಂಬಾನಿ ಪುತ್ರ ಅನಂತ್ ಅಂಬಾನಿ ಅವರ ಮದುವೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಖ್ಯಾತ ಪಾಪ್ ಗಾಯಕ ಜಸ್ಟಿನ್ ಬೀಬರ್ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದು, ಶುಕ್ರವಾರ ಮುಂಬೈಗೆ ಬಂದಿಳಿದರು.

ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ ಅವರ ವಿವಾಹವು ಜುಲೈ 12ರಂದು ನಡೆಯಲಿದೆ. ಬೀಬರ್ ಜೊತೆ, ಅಂತರರಾಷ್ಟ್ರೀಯ ಮಟ್ಟದ ತಾರೆಯರಾದ ಅಡೆಲ್, ಡ್ರೇಕ್ ಮತ್ತು ಲಾನಾ ಡೆಲ್ ರೇ ಅವರೂ ಸಂಗೀತ ಕಾರ್ಯಕ್ರಮ ನಡೆಸಿ ಕೊಡಲಿದ್ದಾರೆ. ಮೂಲಗಳ ಪ್ರಕಾರ ಸಂಗೀತ ಕಾರ್ಯಕ್ರಮ ನೀಡಲು ಬೀಬರ್ ₹83 ಕೋಟಿ ಪಡೆದಿದ್ದಾರೆ.

ಸುದ್ದಿ 2 ನಿಮಿಷ

ಕಾಫಿ ಡೇ ಸಾಲ ಬಾಕಿ ₹433 ಕೋಟಿ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜೂನ್ ಅಂತ್ಯಕ್ಕೆ ಕಂಪನಿಯು ₹433.91 ಕೋಟಿ ಸಾಲವನ್ನು ಬಾಕಿ ಉಳಿಸಿಕೊಂಡಿದೆ ಎಂದು ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್ (ಸಿಡಿಇಎಲ್) ತಿಳಿಸಿದೆ.

ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ಮಾರ್ಪಡಿಸಲಾಗದ ಡಿಬೆಂಚರ್‌ಗಳು (ಎನ್‌ಸಿಡಿ) ಹಾಗೂ ನಾನ್ ಕನ್ವರ್ಟಬಲ್ ರೀಡಿಮಬಲ್ ಪ್ರೆಫರೆನ್ಸ್ ಷೇರುಗಳಲ್ಲಿ (ಎನ್‌ಸಿಆರ್‌ಪಿ ಎಸ್) ಇಷ್ಟು ಮೊತ್ತದ ಸಾಲ ಬಾಕಿ ಉಳಿದಿದೆ ಎಂದು ಮೊದಲ ತ್ರೈಮಾಸಿಕದ ಫಲಿತಾಂಶಕ್ಕೆ ಸಂಬಂಧಿಸಿದಂತೆ ಷೇರುಪೇಟೆಗೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಿದೆ.



'ಅಸಲು ಮತ್ತು ಬಡ್ಡಿ ಪಾವತಿ ವಿಳಂಬದಿಂದಾಗಿ ಸಾಲಗಾರರು ಕಂಪನಿಗೆ ನೋಟಿಸ್ ನೀಡಿದ್ದಾರೆ. ನ್ಯಾಯಾಲಯ–ಗಳಲ್ಲಿ ಈ ಕುರಿತು ವಿಚಾರಣೆ ನಡೆಯುತ್ತಿದೆ. ಕಾನೂನು ತೊಡಕು ಹಾಗೂ ಒಂದೇ ಬಾರಿಗೆ ಸಾಲ ಮರುಪಾವತಿಗೆ ಸಂಬಂಧಿಸಿದ ಪ್ರಕರಣಗಳು ಇತ್ಯರ್ಥಗೊಂಡಿಲ್ಲ. ಹಾಗಾಗಿ, 2021ರ ಏಪ್ರಿಲ್‌ನಿಂದ ಕಂಪನಿಯು ಬಾಕಿ ಸಾಲದ ಮೊತ್ತಕ್ಕೆ ಬಡ್ಡಿ ಸೇರ್ಪಡೆ ಮಾಡಿಲ್ಲ' ಎಂದು ತಿಳಿಸಿದೆ.

ಜೂನ್ ಅಂತ್ಯಕ್ಕೆ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಗೆ ಪಾವತಿಸಬೇಕಿರುವ ಸಾಲದ ಅಸಲು ಮೊತ್ತ 183.36 ಕೋಟಿ ಆಗಿದೆ. ಇದಕ್ಕೆ ₹5.78 ಕೋಟಿ ಬಡ್ಡಿ ಬಾಕಿ ಉಳಿದಿದೆ. ಎನ್‌ಸಿಡಿಗೆ ₹200 ಕೋಟಿ ಹಾಗೂ ಎನ್‌ಸಿಆರ್‌ಪಿಎಸ್‌ಗೆ ₹44.77 ಕೋಟಿ ಸಾಲ ಬಾಕಿಯಿದೆ ಎಂದು ಕಂಪನಿಯು ತಿಳಿಸಿದೆ.

ಪಾತ್ರೆಗೆ ಐಎಸ್‌ಐ ಗುರುತು ಕಡ್ಡಾಯ

ನವದೆಹಲಿ (ಪಿಟಿಐ): ಗೃಹ ಬಳಕೆಯ ಸ್ಟೈನ್‌ಲೆಸ್ ಸ್ಟೀಲ್ ಮತ್ತು ಅಲ್ಯೂಮಿನಿಯಂ ಪಾತ್ರೆಗಳ ಮೇಲೆ ಐಎಸ್‌ಐ ಗುರುತನ್ನು ಕಡ್ಡಾಯವಾಗಿ ನಮೂದಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

ಗ್ರಾಹಕರ ಸುರಕ್ಷತೆ ಮತ್ತು ವಸ್ತುಗಳ ಗುಣಮಟ್ಟ ಹೆಚ್ಚಿಸಲು ಸರ್ಕಾರ ಈ ಕ್ರಮಕೈಗೊಂಡಿದೆ ಎಂದು ಭಾರತೀಯ ಮಾನದಂಡ ಮಂಡಳಿಯು (ಬಿಐಎಸ್) ಶುಕ್ರವಾರ ತಿಳಿಸಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಧೀನದಲ್ಲಿ ಬರುವ ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು (ಡಿಪಿಐಐಟಿ) ಗುಣಮಟ್ಟ ನಿಯಂತ್ರಣ ಕುರಿತು ಮಾರ್ಚ್ 14ರಂದು ಆದೇಶ ಹೊರಡಿಸಿತ್ತು.

ಐಎಸ್‌ಐ ಗುರುತು ಇಲ್ಲದ ಸ್ಟೈನ್‌ಲೆಸ್ ಸ್ಟೀಲ್ ಮತ್ತು ಅಲ್ಯೂಮಿನಿಯಂ ಪಾತ್ರೆಗಳ ತಯಾರಿಕೆ, ಆಮದು, ಮಾರಾಟ, ವಿತರಣೆ, ಸಂಗ್ರಹಣೆ ಅಥವಾ ಮಾರಾಟ ಪ್ರದರ್ಶನವನ್ನು ನಿಷೇಧಿಸಲಾಗಿದೆ. ಈ ಆದೇಶ ಉಲ್ಲಂಘಿಸಿದರೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ.

ಗುಣಮಟ್ಟದ ನಿರ್ವಹಣೆಗಾಗಿ ಸ್ಟೈನ್‌ಲೆಸ್ ಸ್ಟೀಲ್ ವಸ್ತುಗಳಿಗೆ ಐಎಸ್‌14756:2022 ಮತ್ತು ಅಲ್ಯೂಮಿನಿಯಂ ಪಾತ್ರೆಗಳಿಗೆ ಐಎಸ್‌1660:2024 ಪ್ರಮಾಣ ಪತ್ರ ಪಡೆಯಬೇಕಿದೆ. ಈ ಮಾನದಂಡವು ಗ್ರಾಹಕರ ವಿಶ್ವಾಸವನ್ನು ಹೆಚ್ಚಿಸಲಿದೆ ಎಂದು ಹೇಳಿದೆ.

ಗ್ರೂಪ್‌ಎಂ ಸಿಒಒ ಆಗಿ ಅಶ್ವಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಬ್ಲ್ಯುಪಿಪಿ ಮೀಡಿಯಾ ಇನ್‌ವೆಸ್ಟ್‌ಮೆಂಟ್ ಗ್ರೂಪ್‌ನ 'ಗ್ರೂಪ್‌ಎಂ' ಕಂಪನಿಯ ದಕ್ಷಿಣ ಏಷ್ಯಾದ ಸಿಒಒ ಆಗಿ ಅಶ್ವಿನ್ ಪದ್ಮನಾಭನ್ ಅವರನ್ನು ನೇಮಕ ಮಾಡಲಾಗಿದೆ.

ಅಶ್ವಿನ್ ಅವರು ಕಂಪನಿಯ ಹೂಡಿಕೆ, ವ್ಯಾಪಾರ, ಪಾಲುದಾರಿಕೆ, ಮಾರ್ಕೆಟಿಂಗ್ ಸೇರಿ ವಿವಿಧ ವಿಷಯಗಳ ಮೇಲ್ವಿಚಾರಣೆ ನಡೆಸಲಿದ್ದಾರೆ. ಗ್ರೂಪ್‌ಎಂನ ವೈವಿಧ್ಯಮಯ ಸೇವೆಗಳನ್ನು ಒಗ್ಗೂಡಿಸಲಿದ್ದಾರೆ ಎಂದು ಕಂಪನಿ ತಿಳಿಸಿದೆ.

ಅಶ್ವಿನ್ ಅವರು ಗ್ರೂಪ್‌ಎಂನ ದಕ್ಷಿಣ ಏಷ್ಯಾದ ಸಿಇಒ ಪ್ರಶಾಂತ್ ಕುಮಾರ್ ಅವರ ಬಳಿ ವರದಿ ಮಾಡಿಕೊಳ್ಳಲಿದ್ದಾರೆ.



ಅಶ್ವಿನ್ ಪದ್ಮನಾಭನ್

'ಅಶ್ವಿನ್ ಅವರು ಗ್ರಾಹಕರ ಅಗತ್ಯತೆ ಮತ್ತು ಉದ್ಯಮದ ಸ್ಥಿತಿಗತಿಯನ್ನು ಅರ್ಥೈಸಿಕೊಂಡಿದ್ದಾರೆ. ಉದ್ಯಮದ ಬಗ್ಗೆ ಅವರಿಗೆ ಆಳವಾದ ಜ್ಞಾನವಿದೆ' ಎಂದು ಸಿಇಒ ಪ್ರಶಾಂತ್ ಕುಮಾರ್ ಹೇಳಿದ್ದಾರೆ.

'ಗ್ರಾಹಕರು ತಮ್ಮ ವಹಿವಾಟಿನ ಹೆಚ್ಚಳಕ್ಕೆ ಎದುರು ನೋಡುತ್ತಿದ್ದಾರೆ. ಅವರ ಹಿತಾಸಕ್ತಿಗೆ ಅನುಗುಣವಾಗಿ ಕಂಪನಿಯು ಸಹಕರಿಸಲಿದೆ. ಕಂಪನಿಯ ಬ್ರ್ಯಾಂಡ್‌ನ ಯಶಸ್ಸಿಗೆ ಶ್ರಮಿಸುತ್ತೇನೆ' ಎಂದು ಅಶ್ವಿನ್ ಪದ್ಮನಾಭನ್ ತಿಳಿಸಿದ್ದಾರೆ.

ವಾರದಲ್ಲಿ ಸೆನ್ಸೆಕ್ಸ್ 963 ಅಂಶ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ.



21 ಅಂಶ ಏರಿಕೆ ಕಂಡು 24,323 ಅಂಶಗಳಲ್ಲಿ ಸ್ಥಿರಗೊಂಡಿತು. ನಿಫ್ಟಿ 50ರ ಗುಚ್ಛದ ಪೈಕಿ 34 ಕಂಪನಿಗಳ ಷೇರಿನ ಮೌಲ್ಯ ಏರಿಕೆ ಕಂಡಿದೆ. 16 ಕಂಪನಿಗಳ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ 53 ಅಂಶ ಇಳಿಕೆ ಕಂಡು 79,996 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು.


ಒಂದು ವಾರದಲ್ಲಿ ಸೆನ್ಸೆಕ್ಸ್ 963 ಅಂಶ (ಶೇ 1.21ರಷ್ಟು) ಹಾಗೂ ನಿಫ್ಟಿ 313 ಅಂಶ ಏರಿಕೆ ಕಂಡಿದೆ.

'ಆರಂಭಿಕ ವಹಿವಾಟಿನಿಂದಲೂ ಇಳಿಕೆ ದಾಖಲಿಸಿದ್ದ ನಿಫ್ಟಿ ವಹಿವಾಟಿನ ಅಂತ್ಯದಲ್ಲಿ ಏರಿಕೆ ಕಂಡಿತು' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ರಿಟೇಲ್ ವಿಭಾಗದ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕಾ ಹೇಳಿದ್ದಾರೆ.

ರಿಲಯನ್ಸ್ ಇಂಡಸ್ಟ್ರಿಸ್ ಷೇರಿನ ಮೌಲ್ಯ ಶೇ 3ರಷ್ಟು ಹಾಗೂ ರೇಮಂಡ್ ಕಂಪನಿಯ ಷೇರಿನ ಮೌಲ್ಯದಲ್ಲಿ ಶೇ 10ರಷ್ಟು ಏರಿಕೆಯಾಗಿದೆ.

ನೇಪಾಳ: 12ರಂದು ವಿಶ್ವಾಸಮತ ಯಾಚನೆ

ಕಠ್ಮಂಡು (ಪಿಟಿಐ): ಪ್ರಮುಖ ಮಿತ್ರ ಪಕ್ಷಗಳು ಬೆಂಬಲ ವಾಪಸ್ ಪಡೆದಿರುವ ಬೆನ್ನಲ್ಲೇ ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ 'ಪ್ರಚಂಡ' ಅವರು ಜುಲೈ 12ರಂದು ವಿಶ್ವಾಸಮತ ಯಾಚಿಸಲಿದ್ದಾರೆ.



ಪುಷ್ಪ ಕಮಲ್ ದಹಲ್

ವಿಶ್ವಾಸಮತ ಯಾಚನೆ ಪ್ರಕ್ರಿಯೆಗೆ ಸಿದ್ಧತೆ ನಡೆಸುವಂತೆ ಸಚಿವಾಲಯಕ್ಕೆ ಪ್ರಧಾನಿ ಪತ್ರ ಬರೆದಿದ್ದಾರೆ ಎಂದು ಸ್ಥಳೀಯ ಮಾಧ್ಯಮವೊಂದು ವರದಿ ಮಾಡಿದೆ.

ಪ್ರಚಂಡ ಸರ್ಕಾರದ ಭಾಗವಾಗಿದ್ದ ಕೆ.ಪಿ ಶರ್ಮ ಒಲಿ ನೇತೃತ್ವದ ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ್–ಯುನಿಫೈಡ್ ಮಾರ್ಕ್ಸಿಸ್ಟ್ ಲೆನಿನಿಸ್ಟ್ (ಸಿಪಿಎನ್–ಯುಎಮ್‌ಎಲ್) ಪಕ್ಷವು ಶೇರ್ ಬಹದ್ದೂರ್ ದೇವುಬಾ ಅವರ ಅಧ್ಯಕ್ಷತೆಯ ನೇಪಾಳಿ ಕಾಂಗ್ರೆಸ್‌ನೊಂದಿಗೆ ಸೇರಿ ಹೊಸ ಮೈತ್ರಿ ಸರ್ಕಾರ ರಚನೆಗೆ ಮುಂದಾಗಿರುವುದರಿಂದ ಪ್ರಚಂಡ ಸರ್ಕಾರಕ್ಕೆ ಸಂಕಷ್ಟ ಎದುರಾಗಿದೆ.

ತಮ್ಮ ಸಂಪುಟದ 8 ಸಚಿವರು ರಾಜೀನಾಮೆ ನೀಡಿದ ಬಳಿಕವೂ 'ಪ್ರಚಂಡ' ಅವರು,'ವಿಶ್ವಾಸಮತ ಯಾಚನೆ ಮಾಡದೇ ರಾಜೀನಾಮೆ ನೀಡುವುದಿಲ್ಲ' ಎಂದು ಹೇಳಿದ್ದಾರೆ.

ನೇಪಾಳ ಸಂಸತ್ತಿನ 275 ಸ್ಥಾನಗಳಲ್ಲಿ ದೊಡ್ಡ ಪಕ್ಷವಾಗಿರುವ ನೇಪಾಳಿ ಕಾಂಗ್ರೆಸ್ 89 ಸ್ಥಾನಗಳನ್ನು ಹೊಂದಿದ್ದು, ಸಿಪಿಎನ್–ಯುಎಮ್‌ಎಲ್‌ಗೆ 78 ಸ್ಥಾನಗಳಿವೆ. ಪ್ರಚಂಡ ನೇತೃತ್ವದ ಕಮ್ಯುನಿಸ್ಟ್ ಪಾರ್ಟಿ ಆಫ್ – ಮಾವೋವಾದಿ ಕೇಂದ್ರಿತ (ಸಿಪಿಎನ್–ಎಮ್‌ಸಿ) ಪಕ್ಷ 32 ಸ್ಥಾನಗಳನ್ನು ಹೊಂದಿದೆ.

ಸರ್ಕಾರ ಉಳಿಸಿಕೊಳ್ಳಲು ಪ್ರಚಂಡ ಅವರಿಗೆ ಕನಿಷ್ಠ 138 ಸದಸ್ಯರ ಬೆಂಬಲದ ಅಗತ್ಯವಿದೆ. 10 ಸಂಸದರನ್ನು ಹೊಂದಿರುವ ಸಿಪಿಎನ್– ಯುನಿಫೈಡ್ ಸೋಷಿಯಲಿಸ್ಟ್ ಪಕ್ಷವು ಪ್ರಚಂಡ ಅವರಿಗೆ ಬೆಂಬಲ ನೀಡುವುದಾಗಿ ಘೋಷಿಸಿದೆ. ಒಂದು ವರ್ಷ ಆರು ತಿಂಗಳ ಅಧಿಕಾರ ಅವಧಿಯಲ್ಲಿ ಪ್ರಚಂಡ ಅವರು 5ನೇ ಬಾರಿಗೆ ವಿಶ್ವಾಸಮತ ಯಾಚನೆ ಮಾಡಲಿದ್ದಾರೆ. ಅಸ್ಥಿರ ರಾಜಕೀಯ ವ್ಯವಸ್ಥೆ ಹೊಂದಿರುವ ನೇಪಾಳದಲ್ಲಿ 16 ವರ್ಷಗಳಲ್ಲಿ 13 ಸರ್ಕಾರಗಳು ರಚನೆಯಾಗಿವೆ.

ಮಾನವಹಕ್ಕುಗಳ ವಕೀಲ ಈಗ ಪ್ರಧಾನಿ

ಲಂಡನ್(ಪಿಟಿಐ): ವೃತ್ತಿಯಿಂದ ವಕೀಲರಾಗಿದ್ದ ಕೀರ್ ಸ್ಟಾರ್ಮರ್, ಮಾನವ ಹಕ್ಕುಗಳಿಗಾಗಿ ನಡೆಸಿದ ಹೋರಾಟಗಳಿಂದಾಗಿ ಪ್ರಸಿದ್ಧ. ತಮ್ಮ ಹೋರಾಟಗಳ ಮೂಲಕವೇ ರಾಜಕೀಯ ಪ್ರವೇಶಿಸಿದ ಕೀರ್, ಲೇಬರ್ ಪಕ್ಷದ ನಾಯಕರಾಗಿ ಹೊರಹೊಮ್ಮಿದರು. ಪಕ್ಷವನ್ನು ಪುನರ್ ಸಂಘಟಿಸಿ, ಈಗ ಪ್ರಧಾನಿ ಪಟ್ಟಕ್ಕೇರಿದ್ದಾರೆ.


ಕೀರ್ ಸ್ಟಾರ್ಮರ್

ಕಾನೂನು ಮತ್ತು ಕ್ರಿಮಿನಲ್ ನ್ಯಾಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಳಿಗಾಗಿ ಕೀರ್ ಅವರು ರಾಣಿ 2ನೇ ಎಲಿಜಬೆತ್ ಅವರಿಂದ ನೈಟ್ ಪದವಿ ಪಡೆದಿದ್ದಾರೆ. 2015ರಲ್ಲಿ ಮೊದಲ ಬಾರಿಗೆ ಲೇಬರ್ ಪಕ್ಷದಿಂದ ಸ್ಪರ್ಧಿಸಿ, ಸಂಸತ್‌ಗೆ ಆಯ್ಕೆಯಾಗಿದ್ದರು.

2019ರಲ್ಲಿ ನಡೆದ ಚುನಾವಣೆಯಲ್ಲಿ ಹೀನಾಯವಾಗಿ ಸೋತ ಪಕ್ಷದ ಚುಕ್ಕಾಣಿ ಹಿಡಿದ ಕೀರ್, ತಳಮಟ್ಟದಿಂದ ಪಕ್ಷವನ್ನು ಮತ್ತೆ ಸಂಘಟಿಸಿ, ಗೆಲುವಿನ ದಡ ಮುಟ್ಟಿಸಿದ್ದಾರೆ. ಬ್ರೆಕ್ಸಿಟ್‌ನ ಕಡು ವಿರೋಧಿಯಾದ ಕೀರ್, ಈ ವಿಚಾರವಾಗಿ ಹೋರಾಟ ನಡೆಸಿದ್ದರು.

ಕೀರ್ ಸ್ಟಾರ್ಮರ್ ಲಂಡನ್‌ನಲ್ಲಿ ಜನಿಸಿದ್ದಾರೆ. ತಂದೆ ರಾಡ್ನಿ ಅವರು ಟೂಲ್ ಮೇಕರ್ ಆಗಿದ್ದರೆ, ತಾಯಿ ಜೋಸೆಫೈನ್ ನರ್ಸ್ ಆಗಿದ್ದರು. ತಾಯಿ ಜೋಸೆಫೈನ್, ಅನಾರೋಗ್ಯದಿಂದಾಗಿ 2015ರಲ್ಲಿ ಮೃತಪಟ್ಟರು.

ಸರ್ರೆಯಲ್ಲಿರುವ ಆಕ್ಸ್‌ಟೆಡ್ ಪಟ್ಟಣದಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಕಾನೂನಿನಲ್ಲಿ ಪದವಿ ಪಡೆದಿದ್ದಾರೆ. ಪದವಿ ನಂತರ 'ಪಬ್ಲಿಕ್ ಪ್ರಾಸಿಕ್ಯೂಷನ್ಸ್'ನ ನಿರ್ದೇಶಕರಾಗಿ ವೃತ್ತಿ ಆರಂಭಿಸಿದರು.

ಪತ್ನಿ ವಿಕ್ಟೋರಿಯಾ ಅವರು ರಾಷ್ಟ್ರೀಯ ಆರೋಗ್ಯ ಸೇವೆಯಲ್ಲಿ ಉದ್ಯೋಗಿಯಾಗಿದ್ದಾರೆ. ಕೀರ್ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ.

'ಕಾರ್ಖಾನೆಯೊಂದರಲ್ಲಿ ಉದ್ಯೋಗಿಯಾಗಿದ್ದ ನನ್ನ ತಂದೆಯನ್ನು ಸಾಕಷ್ಟು ಅವಮಾನಿಸಲಾಯಿತು. ಅವಮಾನ ಸಹಿಸದೇ ಅವರು ಕಂಪನಿಯನ್ನು ತೊರೆದರು. ಅವರಿಗೆ ಅಗೌರವ ತೋರುತ್ತಿದ್ದುದನ್ನು ನಾನು ಮರೆತಿಲ್ಲ' ಎಂದು ಇತ್ತೀಚೆಗೆ ಸಂಡೆ ಟೈಮ್ಸ್‌ಗೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು.

'ತಂದೆ ಅನುಭವಿಸಿದ ಅವಮಾನವನ್ನು ನಾನು ನೋಡಿದ್ದೇನೆ. ಯಾವ ವ್ಯಕ್ತಿಯನ್ನೂ ನಾನು ಅಗೌರವದಿಂದ ಕಾಣದೇ ಇರುವುದಕ್ಕೆ ಇದೂ ಒಂದು ಕಾರಣ' ಎಂದು ಹೇಳಿದ್ದರು.

ಬ್ರಿಟನ್ ಸಂಸತ್ ಪ್ರವೇಶಿಸಿದ ಮಲಯಾಳಿ

ಪ್ರಜಾವಾಣಿ ವಾರ್ತೆ


ಸೋಜನ್ ಜೋಸೆಫ್

ತಿರುವನಂತಪುರ: ಬ್ರಿಟನ್ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಲೇಬರ್ ಪಾರ್ಟಿ ಜಯಭೇರಿ ಬಾರಿಸಿದ ಬೆನ್ನಲ್ಲೇ ಕೇರಳದ ಕೋಟಯಂ ಜಿಲ್ಲೆಯ ಕುಟುಂಬವೊಂದರಲ್ಲಿ ಸಂಭ್ರಮಾಚರಣೆ ಮುಗಿಲುಮುಟ್ಟಿದೆ.

ಲೇಬರ್ ಪಾರ್ಟಿಯ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿದಿದ್ದ ಈ ಕುಟುಂಬದ ಸೋಜನ್ ಜೋಸೆಫ್ ಚುನಾವಣೆಯಲ್ಲಿ ಜಯಗಳಿಸಿದ್ದು ಬ್ರಿಟನ್ ಸಂಸತ್ತು ಪ್ರವೇಶಿಸಿದ್ದ ಮಲಯಾಳಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ.

ಇವರು ಕೆಂಟ್‌ನ ಆ್ಯಷ್‌ಫೋರ್ಡ್ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಮೂಲತಃ ಕೋಟಯಂ ಜಿಲ್ಲೆಯ ಎಟ್ಟುಮಾನೂರ್ ಪಟ್ಟಣ ಸಮೀಪದ ಓಣಂತುರುತ್ತು ಗ್ರಾಮದ ನಿವಾಸಿ. ಮಗನ ಗೆಲುವು, ಸೋಜನ್ ಅವರ ತಂದೆ, 86 ವರ್ಷ ವಯಸ್ಸಿನ ಸಿ.ಟಿ.ಜೋಸೆಫ್ ಅವರ ಖುಷಿಯನ್ನು ಇಮ್ಮಡಿಗೊಳಿಸಿದೆ.46 ವರ್ಷ ವಯಸ್ಸಿನ ಸೋಜನ್ ಅವರು ಡೇಮಿಯನ್ ಗ್ರೀನ್ ಅವರನ್ನು ಪರಾಭವಗೊಳಿಸಿದ್ದಾರೆ. ತೆರೇಸಾ ಮೇ ಸರ್ಕಾರದಲ್ಲಿ ಡೇಮಿಯನ್ ಸಚಿವರಾಗಿದ್ದವರು.

'ಫಲಿತಾಂಶ ಹೊರಬಿದ್ದ ಹಿಂದೆಯೇ ಸೋಜನ್ ಕರೆ ಮಾಡಿದ್ದರು. ಆತನ ಗೆಲುವು ನಮಗೆ ಹೆಚ್ಚಿನ ಖುಷಿಯನ್ನು ನೀಡಿದೆ' ಎಂದು ಸೋಜನ್ ಅವರ ಬಾಮೈದುನ ಜೋ ಪಲತ್ತುಂಕಲ್ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸೋಜನ್ ಅವರು ಬೆಂಗಳೂರಿನ ಡಾ.ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಕಾಲೇಜಿನಲ್ಲಿ ನರ್ಸಿಂಗ್ ಶಿಕ್ಷಣವನ್ನು ಪೂರ್ಣಗೊಳಿಸಿದ್ದರು.

'ಭಾರತದ ಜತೆ ಪಾಲುದಾರಿಕೆಗೆ ಒಲವು'

ಲಂಡನ್(ಪಿಟಿಐ): 'ದೇಶದಲ್ಲಿನ ಭಾರತೀಯ ಸಮುದಾಯದೊಂದಿಗೆ ಉತ್ತಮ ಸಂಬಂಧ ಹಾಗೂ ಭಾರತದೊಂದಿಗಿನ ಹೊಸ ಕಾರ್ಯತಂತ್ರದ ಪಾಲುದಾರಿಕೆಯನ್ನು ಮುಂದುವರಿಸಲು ಶ್ರಮಿಸುವೆ' ಎಂದು ಬ್ರಿಟನ್‌ನ ನೂತನ ಪ್ರಧಾನಿ ಕೀರ್ ಸ್ಟಾರ್ಮರ್ ಶುಕ್ರವಾರ ಹೇಳಿದ್ದಾರೆ.

ಚುನಾವಣೆಯಲ್ಲಿ ವಿಜೇತರಾದ ನಂತರ ಹಮ್ಮಿಕೊಂಡಿದ್ದ ವಿಜಯೋತ್ಸವದಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ 61 ವರ್ಷದ ಸ್ಟಾರ್ಮರ್, 'ಬದಲಾವಣೆ ಈಗ ಶುರುವಾಗಿದೆ' ಎಂದು ಘೋಷಿಸಿದರು.

'ಭಾರತದೊಂದಿಗಿನ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸಹಿ ಹಾಕುವ ಜೊತೆಗೆ ಜಾಗತಿಕ ಭದ್ರತೆ, ಹವಾಮಾನ ಹಾಗೂ ಆರ್ಥಿಕ ಭದ್ರತೆಗೆ ಸಂಬಂಧಿಸಿ ಭಾರತದೊಂದಿಗೆ ಹೊಸ ಪಾಲುದಾರಿಕೆಗೆ ಲೇಬರ್ ಪಕ್ಷ ನೇತೃತ್ವದ ಸರ್ಕಾರ ಒತ್ತು ನೀಡಲಿದೆ' ಎಂದು ಹೇಳಿದ್ದಾರೆ.

ಬ್ರಿಟನ್: ಕೀರ್ ಸ್ಟಾರ್ಮರ್‌ಗೆ ಪಟ್ಟ

ಒಂದನೇ ಪುಟದಿಂದ...

ಶುಕ್ರವಾರ ಮಧ್ಯಾಹ್ನ ಬಕಿಂಗ್‌ಹ್ಯಾಂ ಅರಮನೆಯಲ್ಲಿ ಕಿಂಗ್ ಚಾರ್ಲ್ಸ್–3 ಅವರನ್ನು ಭೇಟಿಯಾದರು. ಸ್ಟಾರ್ಮರ್ ಅವರು ಬ್ರಿಟನ್ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ ಎಂದು ಚಾರ್ಲ್ಸ್, ಅಧಿಕೃತವಾಗಿ ಘೋಷಿಸಿದರು.

ಪ್ರಧಾನಿಯಾಗಿ ಆಯ್ಕೆಯಾದ ಬಳಿಕ ತಮ್ಮ ಮೊದಲ ಭಾಷಣ ಮಾಡಿದ ಸ್ಟಾರ್ಮರ್, ದೇಶವನ್ನು 'ಮರು ನಿರ್ಮಾಣ' ಮಾಡುವ ಪ್ರತಿಜ್ಞೆ ಕೈಗೊಂಡರು. 'ನೀವು ನಮಗೆ ಸ್ಪಷ್ಟ ಬಹುಮತ ನೀಡಿದ್ದೀರಿ. ನಮ್ಮ ದೇಶವನ್ನು ಒಗ್ಗೂಡಿಸಲು ಮತ್ತು ಬದಲಾವಣೆಯನ್ನು ತರಲು ಈ ಅವಕಾಶವನ್ನು ಬಳಸಿಕೊಳ್ಳುತ್ತೇವೆ' ಎಂದು ಹೇಳಿದರು. ಸ್ಟಾರ್ಮರ್ ಅವರು ಲಂಡನ್‌ನ ಹೋಬನ್ ಆ್ಯಂಡ್ ಸೇಂಟ್ ಪ್ಯಾಂಕ್ರಸ್ ಕ್ಷೇತ್ರದಿಂದ 18,884 ಮತಗಳಿಂದ ಗೆದ್ದರು.

ಬ್ರಿಟನ್‌ನಲ್ಲಿ ಪ್ರಧಾನಿ ಹುದ್ದೆಗೇರಿದ ಭಾರತ ಮೂಲದ ಮೊದಲ ವ್ಯಕ್ತಿ ಎನಿಸಿಕೊಂಡಿರುವ ಸುನಕ್ ಅವರು ಉತ್ತರ ಇಂಗ್ಲೆಂಡ್‌ನ ರಿಚ್ಮಂಡ್ ಆ್ಯಂಡ್ ನಾರ್ಥ್‌ಅಲರ್ಟನ್ ಕ್ಷೇತ್ರವನ್ನು ತಮ್ಮಲ್ಲೇ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಅವರು 23,059 ಮತಗಳಿಂದ ಎದುರಾಳಿಯನ್ನು ಮಣಿಸಿದರು. ಆದರೆ ತಮ್ಮ ಪಕ್ಷವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರುವಲ್ಲಿ ಎಡವಿದರು. ಕನ್ಸರ್ವೇಟಿವ್ ಪಕ್ಷದ 14 ವರ್ಷಗಳ ಆಡಳಿತಕ್ಕೆ ಬ್ರಿಟನ್ ಮತದಾರರು ಅಂತ್ಯ ಹಾಡಿದರು.

ಸೋಲಿನ ಬೆನ್ನಲ್ಲೇ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ 44 ವರ್ಷದ ಸುನಕ್, ಕನ್ಸರ್ವೇಟಿವ್ ಪಕ್ಷದ ನಾಯಕನ ಸ್ಥಾನವನ್ನು ತ್ಯಜಿಸುವುದಾಗಿಯೂ ಹೇಳಿದರು.

'ಲೇಬರ್ ಪಕ್ಷ ಈ ಚುನಾವಣೆಯಲ್ಲಿ ಗೆದ್ದಿದೆ. ಕೀರ್ ಸ್ಟಾರ್ಮರ್ ಅವರಿಗೆ ಅಭಿನಂದನೆ ಸಲ್ಲಿಸಿದ್ದೇನೆ. ಅಧಿಕಾರವು ಲೇಬರ್ ಪಕ್ಷಕ್ಕೆ ಹಸ್ತಾಂತರವಾಗುತ್ತಿದ್ದು, ಈ ಪ್ರಕ್ರಿಯೆ ಸುಗಮವಾಗಿ ನಡೆಯಲಿದೆ' ಎಂದು ಅವರು ವಿದಾಯ ಭಾಷಣದಲ್ಲಿ ಹೇಳಿದರು. ಪತ್ನಿ ಅಕ್ಷತಾ ಮೂರ್ತಿ ಈ ವೇಳೆ ಜತೆಗಿದ್ದರು.

'ನಿರಂತರ ಬೆಂಬಲ ನೀಡಿದ್ದಕ್ಕಾಗಿ ರಿಚ್ಮಂಡ್ ಆ್ಯಂಡ್ ನಾರ್ಥ್ ಅಲರ್ಟನ್ ಕ್ಷೇತ್ರದ ಜನರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಒಂದು ದಶಕದ ಹಿಂದೆ ಇಲ್ಲಿಗೆ ಸ್ಥಳಾಂತರಗೊಂಡ ದಿನ ದಿಂದಲೂ ನೀವು ನನ್ನನ್ನು ಕುಟುಂಬದ ಸದಸ್ಯನಂತೆಯೇ ನೋಡಿಕೊಂಡಿದ್ದೀರಿ. ಮುಂಬರುವ ದಿನಗಳಲ್ಲಿ ನಿಮಗಾಗಿ ಕೆಲಸ ಮಾಡುವುದನ್ನು ಎದುರು ನೋಡುತ್ತಿದ್ದೇನೆ' ಎಂದು ತಮ್ಮ ಕ್ಷೇತ್ರದ ಜನರಿಗೆ ಭರವಸೆ ನೀಡಿದರು.

ಪ್ರಮುಖರಿಗೆ ಸೋಲು: ಕನ್ಸರ್ವೇಟಿಕ್ ಪಕ್ಷದ ಹಿರಿಯ ಮುಖಂಡರಾಗಿರುವ 12 ಸಚಿವರು ಸೋತಿದ್ದಾರೆ.


ಬ್ರಿಟನ್‌ನ ನೂತನ ಪ್ರಧಾನಿಯಾಗಿ ಕೀರ್ ಸ್ಟಾರ್ಮರ್ ಶುಕ್ರವಾರ ಆಯ್ಕೆಯಾದ ಬಳಿಕ ಅವರ ಕಚೇರಿ ಲಂಡನ್‌ನ ಡೌನಿಂಗ್ ಸ್ಟ್ರೀಟ್‌ನಲ್ಲಿ ಲೇಬರ್ ಪಕ್ಷದ ಬೆಂಬಲಿಗರು ರಾಷ್ಟ್ರಧ್ವಜ ಬೀಸಿ ಬೆಂಬಲ ಸೂಚಿಸಿದರು– ಎಎಫ್‌ಪಿ ಚಿತ್ರ

ಪ್ರಮುಖ ಅಂಶಗಳು

- ಕನ್ಸರ್ವೇಟಿವ್ ಪಕ್ಷದ 14 ವರ್ಷಗಳ ಆಡಳಿತಕ್ಕೆ ತೆರೆ
- ಲೇಬರ್ ಪಕ್ಷಕ್ಕೆ ಅಭೂತಪೂರ್ವ ಗೆಲುವು
- 1834ರಲ್ಲಿ ಸ್ಥಾಪನೆಯಾಗಿರುವ ಕನ್ಸರ್ವೇಟಿವ್ ಪಕ್ಷ ಅತ್ಯಂತ ಕಡಿಮೆ ಸ್ಥಾನಗಳನ್ನು ಪಡೆದಿರುವುದು ಇದೇ ಮೊದಲು
- ಸಂಸತ್ತಿಗೆ ಮೊದಲ ಬಾರಿ ಆಯ್ಕೆಯಾದವರ ಸಂಖ್ಯೆ 300ಕ್ಕೂ ಅಧಿಕ
- ಗಾಜಾ ಪರ ಒಲವು ಹೊಂದಿರುವ ಪಕ್ಷೇತರ ಅಭ್ಯರ್ಥಿಗಳಿಗೆ ಗೆಲುವು

ಭಾರತ ಮೂಲದ 26 ಮಂದಿ ಆಯ್ಕೆ

ಬ್ರಿಟನ್ ಸಂಸತ್ತಿಗೆ ಈ ಬಾರಿ ಭಾರತ ಮೂಲದ 26 ಮಂದಿ ಆಯ್ಕೆಯಾಗಿದ್ದು, ಹೊಸ ಚರಿತ್ರೆ ನಿರ್ಮಾಣವಾಗಿದೆ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಭಾರತ ಮೂಲದ 19 ಮಂದಿ ಗೆದ್ದಿದ್ದರು. ರಿಷಿ ಸುನಕ್ ಅವರು ಯಾರ್ಕ್‌ಷೈರ್‌ನ ರಿಚ್ಮಂಡ್ ಆ್ಯಂಡ್ ನಾರ್ಥ್‌ಅಲರ್ಟನ್ ಕ್ಷೇತ್ರವನ್ನು ತಮ್ಮಲ್ಲೇ ಉಳಿಸಿಕೊಂಡಿದ್ದಾರೆ.

ಸುನಕ್ ಅಲ್ಲದೆ ಕನ್ಸರ್ವೇಟಿವ್ ಪಕ್ಷದಿಂದ ಕಣಕ್ಕಿಳಿದಿದ್ದ ಭಾರತ ಮೂಲದ ಸುಯೆಲ್ಲಾ ಬ್ರೆವರ್‌ಮನ್, ಪ್ರೀತಿ ಪಟೇಲ್, ಕ್ಲೈರ್ ಕುಟಿನೊ, ಗಗನ್ ಮೊಹೀಂದ್ರಾ ಮತ್ತು ಶಿವಾನಿ ರಾಜಾ ಅವರೂ ತಮ್ಮ ಕ್ಷೇತ್ರಗಳನ್ನು ಉಳಿಸಿಕೊಂಡಿದ್ದಾರೆ. ಆದರೆ ಶೈಲೇಶ್ ವರ ಮತ್ತು ಅಮಿತ್ ಜೋಗಿಯಾ ಅವರಿಗೆ ಸೋಲು ಎದುರಾಗಿದೆ.

> **ನೀವು ಮಾಡಿದ ಪ್ರಚಾರ, ಹೋರಾಟದಿಂದ ನಾವು ಗೆದ್ದಿದ್ದೇವೆ. ಬದಲಾವಣೆ ಇಲ್ಲಿಂದಲೇ ಆರಂಭವಾಗಲಿದೆ. ಇಂತಹ ಗೆಲುವು ನಮ್ಮ ಮೇಲಿನ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ**
> **ಕೀರ್ ಸ್ಟಾರ್ಮರ್,** ಬ್ರಿಟನ್‌ನ ನೂತನ ಪ್ರಧಾನಿ

> **ಎಲ್ಲ ಕ್ಷೇತ್ರಗಳಲ್ಲೂ ಭಾರತ ಮತ್ತು ಬ್ರಿಟನ್ ನಡುವಣ ಪಾಲುದಾರಿಕೆಯನ್ನು ಇನ್ನಷ್ಟು ಬಲಪಡಿಸಲು ಸಕಾರಾತ್ಮಕ ಹಾಗೂ ರಚನಾತ್ಮಕ ಸಹಯೋಗವನ್ನು ಎದುರು ನೋಡುತ್ತಿದ್ದೇನೆ**
> **ನರೇಂದ್ರ ಮೋದಿ,** ಪ್ರಧಾನಿ

> **ಅಧಿಕಾರದಲ್ಲಿದ್ದಾಗ ನನ್ನ ಕೈಲಾದಷ್ಟು ಕೆಲಸ ಮಾಡಿದ್ದೇನೆ. ಆದರೆ ಮತದಾರರು ಬದಲಾವಣೆ ಬಯಸಿದ್ದು, ನಿಮ್ಮ ತೀರ್ಪು ಮುಖ್ಯವಾಗಿದೆ. ಸೋಲಿನ ಹೊಣೆ ನಾನೇ ಹೊರುತ್ತೇನೆ. ನನ್ನನ್ನು ಕ್ಷಮಿಸಿ**
> **ರಿಷಿ ಸುನಕ್,** ಬ್ರಿಟನ್‌ನ ನಿರ್ಗಮಿತ ಪ್ರಧಾನಿ

ಕೆನಡಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಕ್ವಾರ್ಟರ್ ಫೈನಲ್‌ಗೆ ಪ್ರಿಯಾನ್ಶು

ಕ್ಯಾಲ್ಗರಿ (ಕೆನಡಾ), (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ ಪ್ರಿಯಾನ್ಶು ರಾಜಾವತ್ ಇಲ್ಲಿ ನಡೆಯುತ್ತಿರುವ ಕೆನಡಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಅಮೋಘ ಆಟದ ಪ್ರದರ್ಶನ ಮುಂದುವರಿಸಿದ್ದಾರೆ. ಜಪಾನ್‌ನ ಟಕುಮಾ ಒಬಯಾಶಿ ವಿರುದ್ಧ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಗುರುವಾರ ತಡರಾತ್ರಿ ನಡೆದ 38 ನಿಮಿಷದ ಪಂದ್ಯದಲ್ಲಿ ವಿಶ್ವ ಕ್ರಮಾಂಕದ 39ನೇ ಸ್ಥಾನದಲ್ಲಿರುವ ರಾಜಾವತ್, 21-19 21-11ರಿಂದ 33ನೇ ಕ್ರಮಾಂಕದ ಒಬಯಾಶಿ ವಿರುದ್ಧ ಗೆಲುವು ಸಾಧಿಸಿದ್ದಾರೆ. ಮುಂದಿನ ಸುತ್ತಿನಲ್ಲಿ ಡೆನ್ಮಾರ್ಕ್‌ನ ಆ್ಯಂಡರ್ಸ್ ಆಂಟೋನ್ಸನ್ ಅವರನ್ನು ಎದುರಿಸಲಿದ್ದಾರೆ.

ಮಹಿಳಾ ಡಬಲ್ಸ್‌ನಲ್ಲಿ ಮೂರನೇ ಶ್ರೇಯಾಂಕದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಕೂಡಾ ಕ್ವಾರ್ಟರ್ ಫೈನಲ್ ತಲುಪಿದೆ.

ಮೊದಲ ಗೇಮ್ ಕಳೆದುಕೊಂಡ ಟ್ರೀಸಾ–ಗಾಯತ್ರಿ ಜೋಡಿ ಮರುಹೋರಾಟದ ಮೂಲಕ 17-21 21-7 21-8 ರಿಂದ ಡೆನ್ಮಾರ್ಕ್‌ನ ನಟಾಸ್ಜಾ ಅಥೋಂನಿಸೇನ್ ಮತ್ತು ನೆದರ್ಲೆಂಡ್ಸ್‌ನ ಅಲಿಸ್ಸಾ ಟಿರ್ಟೋಸೆಂಟೊನೊ ಜೋಡಿಯನ್ನು ಸೋಲಿಸಿತು.

ಭಾರತದ ಜೋಡಿಯು ಕ್ವಾರ್ಟರ್ ಫೈನಲ್‌ನಲ್ಲಿ ಚೈನಾ ತೈಪೆಯ ಪೀ ಶಾನ್ ಹ್ಸೀ ಮತ್ತು ಎನ್ ತ್ಸು ಹಂಗ್ ಜೋಡಿಯನ್ನು ಎದುರಿಸಲಿದೆ. ಭಾರತದ ಇತರ ಸ್ಪರ್ಧಿಗಳು ಎರಡನೇ ಸುತ್ತಿನಲ್ಲೇ ಹೊರಬಿದ್ದರು. ಅನುಪಮಾ ಉಪಾಧ್ಯ ಹಾಗೂ ತಾನ್ಯಾ ಹೇಮಂತ್ ಮಹಿಳೆಯರ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿನ ಸೋಲನುಭವಿಸಿದ್ದಾರೆ.

ಪ್ರಬಲ ಹೋರಾಟ ನಡೆಸಿದ ಹೊರತಾಗಿಯೂ ಅನುಪಮಾ, 14-21 21-17 13-21ರಿಂದ ಕೆನಡಾದ ಮಿಚೆಲ್ಲೆ ಲೀ ಅವರಿಗೆ ಶರಣಾದರು. ತಾನ್ಯಾ 11-21 13-21ರಿಂದ ಮೂರನೇ ಶ್ರೇಯಾಂಕದ ಬುಸಾನನ್ ಒಂಗ್ಬಾಮ್‌ರುಂಗ್ಫಾನ್ (ಥಾಯ್ಲೆಂಡ್) ವಿರುದ್ಧ ಪರಾಭವಗೊಂಡರು.

ಭಾರತದ ಕೃಷ್ಣಪ್ರಸಾದ್ ಗರಗ ಮತ್ತು ಸಾಯಿ ಪ್ರತೀಕ್ ಜೋಡಿ ಪುರುಷರ ಡಬಲ್ಸ್‌ನಲ್ಲಿ 21-19 18-21 17-21ರಿಂದ ಚೈನಾ ತೈಪೆಯ ಬಿಂಗ್-ವೀ ಲಿನ್ ಮತ್ತು ಚಿಂಗ್ ಹೆಂಗ್ ಸು ಜೋಡಿಗೆ ಶರಣಾಯಿತು.

ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಕಪೂರ್ ಮತ್ತು ರುತ್ವಿಕಾ ಶಿವಾನಿ ಗಡ್ಡೆ ಜೋಡಿಯು 15-21 21-19 9-21ರಿಂದ ಚೈನಾ ತೈಪೆಯ ಚೆಂಗ್ ಕುವಾನ್ ಚೆನ್ ಮತ್ತು ಯಿನ್-ಹುಯಿ ಹ್ಸು ಜೋಡಿ ವಿರುದ್ಧ ಸೋಲನುಭವಿಸಿತು.


ಟ್ರೀಸಾ ಜೋಳಿ–ಗಾಯತ್ರಿ ಗೋಪಿಚಂದ್

ಎರಡನೇ ಸ್ಥಾನದಲ್ಲಿ ಗುಕೇಶ್, ಪ್ರಜ್ಞಾನಂದ

ಬುಖಾರೆಸ್ಟ್ (ರೊಮೇನಿಯಾ), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ, ಸೂಪರ್‌ಬೆಟ್ ಚೆಸ್ ಟೂರ್ನಿಯು ಎಂಟನೇ ಸುತ್ತಿನಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನಾ ಜೊತೆ 'ಡ್ರಾ' ಮಾಡಿಕೊಂಡರೆ, ಡಿ.ಗುಕೇಶ್ ಅವರು ಸಹ ಡಚ್ ಆಟಗಾರ ಅನಿಶ್ ಗಿರಿ ಜೊತೆ ಪಾಯಿಂಟ್ ಹಂಚಿಕೊಂಡರು. ದಿನದ ಇತರ ಮೂರು ಪಂದ್ಯಗಳೂ ಡ್ರಾ ಆದವು.

ಹತ್ತು ಆಟಗಾರರು ಭಾಗವಹಿಸಿರುವ ಈ ಟೂರ್ನಿಯಲ್ಲಿ ಇನ್ನೊಂದು ಸುತ್ತು ಆಡಲು ಬಾಕಿ ಉಳಿದಿದೆ. ನಾಲ್ಕನೇ ಸಲ ಯಾವೊಂದು ಪಂದ್ಯದಲ್ಲೂ ಸೋಲು–ಗೆಲುವು ನಿರ್ಧಾರವಾಗಲಿಲ್ಲ. ಹೀಗಾಗಿ ಆಟಗಾರರ ಸ್ಥಾನದಲ್ಲೂ ಬದಲಾವಣೆ ಆಗಲಿಲ್ಲ. ಈ ಟೂರ್ನಿ 'ಗ್ರ್ಯಾಂಡ್ ಚೆಸ್ ಟೂರ್'ನ ಭಾಗವಾಗಿದೆ.

ಎಂಟು ಪಂದ್ಯಗಳಿಂದ ಐದು ಪಾಯಿಂಟ್ಸ್ ಹೊಂದಿರುವ ಕರುವಾನಾ ಅವರು ಮುನ್ನಡೆ ಉಳಿಸಿಕೊಂಡಿದ್ದಾರೆ. 3 ಮಂದಿ ಆಟಗಾರರು– ಪ್ರಜ್ಞಾನಂದ, ಗುಕೇಶ್ ಮತ್ತು ಅಲಿರೇಝಾ – ಅರ್ಧ ಪಾಯಿಂಟ್ ಹಿಂದೆಯಿದ್ದು ಎರಡನೇ ಸ್ಥಾನ ಹಂಚಿ ಕೊಂಡಿದ್ದಾರೆ. ಫಿಡೆ ಪ್ರತಿನಿಧಿಸುತ್ತಿರುವ ರಷ್ಯನ್ ಆಟಗಾರ ಇಯಾನ್ ನಿಪೊಮ್‌ನಿಷಿ (ಫಿಡೆ) ಮತ್ತು ಫ್ರಾನ್ಸ್‌ನ ಮ್ಯಾಕ್ಸಿಮ್ ವೇಷಿ ಯರ್ ಲಗ್ರಾವ್ ತಲಾ ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.


ಪ್ರಜ್ಞಾನಂದ

ಅಮೆರಿಕದ ವೆಸ್ಲಿ ಸೊ, ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೊವ್ ಮತ್ತು ಹಾಲೆಂಡ್‌ನ ಅನಿಶ್ ಗಿರಿ (ತಲಾ 3.5) ಏಳರಿಂದ ಒಂಬತ್ತರವರೆಗಿನ ಸ್ಥಾನದಲ್ಲಿದ್ದಾರೆ. ಆತಿಥೇಯ ರೊಮೇನಿಯಾದ ಆಟಗಾರ ಡಿಯಾಕ್ ಬೊಗ್ಡಾನ್ ಡೇನಿಯಲ್ (3) ಕೊನೆಯ ಸ್ಥಾನದಲ್ಲಿದ್ದಾರೆ.

ಬಿಳಿ ಕಾಯಿಗಳಲ್ಲಿ ಆಡಿದ ಕರುವಾನಾಗೆ ಕೆಲವು ನಡೆಗಳ ನಂತರ ಸ್ವಲ್ಪ ಮೇಲುಗೈ ಒದಗಿತು. ಆದರೆ 14ನೇ ನಡೆಯ ನಂತರ ಕೆಲವು ಎಕ್ಸ್‌ಚೇಂಜ್‌ಗಳಾಗಿ ಇಬ್ಬರ ಬಲವೂ ಸಮಾನವಾಯಿತು 31 ನಡೆಗಳ ನಂತರ 'ಡ್ರಾ' ಆಯಿತು.

ಗಿರಿ ಮತ್ತು ಗುಕೇಶ್ ನಡುವಣ ಪಂದ್ಯ 30 ನಡೆಗಳ ನಂತರ ಡ್ರಾದಲ್ಲಿ ಅಂತ್ಯಗೊಂಡಿತು. ಅಲಿರೇಝಾ ಫಿರೋಜ್ ಮತ್ತು ನಿಪೊಮ್‌ನಿಷಿ ನಡುವಣ; ಸೊ ಮತ್ತು ವೇಷಿಯರ್ ಲಗ್ರಾವ್ ನಡುವಣ, ಅಬ್ದುಸತ್ತಾರೋವ್ ಮತ್ತು ಡೇನಿಯಲ್ ಬೊಗ್ಡಾನ್ ನಡುವಣ ಪಂದ್ಯಗಳೂ ಫಲಿತಾಂಶ ಕಾಣಲಿಲ್ಲ.

ರಾಜಾಜಿನಗರ, ಸರ್ವಜ್ಞನಗರ ತಂಡಗಳಿಗೆ ಜಯ

ಬೆಂಗಳೂರು: ಉತ್ತಮ ಪ್ರದರ್ಶನ ನೀಡಿದ ರಾಜಾಜಿನಗರ ಕ್ಷೇತ್ರ ತಂಡವು ಇಲ್ಲಿ ನಡೆಯುತ್ತಿರುವ ಮುಖ್ಯಮಂತ್ರಿ ಕಪ್ ಫುಟ್‌ಬಾಲ್ ಟೂರ್ನಿಯ 'ಸಿ' ಗುಂಪಿನ ಪಂದ್ಯದಲ್ಲಿ 9–0 ಗೋಲುಗಳ ಅಂತರದಿಂದ ಗೋವಿಂದರಾಜ ನಗರ ಕ್ಷೇತ್ರ ತಂಡವನ್ನು ಮಣಿಸಿತು.

ರಾಜಾಜಿನಗರ ತಂಡದ ಪರ ಡಿ.ಧನುಷ್ (2 ಮತ್ತು 50ನೇ ನಿಮಿಷ), ಮೋನಿಷ್‌ಕುಮಾರ್ (4 ಮತ್ತು 16ನೇ ನಿ), ಕವಿಯರಾಸನ್ (7, 44 ಮತ್ತು 59ನೇ ನಿ), ರಾಜು.ಡಿ (34ನೇ ನಿ), ಮಾಧವನ್ (60ನೇ ನಿ) ಗೋಲು ಬಾರಿಸಿದರು. ದಿನದ ಇನ್ನೊಂದು ಪಂದ್ಯದಲ್ಲಿ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ ತಂಡವು 10–1 ಗೋಲುಗಳ ಅಂತರದಿಂದ ವಿಜಯನಗರ ವಿಧಾನ ಸಭಾ ಕ್ಷೇತ್ರ ತಂಡವನ್ನು ಸೋಲಿಸಿತು.

ಸರ್ವಜ್ಞ ನಗರ ತಂಡದ ಪರ ಸುನೀಲ್‌ಕುಮಾರ್ (7 ಮತ್ತು 27ನೇ ನಿಮಿಷ), ವಿ.ಸುರೇಂದ್ರ ಪ್ರಸಾದ್ (17, 25 ಮತ್ತು 37ನೇ ನಿ), ಜಯವಂದನ್ (34ನೇ ನಿ), ಯೋಗಿತ್.ಎನ್ (39 ಮತ್ತು 65ನೇ ನಿ), ಯೆಶ್ವಂತ್.ಜೆ (63 ಮತ್ತು 67ನೇ ನಿ) ಗೋಲು ಗಳಿಸಿದರು.

ವಿಜಯನಗರ ತಂಡದ ಪರವಾಗಿ ಆರ್ಯನ್ ಎಂ.ವಿ (12ನೇ ನಿಮಿಷ) ಏಕೈಕ ಗೋಲು ಗಳಿಸಿದರು.

ದಕ್ಷಿಣ ಆಫ್ರಿಕಾ ಶುಭಾರಂಭ

ಮೊದಲ ಟಿ20 ಕ್ರಿಕೆಟ್ ಪಂದ್ಯ • ಭಾರತ ತಂಡಕ್ಕೆ 12 ರನ್‌ಗಳ ಸೋಲು

ಚೆನ್ನೈ (ಪಿಟಿಐ): ಏಕೈಕ ಟೆಸ್ಟ್ ಮತ್ತು ಅದಕ್ಕೆ ಮೊದಲು ಏಕದಿನ ಸರಣಿಯನ್ನು 0–3 ರಿಂದ ಸೋತು ಸುಣ್ಣವಾಗಿದ್ದ ದಕ್ಷಿಣ ಆಫ್ರಿಕಾ ಮಹಿಳಾ ತಂಡ, ಶುಕ್ರವಾರ ಇಲ್ಲಿ ಆರಂಭವಾದ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡವನ್ನು 12 ರನ್‌ಗಳಿಂದ ಸೋಲಿಸಿತು.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಪ್ರವಾಸಿ ತಂಡ, ಆರಂಭ ಆಟಗಾರ್ತಿ ತಾಝ್ಮಿನ್ ಬ್ರಿಟ್ಸ್ (81, 56 ಎಸೆತ) ಮತ್ತು ಮರೈಝಾನ್ ಕಾಪ್ (57, 33 ಎಸೆತ) ಅವರ ಬಿರುಸಿನ ಅರ್ಧ ಶತಕಗಳ ನೆರವಿನಿಂದ 5 ವಿಕೆಟ್‌ಗೆ 189 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಭಾರತ ತಂಡ ಬಿರುಸಿನ ಆರಂಭ ಮಾಡಿದರೂ, ದಕ್ಷಿಣ ಆಫ್ರಿಕಾ ಬೌಲರ್‌ಗಳು ಸಾಂಘಿಕ ಪ್ರಯತ್ನದಿಂದ ಆತಿಥೇಯರನ್ನು ಕಟ್ಟಿಹಾಕಿದರು. ಭಾರತ 4 ವಿಕೆಟ್‌ಗೆ 177 ರನ್‌ಗಳೊಡನೆ ಓವರ್‌ಗಳನ್ನು ಪೂರೈಸಿತು.

ಶಫಾಲಿ ವರ್ಮಾ (18, 14ಎ) ಮತ್ತು ಸ್ಮೃತಿ ಮಂದಾನ (46, 30ಎ) ಮೊದಲ ವಿಕೆಟ್‌ಗೆ ಪವರ್‌ಪ್ಲೇ ಅವಧಿಯೊಳಗೆ 56 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದ್ದರು. ಸ್ಮೃತಿ ಮತ್ತು ಹೇಮಲತಾ (14) ಅವರ ವಿಕೆಟ್‌ಗಳನ್ನು ಅಲ್ಪ ಅಂತರದಲ್ಲಿ ಕಳೆದುಕೊಂಡ ನಂತರ ದಕ್ಷಿಣ ಆಫ್ರಿಕಾವೂ ಪಂದ್ಯದ ಮೇಲೆ ಮರಳಿ ಹಿಡಿತ ಪಡೆಯತೊಡಗಿತು.

ಜೆಮಿಮಾ ರಾಡ್ರಿಗಸ್ 30 ಎಸೆತಗಳಲ್ಲಿ ಒಂದು ಸಿಕ್ಸರ್, ಏಳು ಬೌಂಡರಿಗಳಿದ್ದ ಅಜೇಯ 53 ರನ್ ಗಳಿಸಿ ಹೋರಾಟ ಪ್ರದರ್ಶಿಸಿದರು. ಆದರೆ ಅದು ಗೆಲುವಿಗೆ ಸಾಲಲಿಲ್ಲ. ನಾಯಕಿ ಹರ್ಮನ್‌ಪ್ರೀತ್ ಕೌರ್ (35, 29ಎ) ಜೊತೆ ನಾಲ್ಕನೇ ವಿಕೆಟ್‌ಗೆ 58 ಎಸೆತಗಳಲ್ಲಿ 90 ರನ್‌ಗಳು ಹರಿದುಬಂದಿದ್ದವು. ಹರ್ಮನ್‌ಪ್ರೀತ್ ಕೊನೆಯ ಎಸೆತದಲ್ಲಿ ಸ್ಟಂಪ್ಡ್ ಆದರು.

ಇದಕ್ಕೆ ಮೊದಲು ಆರಂಭ ಆಟಗಾರ್ತಿ ತಾಝ್ಮಿನ್ ಬ್ರಿಟ್ಸ್ ಜೀವನಶ್ರೇಷ್ಠ 81 ರನ್ ಬಾರಿಸಿದರು. ಅವರ ಆಟದಲ್ಲಿ ಮೂರು ಸಿಕ್ಸರ್ ಮತ್ತು 10 ಬೌಂಡರಿಗಳಿದ್ದವು. ಮರೈಝಾನ್ ಕಾಪ್ ಜೊತೆ ಎರಡನೇ ವಿಕೆಟ್‌ಗೆ ಕೇವಲ 56 ಎಸೆತಗಳಲ್ಲಿ 96 ರನ್ ಜೊತೆಯಾಟವಾಡಿದ್ದರಿಂದ ಪ್ರವಾಸಿ ತಂಡ ಉತ್ತಮ ಮೊತ್ತ ಗಳಿಸಲು ಸಾಧ್ಯವಾಯಿತು. ಭಾರತದ ಕಡೆ ಪೂಜಾ ವಸ್ತ್ರಾಕರ್ (23ಕ್ಕೆ2) ಅವರು ಯಶಸ್ವಿ ಬೌಲರ್ ಎನಿಸಿದರು.

ಸರಣಿಯ ಎರಡನೇ ಪಂದ್ಯ ಭಾನುವಾರ ನಡೆಯಲಿದೆ.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರುಗಳಲ್ಲಿ 4ಕ್ಕೆ189 (ತಾಝ್ಮಿನ್ ಬ್ರಿಟ್ಸ್ 81, ಮರೈಝಾನ್ ಕಾಪ್ 57, ಪೂಜಾ ವಸ್ತ್ರಾಕರ್ 23ಕ್ಕೆ2, ರಾಧಾ ಯಾದವ್ 40ಕ್ಕೆ2); ಭಾರತ: 20 ಓವರುಗಳಲ್ಲಿ 4ಕ್ಕೆ177 (ಸ್ಮೃತಿ ಮಂದಾನ 46, ಹರ್ಮನ್‌ಪ್ರೀತ್ ಕೌರ್ 35, ಜೆಮಿಮಾ ರಾಡ್ರಿಗಸ್ ಔಟಾಗದೇ 53; ಕ್ಲೊ ಟ್ರಯಾನ್ 32ಕ್ಕೆ1, ನಾಡಿನ್ ಡಿ ಕ್ಲಾರ್ಕ್ 30ಕ್ಕೆ1, ನೊಂಕುಲುಲೆಕೊ ಮಲಾಬ 32ಕ್ಕೆ1). ಪಂದ್ಯದ ಆಟಗಾರ್ತಿ: ತಾಝ್ಮಿನ್ ಬ್ರಿಟ್ಸ್.



ದಕ್ಷಿಣ ಆಫ್ರಿಕಾ ತಂಡದ ಆಟಗಾರ್ತಿ ತಾಝ್ಮಿನ್ ಬ್ರಿಟ್ಸ್. ಪಿಟಿಐ ಚಿತ್ರ

ಈಜು: ದರ್ಶನ್, ಹಷಿಕಾ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಈಜುಕೇಂದ್ರದ ಎಸ್. ದರ್ಶನ್ ಅವರು ಎನ್.ಆರ್.ಜೆ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಡಬಲ್ ಸಾಧನೆ ಮಾಡಿದರು.

ಬಸವನಗುಡಿ ಈಜು ಕೇಂದ್ರದಲ್ಲಿ ಶುಕ್ರವಾರ ನಡೆದ ಬಾಲಕರ 1500 ಮೀ ಫ್ರೀಸ್ಟೈಲ್ ಮತ್ತು 16–17 ವರ್ಷದೊಳಗಿನವರ 200 ಮೀ ಫ್ರೀಸ್ಟೈಲ್ ನಲ್ಲಿ ದರ್ಶನ್ ಪ್ರಥಮ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ಹಷಿಕಾ ರಾಮಚಂದ್ರ ಚಿನ್ನ ಗೆದ್ದರು.

ಫಲಿತಾಂಶಗಳು: 1500 ಮೀ ಫ್ರೀಸ್ಟೈಲ್: ಬಾಲಕರು: 1500 ಮೀ. ಫ್ರೀಸ್ಟೈಲ್: ಎಸ್ ದರ್ಶನ್ (ಬಸವನಗುಡಿ ಈಜುಕೇಂದ್ರ; ಕಾಲ: 16ನಿ,29.49ಸೆ)–1, ಎಸ್ ದಕ್ಷಣ್ (ಬಸವನಗುಡಿ ಈಜುಕೇಂದ್ರ)–2, ಅನಿಕೇತ್ ಭಟ್ (ಡಾಲ್ಫಿನ್ ಅಕ್ವೆಟಿಕ್ಸ್)–3.

15 ವರ್ಷದೊಳಗಿನವರು: 1500 ಮೀ ಫ್ರೀಸ್ಟೈಲ್: ಪಿ.ವಿ. ಮೊನಿಷ್ (17ನಿ,06.77ಸೆ)–1, ಪೃಥ್ವಿರಾಜ್ ಮೆನನ್ –2, ಆರ್ಯನ್ ಮನೀಷ್ –3 (ಮೂವರು ಬಿಎಸಿ).

16–17 ವರ್ಷದೊಳಗಿನವರ 200 ಮೀ ಫ್ರೀಸ್ಟೈಲ್: ಎಸ್. ದರ್ಶನ್ (ಬಿಎಸಿ; 1ನಿ,56.91ಸೆ)–1, ಆರ್ಯನ್ ಭಟ್ –2, ಅಲೆಸ್ಟರ್ ಸ್ಯಾಮುಯೆಲ್ ರೆಗೊ –3 (ಇಬ್ಬರೂ ಡಾಲ್ಫಿನ್ ಸೆಂಟರ್).

100 ಮೀ ಬ್ರೆಸ್ಟ್‌ಸ್ಟ್ರೋಕ್: ಕ್ರಿಷ್ ಸುಕುಮಾರ್ (ಡಾಲ್ಫಿನ್; 1ನಿ,07.94ಸೆ)–1, ಸೂರ್ಯ ಜಯೋಯಪ್ಪ (ಬಿಎಸಿ)–2, ವೈಶಾಜ್ಞ ಶರವಣನ್ (ಬಿಎಸಿ)–3.

100 ಮೀ ಬ್ಯಾಕ್‌ಸ್ಟ್ರೋಕ್: ಅಮನ್ ಅಭಿಜಿತ್ ಸುಣಗಾರ (ಡಾಲ್ಫಿನ್ ಅಕ್ವೆಟಿಕ್ಸ್; 1ನಿ.00.15ಸೆ)–1, ರಾಘವ ಸ್ವಚಂದಮ್ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ಸೂರ್ಯ ಜೆ.ಟಿ (ಬಿಎಸಿ)–3.

15 ವರ್ಷದವರ 200 ಮೀ ಫ್ರೀಸ್ಟೈಲ್: ಪಿ.ವಿ. ಮೊನಿಷ್ (ಬಿಎಸಿ; 2ನಿ,04.73ಸೆ)–1, ಅಭಿಮನ್ಯು ನಂಬಿಯಾರ್ (ಡಾಲ್ಫಿನ್)–2, ಜೆ. ನಿಶಾಂತ್ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–3.



ಹಷಿಕಾ ರಾಮಚಂದ್ರ. ಪ್ರಜಾವಾಣಿ ಚಿತ್ರ

50 ಮೀ ಬಟರ್‌ಫ್ಲೈ: ಹರಿಕಾರ್ತಿಕ್ ವೇಲು (ಗೋಲ್ಡನ್ ಫಿನ್ಸ್ ಸ್ಪೋರ್ಟ್ಸ್ ಕ್ಲಬ್; 26.51ಸೆ)–1, ಅನೀಶ್ ಅನಿರುಧ್ಧ ಕೋರೆ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ದಕ್ಷ್ ಮೆಟಾ (ಬಿಎಸಿ)–3.

11 ವರ್ಷದೊಳಗಿನವರು: 200 ಮೀ. ಫ್ರೀಸ್ಟೈಲ್: ಎನ್. ಪವನ್ ಕೃಷ್ಣ (ಬಿಎಸಿ; 2ನಿ,24.47ಸೆ)–1, ಲೋಹಿತಾಶ್ವ ನಾಗೇಶ್ ಎಸ್ (ಗ್ಲೋಬಲ್)–2, ಸುಜಿತ್ ಕಾರ್ತಿಕ್ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್) –3. **50 ಮೀ ಬಟರ್‌ಫ್ಲೈ:** ಅಮಿತ್ ಪವನ್ ಎಚ್ (ಜೆ ಐಆರ್‌ಎಸ್; 31.19ಸೆ)–1, ರಕ್ಷಿತ್ ಎ ಕೊರೆ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ಆರಿತ್ ಚಂದ್ರಶೇಖರ (ಮತ್ಸ್ಯ)–3.

10 ವರ್ಷದೊಳಗಿನವರು: 100 ಮೀ ಬ್ಯಾಕ್‌ಸ್ಟ್ರೋಕ್: ಮೊಹಮ್ಮದ್ ಝೈದ್ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್; 1ನಿ,26.17ಸೆ)–1, ಇಂದ್ರದತ್ ಎನ್.ಆರ್ (ಪಿ.ಎಂ. ಸ್ವಿಮಿಂಗ್ ಸೆಂಟರ್)–2, ಅದ್ರಿತ್ ಎ ಶಾಂಡಿಲ್ಯಾ (ಡಾಲ್ಫಿನ್ ಅಕ್ವೆಟಿಕ್ಸ್)–3.

10 ವರ್ಷದವರು: 200 ಮೀ ಫ್ರೀಸ್ಟೈಲ್: ಎಸ್. ಋತ್ವಾ (ಡಾಲ್ಫಿನ್; 2ನಿ,34.47ಸೆ)–1, ಅವೀಕ್ ನಮಿತ್ ಗೌಡ (ಮತ್ಸ್ಯ)–2, ಲೋಕೇಂದ್ರ ದಮ್ಮೈ (ಪೂಜಾ ಅಕ್ವೆಟಿಕ್ ಸೆಂಟರ್)–3.

100 ಮೀ ಬ್ರೆಸ್ಟ್‌ಸ್ಟ್ರೋಕ್: ಶಿವಕುಮಾರ್ ರಿತಾನ್ಯಾ (ಬಿಎಸಿ; 1ನಿ.40.59ಸೆ)–1, ಸಿದ್ಧಿ ಶೆಟ್ಟಿ (ಡಾಲ್ಫಿನ್)–2,

10–11 ವರ್ಷದವರು: 4X50 ಮೀ ಫ್ರೀಸ್ಟೈಲ್ ರಿಲೆ: ಡಾಲ್ಫಿನ್ ಅಕ್ವೆಟಿಕ್ಸ್ (2ನಿ.14.18ಸೆ)–1, ಬಸವನಗುಡಿ ಅಕ್ವೆಟಿಕ್ ಸೆಂಟರ್–2, ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್ –3.

ಬಾಲಕಿಯರು: 16 –17 ವರ್ಷದವರು: 1500 ಮೀ ಫ್ರೀಸ್ಟೈಲ್: ಅದಿತಿ ಎನ್ ಮೂಲ್ಯಾ (ಕಾಲ; 17ನಿ,55. 29ಸೆ) –1, ಶಿರಿನ್ –2, ಬಿ.ಎಸ್. ಜನ್ಯಾ –3 (ಮೂವರೂ ಬಿಸಿಎ).

15 ವರ್ಷದೊಳಗಿನವರು: 1500 ಮೀ ಫ್ರೀಸ್ಟೈಲ್: ಶ್ರೀಚರಣಿ ತುಮು (ಗ್ಲೋಬಲ್ ಈಜುಕೇಂದ್ರ; ನೂತನ ದಾಖಲೆ: 18ನಿ,9.54ಸೆ. ಹಳೆಯದು: 18ನಿ,11.69ಸೆ, 2023ರಲ್ಲಿ ಶಿರಿನ್ ದಾಖಲಿಸಿದ್ದರು)–1, ಮೀನಾಕ್ಷಿ ಮೆನನ್ –2, ತನಿಷಾ ವಿನಯ್ –3 (ಇಬ್ಬರೂ ಬಿಎಸಿ).

11 ವರ್ಷದೊಳಗಿನವರು: 200 ಮೀ. ಫ್ರೀಸ್ಟೈಲ್: ಸ್ತುತಿ ಸಿಂಗ್ (ಬೆಂಗಳೂರು ಈಜು ಅಕಾಡೆಮಿ; 2ನಿ,35. 48ಸೆ)–1, ನಯನಾ ಎ ಮಧ್ಯಸ್ಥ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ಪಿ.ವಿ. ಶರಣ್ಯಾ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–3. **10 ವರ್ಷದೊಳಗಿನವರು:** 200 ಮೀ ಫ್ರೀಸ್ಟೈಲ್: ಝುರನಾ ಸಿಸೊಡಿಯಾ (ಏಕಲವ್ಯ ಸ್ಪೋರ್ಟ್ಸ್; 2ನಿ,44.13ಸೆ)–1, ಆರ್. ಸಾನ್ವಿ (ಡಾಲ್ಫಿನ್)–2, ಸುದೀಪ್ತಿ ಸುನಿಲ್ (ಡಾಲ್ಫಿನ್)–3. **11 ವರ್ಷದೊಳಗಿನವರ 200 ಮೀ ಫ್ರೀಸ್ಟೈಲ್:** ಹಷಿಕಾ ರಾಮಚಂದ್ರ (ಸಮಯ; 2ನಿ.09.28ಸೆ)–1, ಶಿರಿನ್ –2, ನಯನಾ ವಿಹಿತ –3 (ಮೂವರು ಬಿಎಸಿಯವರು).

11 ವರ್ಷದೊಳಗಿನ 100 ಮೀ ಬ್ಯಾಕ್‌ಸ್ಟ್ರೋಕ್: ಶ್ರೇಯಾ ಸುರೇಶ್ ಪೂಜಾರ್ (ಬೆಂಗಳೂರು ಈಜು ಅಕಾಡೆಮಿ; 1ನಿ,28.35ಸೆ)–1, ಆರಾಧ್ಯ ಆಚಾರ್ (ಮಂಗಳಾ ಸ್ವಿಮಿಂಗ್ ಕ್ಲಬ್)–2, ರಿಧಿ ಮಹೇಶ್ವರಿ (ಪಿ.ಎಂ. ಸ್ವಿಮಿಂಗ್ ಸೆಂಟರ್)–3. 15 ವರ್ಷದೊಳಗಿನವರ 200 ಮೀ. ಫ್ರೀಸ್ಟೈಲ್: ಶ್ರೀಚಾರಣಿ ತುಮು (ಗ್ಲೋಬಲ್; 2ನಿ,11.75ಸೆ)–1, ಸುಹಾಸಿನಿ ಘೋಷ್ (ಡಾಲ್ಫಿನ್)–2, ಪ್ರತಿಷ್ಠಾ ಕಮಲೇಶ್ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–3.



ಮುಂಬೈನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರು ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರನ್ನು ಗೌರವಿಸಿದರು –ಪಿಟಿಐ ಚಿತ್ರ

₹ 11 ಕೋಟಿ ಬಹುಮಾನ

ಮುಂಬೈ (ಪಿಟಿಐ): ಮಹಾರಾಷ್ಟ್ರ ಸರ್ಕಾರದಿಂದ ₹ 11 ಕೋಟಿ: ನಾಯಕ ರೋಹಿತ್ ಶರ್ಮಾ, ಸೂರ್ಯಕುಮಾರ್ ಯಾದವ್, ಯಶಸ್ವಿ ಜೈಸ್ವಾಲ್ ಮತ್ತು ಅಲ್‌ರೌಂಡರ್ ಶಿವಂ ದುಬೆ ಅವರನ್ನು ಮಹಾರಾಷ್ಟ್ರ ಸರ್ಕಾರವು ಶುಕ್ರವಾರ ಸಂಜೆ ವಿಧಾನಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಭಾರತ ತಂಡಕ್ಕೆ ₹ 11 ಕೋಟಿ ಬಹುಮಾನವನ್ನು ರಾಜ್ಯ ಸರ್ಕಾರ ಘೋಷಿಸಿತು.

ಮುಖ್ಯಮಂತ್ರಿ ಏಕನಾಥ್ ಶಿಂಧೆ, ಉಪಮುಖ್ಯಮಂತ್ರಿಗಳಾದ ಅಜಿತ್ ಪವಾರ್ ಮತ್ತು ದೇವೇಂದ್ರ ಫಡಣವೀಸ್ ಅವರು ಹಾಜರಿದ್ದರು.

ಪೋಲಿಸರಿಗೆ ಕೃತಜ್ಞತೆ: ಮುಂಬೈನಲ್ಲಿ ನಡೆದ ವಿಜಯಯಾತ್ರೆಯ ಸಂದರ್ಭದಲ್ಲಿ ಭದ್ರತಾ ವ್ಯವಸ್ಥೆಯು ಅಚ್ಚುಕಟ್ಟಾಗಿತ್ತು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನಿಗಾ ವಹಿಸಿದ ಪೊಲೀಸ್ ಇಲಾಖೆಯು ಅದ್ಭುತವಾದ ಕಾರ್ಯ ಮಾಡಿದೆ ಎಂದು ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರವೀಂದ್ರ ಜಡೇಜ ಕೃತಜ್ಞತೆ ಸಲ್ಲಿಸಿದ್ದಾರೆ.

ವಿಶ್ವಕಪ್ ಫೈನಲ್ ಮುಂಬೈನಲ್ಲಿರಲಿ: ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ವಿಶ್ವಕಪ್ ಟೂರ್ನಿಗಳು ಭಾರತದಲ್ಲಿ ನಡೆದಾಗ ಫೈನಲ್ ಪಂದ್ಯಗಳು ಮುಂಬೈನಿಂದ ಹೊರಹೋಗದಿರಲಿ ಎಂದು ಶಿವಸೇನಾ ಪಕ್ಷದ ನಾಯಕ ಆದಿತ್ಯ ಠಾಕ್ರೆ ಬಿಸಿಸಿಐ ವಿರುದ್ಧ ಚಾಟಿ ಬೀಸಿದ್ದಾರೆ.

ಹೋದ ವರ್ಷ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್ ಪಂದ್ಯವನ್ನು ಅಹಮದಾಬಾದಿನಲ್ಲಿ ನಡೆಸಲಾಗಿತ್ತು. ಭಾರತ ತಂಡವು ಆ ಪಂದ್ಯದಲ್ಲಿ ಸೋತಿತ್ತು. ಆಗ ಪಂದ್ಯ ಆಯೋಜಿಸಿದ ಸ್ಥಳದ ಕುರಿತು ಬಹಳಷ್ಟು ಟೀಕೆಗಳು ವ್ಯಕ್ತವಾಗಿದ್ದವು.

ಜರ್ಮನಿ ಮಣಿಸಿ ಸೆಮಿಗೆ ಸ್ಪೇನ್

ಸ್ಟಟ್‌ಗಾರ್ಟ್ (ಜರ್ಮನಿ) (ಎಪಿ): ಸ್ಪೇನ್ ತಂಡವು ಶುಕ್ರವಾರ ನಡೆದ ಯುರೋ ಕಪ್ ಫುಟ್‌ಬಾಲ್ ಟೂರ್ನಿಯ ರೋಚಕ ಪಂದ್ಯದಲ್ಲಿ 2–1 ಗೋಲುಗಳಿಂದ ಆತಿಥೇಯ ಜರ್ಮನಿ ತಂಡವನ್ನು ಮಣಿಸಿ, ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದೆ.

ಪಂದ್ಯದ 51ನೇ ನಿಮಿಷದಲ್ಲಿ ಡ್ಯಾನಿ ಓಲ್ಮೊ ಅವರು ಸ್ಪೇನ್‌ಗೆ ಮುನ್ನಡೆ ಒದಗಿಸಿದರು. ಸಬ್‌ಸ್ಟಿಟ್ಯೂಟ್ ಆಟಗಾರ ಜೋಶುವಾ ಕಿಮ್ಮಿಚ್ ಅವರು 89ನೇ ನಿಮಿಷದಲ್ಲಿ ಗಳಿಸಿದ ಗೋಲಿನಿಂದ ಜರ್ಮನಿ ತಂಡ ಸಮಬಲ ಸಾಧಿಸಿತು.

ಆದರೆ ಹೆಚ್ಚುವರಿ ಸಮಯದಲ್ಲಿ ಮೈಕೆಲ್ ಮೆರಿನೊ 119ನೇ ನಿಮಿಷದಲ್ಲಿ ಗೋಲು ಗಳಿಸಿ ಸ್ಪೇನ್ ತಂಡದ ಗೆಲುವಿಗೆ ಪ್ರಮುಖ ಕಾಣಿಕೆ ನೀಡಿದರು.

ಕೊಪ ಅಮೆರಿಕ: ಸೆಮಿಫೈನಲ್‌ಗೆ ಅರ್ಜೆಂಟೀನಾ: ಹೂಸ್ಟನ್ (ಎಪಿ): ಹಾಲಿ ಚಾಂಪಿಯನ್ ಅರ್ಜೆಂಟೀನಾ ಪೆನಾಲ್ಟಿ ಶೂಟೌಟ್‌ನಲ್ಲಿ ಈಕ್ವೆಡಾರ್ ತಂಡವನ್ನು ಮಣಿಸಿ ಕೊಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಪಂದ್ಯದ ನಿಗದಿ ಅವಧಿಯ ಆಟ 1–1 ರಲ್ಲಿ ಸಮಬಲಗೊಂಡ ನಂತರ ಪೆನಾಲ್ಟಿ ಶೂಟೌಟ್‌ನಲ್ಲಿ ಅರ್ಜೆಂಟೀನಾ 4-2 ರಿಂದ ಜಯ ಸಾಧಿಸಿತು.

ಅರ್ಜೆಂಟೀನಾ ಪರ ಮೊದಲ ಪೆನಾಲ್ಟಿ ಯತ್ನದಲ್ಲಿ ಲಯೋನೆಲ್ ಮೆಸ್ಸಿ ವಿಫಲರಾದರು. ಆದರೆ ಅರ್ಜೆಂಟೀನಾ ತಂಡದ ಗೋಲ್ ಕೀಪರ್ ಎಮಿಲಿಯಾನೋ ಮಾರ್ಟಿನೆಜ್, ಈಕ್ವೆಡಾರ್‌ನ ಎರಡು ಪೆನಾಲ್ಟಿ ಯತ್ನಗಳನ್ನು ತಡೆದರು. ನಿಕೋಲಸ್ ಒಟಮೆಂಡಿ ಚೆಂಡನ್ನು ಗೋಲಿನೊಳಗೆ ಸೇರಿಸಿ, ಅರ್ಜೆಂಟೀನಾವನ್ನು ಗೆಲುವಿನ ದಡ ಸೇರಿಸಿದರು. ಪಂದ್ಯದ 35ನೇ ನಿಮಿಷ ಲಿಸಾಂಡ್ರೊ ಮಾರ್ಟಿನೆಜ್ ಅರ್ಜೆಂಟೀನಾಗೆ ಮುನ್ನಡೆ ಒದಗಿಸಿದರು. ಆದರೆ, ಕೆವಿನ್ ರಾಡ್ರಿಗಸ್ ದ್ವಿತೀಯಾರ್ಧದ ಆರಂಭದಲ್ಲೇ ಗೋಲು ಗಳಿಸಿ ಈಕ್ವೆಡಾರ್ ಸಮಬಲ ಸಾಧಿಸಲು ನೆರವಾದರು.



ಜರ್ಮನಿ ವಿರುದ್ಧ ಪಂದ್ಯದಲ್ಲಿ ಸ್ಪೇನ್ ತಂಡದ ಮೈಕೆಲ್ ಮೆರಿನೊ ಗೋಲು ಗಳಿಸಿದರು. ಎಎಫ್‌ಪಿ ಚಿತ್ರ

ವಿಂಬಲ್ಡನ್: ಪ್ರಬಲ ಹೋರಾಟ ನೀಡಿದ ಫ್ರಾನ್ಸೆಸ್ ಟಿಯಾಫೊ

ಅಲ್ಕರಾಜ್‌ಗೆ ಪ್ರಯಾಸದ ಗೆಲುವು

ಲಂಡನ್ (ರಾಯಿಟರ್ಸ್/ ಎಎಫ್‌ಪಿ): ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಬಹಳ ಪ್ರಯಾಸದಿಂದ ಫ್ರಾನ್ಸ್‌ನ ಫ್ರಾನ್ಸೆಸ್ ಟಿಯಾಫೊ ಅವರ ಸ್ಫೂರ್ತಿಯು ತ ಹೋರಾಟವನ್ನು ಬದಿಗೊತ್ತಿ ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್ಸ್‌ನ ಪುರುಷರ ಸಿಂಗಲ್ಸ್ 16ರ ಸುತ್ತಿಗೆ ತಲುಪಿದರು.

ಸೆಂಟರ್‌ಕೋರ್ಟ್‌ನಲ್ಲಿ ಶುಕ್ರವಾರ ನಡೆದ ಈ ಪಂದ್ಯವನ್ನು ಮೂರನೇ ಶ್ರೇಯಾಂಕದ ಅಲ್ಕರಾಜ್ 5–7, 6–2, 4–6, 7–6 (7–2), 6–2 ರಿಂದ ಗೆಲ್ಲಲು ಹರಸಾಹಸಪಟ್ಟರು. ಮೊದಲ ಮೂರು ಸೆಟ್‌ಗಳ ನಂತರ ಹಿನ್ನಡೆಯಲ್ಲಿದ್ದ ಸ್ಪೇನ್‌ನ ಆಟಗಾರ ನಂತರ ನಿಧಾನವಾಗಿ ಲಯಕ್ಕೆ ಮರಳತೊಡಗಿ 29ನೇ ಶ್ರೇಯಾಂಕದ ಆಟಗಾರನ ವಿರುದ್ಧ ಹಿಡಿತ ಸಂಪಾದಿಸಿದರು. ಅಷ್ಟು ಹೊತ್ತಿಗೆ ಟಿಯಾಫೊ ಅವರಲ್ಲಿ ಆಯಾಸವೂ ಕಾಣತೊಡಗಿತು.

ಡ್ರಾಪ್ ಶಾಟ್ ಮೂಲಕ ಅಲ್ಕರಾಜ್ ಪಂದ್ಯ ಗೆದ್ದ ತಕ್ಷಣ, ಇಬ್ಬರೂ ಪರಸ್ಪರ ಆಲಂಗಿಸಿಕೊಂಡರು. ಪ್ರೇಕ್ಷಕರೂ ಕರತಾಡನದ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು.



ಗೆಲುವಿನ ಸಂಭ್ರಮದಲ್ಲಿ ಅಲ್ಕರಾಜ್ ಎಎಫ್‌ಪಿ ಚಿತ್ರ

ಸುನ್ ಯಶಸ್ಸಿನ ಓಟ: ಗೆಲುವಿನ ಓಟ ಮುಂದುವರಿಸಿದ ಶ್ರೇಯಾಂಕರಹಿತ ಆಟಗಾರ್ತಿ ಲುಲು ಸುನ್ ಅವರು ವಿಂಬಲ್ಡನ್ ಚಾಂಪಿಯನ್‌ಷಿಪ್ಸ್ ಮಹಿಳೆಯರ ಸಿಂಗಲ್ಸ್ 16ರ ಸುತ್ತನ್ನು ತಲುಪಿದ ನ್ಯೂಜಿಲೆಂಡ್‌ನ ಮೊದಲ ಆಟಗಾರ್ತಿ ಎನಿಸಿದರು. ಮೂರನೇ ಸುತ್ತಿನ ಪಂದ್ಯದಲ್ಲಿ ಲುಲು ಸುನ್ 7–6 (7–4), 7–6 (8–6) ರಲ್ಲಿ ನೇರ ಸೆಟ್‌ಗಳಿಂದ ಚೀನಾದ ಝು ಲಿನ್ ಅವರನ್ನು ಸೋಲಿಸಿದರು.

ಅರ್ಹತಾ ಸುತ್ತಿನ ಮೂಲಕ ಪ್ರಧಾನ ಟೂರ್ನಿಗೆ ಪ್ರವೇಶ ಪಡೆದಿದ್ದ 23 ವರ್ಷ ವಯಸ್ಸಿನ ಸುನ್, ಮೊದಲ ಸುತ್ತಿನಲ್ಲಿ ಎಂಟನೇ ಶ್ರೇಯಾಂಕದ ಆಟಗಾರ್ತಿ ಹಾಗೂ ಆಸ್ಟ್ರೇಲಿಯಾ ಓಪನ್ ರನ್ನರ್ ಅಪ್ ಝೆಂಗ್ ಕ್ವಿನ್‌ವೆನ್ ಅವರನ್ನು ಪರಾಭವಗೊಳಿಸಿ ಉತ್ತಮ ಆರಂಭ ಪಡೆದಿದ್ದರು. ಸುನ್ ವಿಶ್ವ ಕ್ರಮಾಂಕದಲ್ಲಿ 123 ನೇ ಸ್ಥಾನದಲ್ಲಿದ್ದಾರೆ.

ಏಳನೇ ಶ್ರೇಯಾಂಕದ ಜಾಸ್ಮಿನ್ ಪಾವೊಲಿನಿ (ಇಟಲಿ) ಅವರು 7–6 (7–4), 6–1 ರಿಂದ ಬಿಯಾಂಕ ಆಂಡ್ರಿಸ್ಕ್ಯು (ಕೆನಡಾ) ಅವರನ್ನು ಮಣಿಸಿದರು. 12ನೇ ಶ್ರೇಯಾಂಕದ ಮ್ಯಾಡಿಸನ್ ಕೀಸ್ (ಅಮೆರಿಕ) 6–4, 6–3 ರಿಂದ 18ನೇ ಶ್ರೇಯಾಂಕದ ಮಾರ್ತಾ ಕೊಸ್ಟಿಯುಕ್ ಅವರನ್ನು ಹಿಮ್ಮೆಟ್ಟಿಸಿದರು.

ಏಷ್ಯನ್ ಸ್ನೂಕರ್: ಕೀರ್ತನಾಗೆ ಕಂಚು

ಪ್ರಜಾವಾಣಿ ವಾರ್ತೆ

ಕೋಲಾರ: ಕೆಜಿಎಫ್‌ನ ಕೀರ್ತನಾ ಪಾಂಡಿಯನ್ ಶುಕ್ರವಾರ ಸೌದಿ ಅರೇಬಿಯಾದ ರಿಯಾದ್‌ನಲ್ಲಿ ನಡೆದ ಏಷ್ಯನ್ ಸ್ನೂಕರ್ ಚಾಂಪಿಯನ್‌ಷಿಪ್‌ನ ಮಹಿಳೆಯರ ವಿಭಾಗದಲ್ಲಿ ಕಂಚಿನ ಪದಕ ಜಯಿಸಿದ್ದಾರೆ.

ಈ ಹಿಂದೆ ಜೂನಿಯರ್ (21 ವರ್ಷದೊಳಗಿನವರು) ಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿದ್ದ ಕೀರ್ತನಾ ಸೀನಿಯರ್ ಮಟ್ಟದಲ್ಲಿ ಪಾಲ್ಗೊಂಡ ಮೊದಲ ಟೂರ್ನಿ ಇದಾಗಿದೆ. ಈ ಚಾಂಪಿಯನ್‌ಷಿಪ್‌ನಲ್ಲಿ ಚೆನ್ನೈನ ಆಟಗಾರ್ತಿ ಅನುಪಮಾ ರಾಮಚಂದ್ರನ್ ಚಿನ್ನದ ಪದಕ ಜಯಿಸಿದ್ದಾರೆ. ಇದೇ ಚಾಂಪಿಯನ್‌ಷಿಪ್‌ನ ಜೂನಿಯರ್ ವಿಭಾಗದಲ್ಲಿ 2023ರಲ್ಲಿ ಕೀರ್ತನಾ ಚಾಂಪಿಯನ್ ಆಗಿದ್ದರು.

ಜಿಂಬಾಬ್ವೆ ಎದುರು ಟಿ20 ಪಂದ್ಯ ಇಂದು: ರೋಹಿತ್–ವಿರಾಟ್ ಇಲ್ಲದ ತಂಡ

ಭಾರತ ಯುವಪಡೆಯ ‘ಪ್ರವಾಸ’ ಆರಂಭ

ಹರಾರೆ (ಪಿಟಿಐ): ವಿಶ್ವಕಪ್ ವಿಜಯದೊಂದಿಗೆ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಟಿ20 ಕ್ರಿಕೆಟ್ ಮಾದರಿಗೆ ವಿದಾಯ ಹೇಳಿದ್ದಾರೆ. ಅವರು ಚುಟುಕು ಮಾದರಿಗೆ ನಿವೃತ್ತಿ ಘೋಷಿಸಿದ ನಂತರ ನಡೆಯಲಿರುವ ಮೊದಲ ಟಿ20 ಕ್ರಿಕೆಟ್ ಸರಣಿಯಲ್ಲಿ ಭಾರತದ ಯುವಪಡೆ ಕಣಕ್ಕಿಳಿಯಲಿದೆ.

ಶುಭಮನ್ ಗಿಲ್ ನಾಯಕತ್ವದ ತಂಡವು ಜಿಂಬಾಬ್ವೆಯಲ್ಲಿ ನಡೆಯಲಿರುವ ಐದು ಟಿ20 ಪಂದ್ಯಗಳ ಸರಣಿಯಲ್ಲಿ ಆಡಲಿದೆ. ಮೊದಲ ಪಂದ್ಯವು ಶನಿವಾರ ನಡೆಯಲಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡಿದ್ದ ಗಿಲ್ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದ ಮೀಸಲು ಆಟಗಾರನಾಗಿದ್ದರು. ಇದೀಗ ಅವರು ನಾಯಕನಾಗಿ ಅಂತರರಾಷ್ಟ್ರೀಯ ಕಣಕ್ಕೆ ಇಳಿಯುತ್ತಿದ್ದಾರೆ.



ಭಾರತದ ಶುಭಮನ್ ಗಿಲ್ ಬ್ಯಾಟಿಂಗ್ ಅಭ್ಯಾಸ –ಪಿಟಿಐ ಚಿತ್ರ

ತಂಡದಲ್ಲಿರುವ ಆಟಗಾರರಲ್ಲಿ ಬಹುತೇಕ ಮಂದಿ ಐಪಿಎಲ್‌ನಲ್ಲಿ ಮಿಂಚಿದವರು. ಪಂಜಾಬ್‌ನ ಅಭಿಷೇಕ್ ಶರ್ಮಾ, ಅಸ್ಸಾಂನ ರಿಯಾನ್ ಪರಾಗ್, ವಿಕೆಟ್‌ಕೀಪರ್ ಧ್ರುವ ಜುರೆಲ್, ಜಿತೇಶ್ ಶರ್ಮಾ, ಆವೇಶ್ ಖಾನ್, ಖಲೀಲ್ ಅಹಮದ್, ತುಷಾರ್ ದೇಶಪಾಂಡೆ ಮತ್ತು ಸಾಯಿ ಸುದರ್ಶನ್ ತಮ್ಮ ಪ್ರತಿಭೆ ಮೆರೆಯಲು ಕಾತುರರಾಗಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್ ನಾಯಕತ್ವ ವಹಿಸಿದ್ದ ಋತುರಾಜ್ ಗಾಯಕವಾಡ್ ಮತ್ತು ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರು ತಂಡದ ಬಲ ಹೆಚ್ಚಿಸಿದ್ದಾರೆ.



ಗಿಲ್ ಮತ್ತು ಅಭಿಷೇಕ್ ಇನಿಂಗ್ಸ್ ಆರಂಭಿಸಿದರೆ, ಋತುರಾಜ್ ಮೂರನೇ ಕ್ರಮಾಂಕದಲ್ಲಿ ಆಡಬಹುದು. ಆಗ ರಿಯಾನ್ ನಾಲ್ಕನೇ ಕ್ರಮಾಂಕದಲ್ಲಿ ಆಡುವುದು ಬಹುತೇಕ ಖಚಿತವಾಗಲಿದೆ. ರಿಂಕು ಸಿಂಗ್ ಐದನೇ ಕ್ರಮಾಂಕದಲ್ಲಿ ಬಂದರೆ ಕೊನೆಯ ಹಂತದ ಓವರ್‌ಗಳಲ್ಲಿ ಸಿಕ್ಸರ್‌ಗಳು ದಾಖಲಾಗುವ ಸಾಧ್ಯತೆಗಳು ಹೆಚ್ಚಲಿವೆ. ಸಮತೋಲನವಾಗಿರುವ ಭಾರತ ತಂಡವನ್ನು ಎದುರಿಸುವುದು ಜಿಂಬಾಬ್ವೆಗೆ ಕಠಿಣ ಸವಾಲಾಗಬಹುದು.

ತಂಡದ ನಾಯಕ, 38 ವರ್ಷದ ಸಿಕಂದರ್ ರಝಾ 86 ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡಿರುವ ಅನುಭವಿ. ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ಸೇರಿದಂತೆ ಬೇರೆ ಬೇರೆ ಫ್ರ್ಯಾಂಚೈಸಿ ಲೀಗ್‌ಗಳಲ್ಲಿಯೂ ಆಡಿರುವ ಆಲ್‌ರೌಂಡರ್ ಆಗಿದ್ದಾರೆ.

ಪಂದ್ಯ ಆರಂಭ: ಸಂಜೆ4.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್

ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ: ಯಶ್ವಂತ್, ಅನರ್ಘ್ಯ ರನ್ನರ್ ಅಪ್

ಪ್ರಶಸ್ತಿ ಗೆದ್ದ ಆಕಾಶ್, ದೇಶ್ನಾ ವಂಶಿಕಾ

ಪ್ರಜಾವಾಣಿ ವಾರ್ತೆ

ಮಂಗಳೂರು: ಬೆಂಗಳೂರಿನ ಡಬ್ಲ್ಯುಸಿಟಿಟಿಸಿಯ ಆಕಾಶ್ ಕೆ.ಜೆ ಮತ್ತು ಬಿಎನ್‌ಎಂನ ದೇಶ್ನಾ ವಂಶಿಕಾ, ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಕಂಕನಾಡಿಯ ಫಾದರ್ ಮುಲ್ಲರ್ ಒಳಾಂಗಣ ಕ್ರೀಡಾಂಗಣದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಯೋಜಿಸಿರುವ ಟೂರ್ನಿಯ ಎರಡನೇ ದಿನವಾದ ಶುಕ್ರವಾರ ಪುರುಷರ ವಿಭಾಗದ ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಆಕಾಶ್ 11-8, 11-4, 11-4, 11-7ರಲ್ಲಿ ನಾಲ್ಕನೇ ಶ್ರೇಯಾಂಕದ ಯಶ್ವಂತ್ ಎದುರು ಗೆದ್ದರು.

ಮಹಿಳೆಯರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ದೇಶ್ನಾ 4-11, 11-8, 11-5, 11-6, 13-11ರಲ್ಲಿ ಡಬ್ಲ್ಯುಸಿಟಿಟಿಸಿಯ ಎರಡನೇ ಶ್ರೇಯಾಂಕಿತೆ ಅನರ್ಘ್ಯ ಮಂಜುನಾಥ್ ಎದುರು ಗೆದ್ದರು.





ಆಕಾಶ್ ಕೆ.ಜೆ ಚೆಂಡನ್ನು ಹಿಂದಿರುಗಿಸಿದ ರೀತಿ (ಎಡ ಚಿತ್ರ). ದೇಶ್ನಾ ವಂಶಿಕಾ ಆಟದ ಭಂಗಿ ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್

ಪುರುಷರ ವಿಭಾಗದ ಅಗ್ರ ಶ್ರೇಯಾಂಕದ ಅನಿರ್ಬನ್ ರಾಯ್ ಚೌಧರಿ ಸೆಮಿಫೈನಲ್‌ನಲ್ಲಿ ಸೋತಿದ್ದರು. ಗುರುವಾರ 19 ವರ್ಷದೊಳಗಿನವರ ಪ್ರಶಸ್ತಿ ಗೆದ್ದಿದ್ದ ರೋಹಿತ್ ಶಂಕರ್ ಅವರನ್ನು ಸೆಮಿಯಲ್ಲಿ ಆಕಾಶ್ ಮಣಿಸಿದ್ದರು.

ಖುಷಿಗೆ ಆಘಾತ: ಮೊದಲ ರಾಜ್ಯ ರ‍್ಯಾಂಕಿಂಗ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದ ಡಬ್ಲ್ಯುಸಿಟಿಟಿಸಿಯ ಖುಷಿ ವಿ, ಇಲ್ಲಿ ಆಘಾತ ಅನುಭವಿಸಿದರು. ಗುರುವಾರ 19 ವರ್ಷದೊಳಗಿನವರ ವಿಭಾಗದ ಪ್ರಶಸ್ತಿ ಗೆದ್ದಿದ್ದ ಸಹನಾ ಮೂರ್ತಿ ವಿರುದ್ಧ ಕ್ವಾರ್ಟರ್ ಫೈನಲ್‌ನಲ್ಲಿ ಖುಷಿ ಸೋತರು.

ಫಲಿತಾಂಶಗಳು: ಪುರುಷರ ಫೈನಲ್: ಆಕಾಶ್‌ಗೆ ಯಶ್ವಂತ್ ವಿರುದ್ಧ 11-8,11-4,11-4,11-7ರಲ್ಲಿ ಗೆಲುವು. ಸೆಮಿಫೈನಲ್: ಆಕಾಶ್‌ಗೆ ರೋಹಿತ್ ಶಂಕರ್ ವಿರುದ್ಧ 11-8,3-11,6-11,11-4,12-10,11-7ರಲ್ಲಿ, ಯಶ್ವಂತ್‌ಗೆ ಅನಿರ್ಬನ್ ವಿರುದ್ಧ 11-9,5-11,11-8,11-4,6-11,11-3ರಲ್ಲಿ ಜಯ. ಕ್ವಾರ್ಟರ್ ಫೈನಲ್: ಆಕಾಶ್‌ಗೆ ಶ್ರೇಯಲ್ ವಿರುದ್ಧ 7-11,11-7,11-3,9-11,11-7ರಲ್ಲಿ, ಯಶ್ವಂತ್‌ಗೆ ವಿಭಾಸ್ ವಿರುದ್ಧ 11-9,4-11,11-8,11-4ರಲ್ಲಿ, ಅನಿರ್ಬನ್‌ಗೆ ತೇಶುಬ್ ವಿರುದ್ಧ 10-12,11-2,11-9,11-8ರಲ್ಲಿ, ರೋಹಿತ್‌ಗೆ ಕಲೈವಣ್ಣನ್ ವಿರುದ್ಧ 11-9,11-4,11-8ರಲ್ಲಿ ಜಯ. ಮಹಿಳೆಯರ ಫೈನಲ್: ದೇಶ್ನಾಗೆ ಅನರ್ಘ್ಯ ವಿರುದ್ಧ 4-11,11-8,11-5,11-6,13-11ರಲ್ಲಿ ಜಯ. ಸೆಮಿಫೈನಲ್: ದೇಶ್ನಾಗೆ ತೃಪ್ತಿ ವಿರುದ್ಧ 10-12,11-2,11-6,12-10,11-1ರಲ್ಲಿ, ಅನರ್ಘ್ಯಗೆ ಸಹನಾ ಎದುರು 7-11,11-8,7-11,13-11,11-9,11-8ರಲ್ಲಿ ಜಯ. ಕ್ವಾರ್ಟರ್ ಫೈನಲ್: ದೇಶ್ನಾಗೆ ಹಿಮಾಂಶಿ ವಿರುದ್ಧ 9-11,12-10,11-5,12-10ರಲ್ಲಿ, ಅನರ್ಘ್ಯಗೆ ತನಿಷ್ಕಾ ವಿರುದ್ಧ 15-17,12-10,14-12,11-5ರಲ್ಲಿ, ತೃಪ್ತಿಗೆ ಪ್ರೇಕ್ಷಾ ಎದುರು 11-2,11-9,11-4ರಲ್ಲಿ, ಸಹನಾಗೆ ಖುಷಿ ವಿರುದ್ಧ 6-11,11-4,11-5,11-5ರಲ್ಲಿ ಜಯ.